ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 52 | ಡಿಸೆಂಬರ್ 21–27, 2020 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಅಲ್ಪಸಂಖ್ಯಾತರ ಹಕ್ಕುಗಳು ಮಾನವ ಹಕ್ಕುಗಳ ಭಾಗ

International
Minority Rights Day

18th December



RIGHTS OF MINORITIES

ಸಾಮಾಜಿಕ ಸುರಕ್ಷತಾ ಸಂಹಿತೆ – 2020



‘ಖಾತ್ರಿ’ಗಳಿಲ್ಲ ‘ಭರವಸೆ’ಗಳು ಮಾತ್ರ



ರೈತರಿಗೆ ಸ್ವಾತಂತ್ರ್ಯ ಯಾರಿಂದ?



Communal Violence in
North East Delhi,
February 2020
A Report

A CPI(M) Delhi publication

ದಿಲ್ಲಿ ಹಿಂಸಾಚಾರ: ಯಾರು ಹೊಣೆ?

ಕೇರಳ: ಪರ್ಯಾಯ ದಾರಿಯ ವಿಜಯದ ಕಹಳೆ



ಕೇರಳ ಪಂಚಾಯತು ಚುನಾವಣೆಗಳಲ್ಲಿ ಎಲ್.ಡಿ.ಎಫ್.ಗೆ ದೊಡ್ಡ ವಿಜಯ
ನಕಾರಾತ್ಮಕ ಪ್ರಚಾರಕ್ಕೆ ಜನತೆಯ ತಕ್ಕ ಉತ್ತರ: ಸಿಪಿಐ(ಎಂ) ಪೊಲಿಟ್ ಬ್ಯುರೊ



ಕೇರಳದ ಜನತೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಎಡ ಪ್ರಜಾಪ್ರಭುತ್ವ ರಂಗ(ಎಲ್.ಡಿ.ಎಫ್.)ಕ್ಕೆ ಒಂದು ದೊಡ್ಡ ವಿಜಯವನ್ನು ಕೊಟ್ಟಿದ್ದಾರೆ ಎನ್ನುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಮತ್ತು ಅಭಿವಂದನೆಗಳನ್ನು ಸಲ್ಲಿಸಿದೆ. ಎಲ್ಲಾ ಮೂರು ಸ್ತರಗಳ ಪಂಚಾಯತುಗಳಲ್ಲಿ ಎಲ್.ಡಿ.ಎಫ್. ದೊಡ್ಡ ಬಹುಮತಗಳನ್ನು ಗಳಿಸಿದೆ. ಅದು ಆರು ಮಹಾನಗರಪಾಲಿಕೆಗಳಲ್ಲಿ ಐದರಲ್ಲಿ ಗೆಲುವು ಸಾಧಿಸಿದೆ, 14 ಜಿಲ್ಲಾ ಪಂಚಾಯತುಗಳಲ್ಲಿ 11ರಲ್ಲಿ ಮುಂದಿದೆ.

ಕೇರಳದ ಜನತೆ ಎಲ್.ಡಿ.ಎಫ್. ಸರಕಾರದ ಕಾರ್ಯನಿರ್ವಹಣೆಗೆ ತಮ್ಮ ಮಂಜೂರಾತಿಯನ್ನು ದಾಖಲಿಸಿದ್ದಾರೆ. 2018ರ ಗಂಭೀರ ಪ್ರವಾಹ ಮತ್ತು ಕೊವಿಡ್ ಮಹಾಸೋಂಕನ್ನು ನಿಭಾಯಿಸುವಲ್ಲಿ ರಾಜ್ಯ ಸರಕಾರ ಮತ್ತು ಸ್ಥಳೀಯ ಸಂಸ್ಥೆಗಳು ಮಾಡಿರುವ ಕೆಲಸಕ್ಕೆ ಜನಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ಅದು ಈ ಚುನಾವಣಾ ವಿಜಯವನ್ನು ವಿಶ್ಲೇಷಿಸಿದೆ.

ಕಾಂಗ್ರೆಸ್ ನೇತೃತ್ವದ ಯು.ಡಿ.ಎಫ್. ಮತ್ತು ಬಿಜೆಪಿ ಗಳು ಎಲ್.ಡಿ.ಎಫ್. ಸರಕಾರ ಮತ್ತು ಅದರ ನಾಯಕತ್ವದ ವಿರುದ್ಧ ಆಧಾರಹೀನ ಆಪಾದನೆಗಳನ್ನು ಹಾಕಿ ಮಾಡಿದ್ದ ನಕಾರಾತ್ಮಕ ಪ್ರಚಾರ, ಅದಕ್ಕೆ ಬಲಪಂಥೀಯ ಮಾಧ್ಯಮಗಳ ಬೆಂಬಲ ಮತ್ತು ಬಿಜೆಪಿ ಕೇಂದ್ರ ಸರಕಾರ ಅದನ್ನು ನೀತಿಬಾಹಿರವಾಗಿ ಬಳಸಿಕೊಂಡುದಕ್ಕೆ ಕೇರಳದ ಜನತೆ ತಕ್ಕ ಉತ್ತರ ನೀಡಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಜನಕಲ್ಯಾಣ-ಪರ ಆಳ್ವಿಕೆಯಿಂದ ಗಳಿಸಿದ ಚಾರಿತ್ರಿಕ ವಿಜಯ -ಕೇರಳ ರಾಜ್ಯ ಕಾರ್ಯದರ್ಶಿ ಮಂಡಳಿ

ಎಲ್‌ಡಿಎಫ್ ನ ಈ ಚಾರಿತ್ರಿಕ ವಿಜಯ ಎಡರಂಗದ ನೀತಿಬದ್ಧ ನಿಲುವುಗಳು ಮತ್ತು ಕಲ್ಯಾಣ ಪರಿಯೋಜನೆಗಳಿಗೆ ದೊರೆತಿರುವ ಸಾರ್ವಜನಿಕ ಮನ್ನಣೆ ಎಂದು ವರ್ಣಿಸುತ್ತ, ಸಿಪಿಐ(ಎಂ) ಕೇರಳ ರಾಜ್ಯ ಕಾರ್ಯದರ್ಶಿ ಮಂಡಳಿಯು ಕೇಂದ್ರೀಯ ಏಜೆನ್ಸಿಗಳು ಮತ್ತು ಬಲಪಂಥೀಯ ಮಾಧ್ಯಮಗಳ ಸುಳ್ಳು ಪ್ರಚಾರಗಳಿಗೆ ಯೋಗ್ಯ ಚುನಾವಣಾ ಉತ್ತರ ನೀಡಿರುವುದಕ್ಕೆ ಕೇರಳದ ಜನತೆಯನ್ನು ಅಭಿನಂದಿಸುವುದಾಗಿ ಹೇಳಿದೆ.

ಕಾಂಗ್ರೆಸ್ ನೇತೃತ್ವದ ಯುಡಿಎಫ್ ಒಂದೆಡೆಯಲ್ಲಿ ಬಿಜೆಪಿಯೊಂದಿಗೆ ಒಂದು ಗುಪ್ತ ಒಪ್ಪಂದ, ಇನ್ನೊಂದೆಡೆಯಲ್ಲಿ ಮುಸ್ಲಿಂ ಮೂಲಭೂತವಾದಿ ವೆಲ್‌ಫೇರ್ ಪಾರ್ಟಿಯೊಂದಿಗೆ ಬಹಿರಂಗ ಮೈತ್ರಿಯೊಂದಿಗೆ ಚುನಾವಣಾ ಕಣಕ್ಕೆ ಇಳಿದಿತ್ತು. ಅದು ಹಿಂದೂರಾಷ್ಟ್ರದ ಪ್ರತಿಪಾದಕರು ಮತ್ತು ಇಸ್ಲಾಮೀ ಪ್ರಭುತ್ವದ ಹೂಜಿಗಳ ನಡುವೆ ಸೇತುವೆಯಾಗಿ ಕೇರಳವನ್ನು ಒಡೆಯಲು ಪ್ರಯತ್ನಿಸಿತು. ರಾಜ್ಯದ ಆರು ಮಹಾನಗರಪಾಲಿಕೆಗಳಲ್ಲಿ ಹಲವೆಡೆಗಳಲ್ಲಿ ಕಾಂಗ್ರೆಸ್ ತನ್ನ ಮತಗಳನ್ನು ಬಿಜೆಪಿ ಪರವಾಗಿ ತಿರುಗಿಸಿತು. ಆದರೆ ಇವ್ಯಾವುದೂ ಎಲ್‌ಡಿಎಫ್‌ನ ಚಾರಿತ್ರಿಕ ವಿಜಯವನ್ನು ತಡೆಯಲು ಸಫಲವಾಗಲಿಲ್ಲ. ಜನಗಳು ಎಲ್‌ಡಿಎಫ್‌ನ ಜಾತ್ಯಾತೀತ ನಿಲುವಿನ ಪರವಾಗಿ ನಿಂತಿದ್ದಾರೆ.

ಇನ್ನು ಮಾಧ್ಯಮಗಳು ತಮ್ಮ ದ್ವೇಷಪೂರ್ಣ ಪ್ರಚಾರಕ್ಕಾಗಿ ಈ ಎರಡು ವೈಪರೀತ್ಯಗಳಲ್ಲಿ ತೊಡಗಲೂ ಹಿಂಜರಿಯಲಿಲ್ಲ. ಆದರೆ ಸಾರ್ವಜನಿಕರು ಅವರ ಸುಳ್ಳಿನ ಜಾಲದಲ್ಲಿ ಸಿಲುಕಲಿಲ್ಲ ಎಂದು ಚುನಾವಣಾ ಫಲಿತಾಂಶಗಳು ತೋರಿಸಿವೆ. ಈಗಲಾದರೂ ಅವು ತಮ್ಮನ್ನು ತಿದ್ದಿಕೊಂಡು ಸರ್ವಜನಿಕರ ವಿಶ್ವಾಸವನ್ನು ಮತ್ತೆ ಗಳಿಸಲು ಪ್ರಯತ್ನಿಸಲಿ ಎಂದು ಕಾರ್ಯದರ್ಶಿ ಮಂಡಳಿ ಸಲಹೆ ಮಾಡಿದೆ.

ಸಿಬಿಐ, ಇಡಿ ಮುಂತಾದ ಕೇಂದ್ರೀಯ ಸಂಸ್ಥೆಗಳನ್ನು ಬಳಸಿಕೊಂಡು ಬಿಜೆಪಿ ರಾಜ್ಯದಲ್ಲಿ ಎಲ್‌ಡಿಎಫ್ ಸರಕಾರ ಆರಂಭಿಸಿದ ಕಲ್ಯಾಣ ಪರಿಯೋಜನೆಗಳನ್ನು ಹಾಳುಗೆಡವಲು ಪ್ರಯತ್ನಿಸಿತು. ರಮೇಶ್ ಚೆನ್ನಿತಾಲ ನೇತೃತ್ವದಲ್ಲಿ ಕಾಂಗ್ರೆಸ್ ಕೂಡ ಅದರೊಂದಿಗೆ ಕೈಜೋಡಿಸಲು ಮುಂದಾಯಿತು. ಆದ್ದರಿಂದಲೇ ಕೇರಳದ ಮತದಾರರು ಅದಕ್ಕೆ ಕೈಕೊಟ್ಟರು ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಅಭಿಪ್ರಾಯ ಪಟ್ಟಿದೆ.

ಈ ಬೃಹತ್ ವಿಜಯದ ನಡುವೆಯೂ ಕೆಲವೆಡೆಗಳಲ್ಲಿ ಎಲ್‌ಡಿಎಫ್ ನಿರೀಕ್ಷಿತ ಗೆಲುವನ್ನು ಏಕೆ ಗಳಿಸಲಿಲ್ಲ ಎಂಬುದರ ಬಗ್ಗೆಯೂ ಪಕ್ಷ ಪರೀಕ್ಷಿಸುತ್ತದೆ ಮತ್ತು ಸರಿಪಡಿಕೆ ಕ್ರಮಗಳನ್ನು ಕೈಗೊಳ್ಳುತ್ತದೆ ಎಂದೂ ಅದು ಹೇಳಿದೆ.

ರೈತರ ಒಗ್ಗಟ್ಟು ಮತ್ತು ಹೋರಾಟ ಇನ್ನಷ್ಟು ಗಟ್ಟಿಗೊಳ್ಳುತ್ತದೆ – ಕೇಂದ್ರ ಸರಕಾರಕ್ಕೆ ಎ.ಐ.ಕೆ.ಎಸ್. ಎಚ್ಚರಿಕೆ

ರೈತರ ಒಗ್ಗಟ್ಟನ್ನು ಮುರಿಯುವ, ಅವರನ್ನು ವಿಭಜಿಸುವ ಕೇಂದ್ರ ಸರಕಾರದ ಪ್ರಯತ್ನಗಳೆಲ್ಲವೂ ವಿಫಲವಾಗುತ್ತವೆ, ದೇಶಿ-ವಿದೇಶಿ ಕಾರ್ಪೊರೇಟ್‌ಗಳಿಗಾಗಿ ತಂದಿರುವ ಕಾಯ್ದೆಗಳು ರದ್ದಾಗುತ್ತವೆ ಎಂಬುದನ್ನು ದೇಶಾದ್ಯಂತ ತೀವ್ರಗೊಳ್ಳುತ್ತಿರುವ ರೈತ ಆಂದೋಲನ ಈಗಾಗಲೇ ಸ್ಪಷ್ಟಪಡಿಸಿದೆ ಎಂದು ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷ ಅಶೋಕ ಧವಳೆ ಮತ್ತು ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಹೇಳಿದ್ದಾರೆ. ಅವರು ಎಐಕೆಎಸ್ ದಿಲ್ಲಿಯಲ್ಲಿ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತಾಡುತ್ತಿದ್ದರು.



ಜನಗಳನ್ನು ದಾರಿ ತಪ್ಪಿಸಲು ಮೋದಿ ಸರಕಾರ ಯಾವ ರೈತ ಮುಖಂಡರ ಬೆಂಬಲವನ್ನು ತೋರಿಸುತ್ತಿದೆಯೋ ಅವರ ಹಿಂದೆ ಐದು ರೈತರೂ ಇಲ್ಲ. ಇಂತಹ ಕಾಗದದ ಮೇಲೆ ಮಾತ್ರವೇ ಇರುವ ಸಂಘಟನೆಗಳನ್ನು ತೋರಿಸಿ ಸರಕಾರ ನಡೆಸುತ್ತಿರುವ ಕಸರತ್ತಿನ ಹಿಂದೆ ಅಡಗಿರುವ ಅದರ ದುರುದ್ದೇಶವನ್ನು 19 ದಿನಗಳಿಂದ ದಿಲ್ಲಿಯ ಗಡಿಗಳಲ್ಲಿ ಶಾಂತಿಯುತವಾಗಿ ಕೂತಿರುವ ಲಕ್ಷಾಂತರ ರೈತರು ಈಗಾಗಲೇ ಜಗತ್ತಿನ ಎದುರು ಬಯಲಿಗೆಳೆದಿದ್ದಾರೆ ಎಂದು ಅಶೋಕ ಧವಳೆ ಹೇಳಿದರು.

ಅಶ್ರುವಾಯು, ಜಲಫಿರಂಗಿ, ಬಂಧನಗಳು ಸೇರಿದಂತೆ ದಮನದ ಎಲ್ಲ ಉಪಕರಣಗಳನ್ನು ಬಳಸಿ ವಿಫಲವಾದ ಮೋದಿ-ಷಾ, ನಂತರ ರೈತರನ್ನು ಖಲಿಸ್ತಾನಿಗಳು, ಪಾಕಿಸ್ತಾನದ ಬೆಂಬಲಿಗರು ದೇಶದ್ರೋಹಿಗಳು ಎಂದೂ ಕರೆದು ಹೆಸರುಗೆಡಿಸುವ ತಮ್ಮ ಚಾಳಿಯನ್ನೂ ಪ್ರಯೋಗಿಸಿ ನೋಡಿದರು. ಆದರೆ ಅವುಗಳಿಂದಲೂ ಪ್ರಯೋಜನ ಸಿಗದಾಗ ಈಗ ರೈತ ಚಳುವಳಿಯಲ್ಲಿ ಬಿರುಕು ಉಂಟಾಗಿದೆ ಎಂಬ ಅಪಪ್ರಚಾರಕ್ಕೆ ಇಳಿದಿದ್ದಾರೆ ಎಂದು ಅವರು ಗೇಲಿ ಮಾಡಿದರು.



ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಮಾತಾಡುತ್ತ ಈ ರೈತ ಚಳುವಳಿ ಇತಿಹಾಸ ನಿರ್ಮಿಸಿದೆ ಎಂದು ಅಭಿನಂದಿಸಿದರು. ಇದು ರೈತ ಕೃಷಿಗೆ ಸಂಬಂಧಪಟ್ಟ ಎಲ್ಲರ ಅಭೂತಪೂರ್ವ ಐಕ್ಯತೆಯನ್ನು ದಾಖಲಿಸಿದೆ, ನವ-ಉದಾರವಾದಿ ಧೋರಣೆಗಳ ವಿರುದ್ಧ ಕೃಷಿ ಸಮುದಾಯದ ಒಗ್ಗಟ್ಟನ್ನೂ ಗಟ್ಟಿಗೊಳಿಸಿದೆ. ಕಾರ್ಪೊರೇಟ್-ಪರ ಕಾಯ್ದೆಗಳನ್ನು ತಂದು ದೇಶದ ಒಕ್ಕೂಟ ಸ್ವರೂಪಕ್ಕೆ ಧಕ್ಕೆ ತಂದು ಈ ಸರಕಾರ ಬಂಡವಾಳಶಾಹಿಗಳು ಮತ್ತು ರೈತಾಪಿಗಳ ನಡುವಿನ ವೈರುಧ್ಯವನ್ನು ತೀಕ್ಷ್ಣಗೊಳಿಸಿದೆ ಎಂದು ಮುಂದುವರೆದು ಅವರು ಹೇಳಿದರು. ದೊಡ್ಡ ರೈತರು ಮತ್ತು ಬಂಡವಳಿಗ ರೈತರ ಒಂದು ದೊಡ್ಡ ವಿಭಾಗ ಕೂಡ ಈ ಕಾಯ್ದೆಗಳ ವಿರುದ್ಧ ನಿಂತಿದ್ದಾರೆ. ಪ್ರಾದೇಶಿಕ ಪಕ್ಷಗಳೂ ಬಿಜೆಪಿಯ ವಿರುದ್ಧ ಸೆಟೆದು ನಿಂತಿವೆ. **ಬಿಜೆಪಿ ಎಷ್ಟೊಂದು ಒಂಟಿಯಾಗಿ ಬಿಟ್ಟಿದೆ ಎಂಬುದನ್ನು ಡಿಸೆಂಬರ್ 8ರ ಅಸಾಧಾರಣ ಭಾರತ್ ಬಂದ್ ಸಾಬೀತು ಮಾಡಿದೆ** ಎಂದು ಅವರು ಹೇಳಿದರು.

ಮತ್ತೊಂದು ವೈಶಿಷ್ಟ್ಯ: ರೈತ-ಕಾರ್ಮಿಕ ಐಕ್ಯತೆ


ಈ ನಡೆದಿರುವ ಸಂಘರ್ಷದ ಮತ್ತೊಂದು ವೈಶಿಷ್ಟ್ಯವೆಂದರೆ ರೈತರು ಮತ್ತು ಕಾರ್ಮಿಕರ ಒಗ್ಗಟ್ಟು. ಸಪ್ಟಂಬರ್‌ನಲ್ಲಿ ಸಂಸತ್ ಅಧಿವೇಶನದಲ್ಲಿ ಒಂದರ ಮೇಲೊಂದರಂತೆ ಕೃಷಿ ಮಸೂದೆಗಳನ್ನು ಪಾಸು ಮಾಡಿದಿಕೊಳ್ಳುವ ಜತೆಗೇ ಕಾರ್ಮಿಕ ಕಾನೂನುಗಳನ್ನೆಲ್ಲ ರದ್ದು ಮಾಡಿ ಕಾರ್ಮಿಕ ಸಂಹಿತೆಗಳನ್ನು ಪಾಸು ಮಾಡಿಸಿಕೊಂಡಿರುವುದು ಮೋದಿ ಸರಕಾರ ನಗ್ನ ಕಾರ್ಪೊರೇಟ್ ಪರ ಧೋರಣೆಗಳನ್ನು ತಳೆದಿದೆ ಎಂಬುದನ್ನು ಎತ್ತಿ ತೋರಿದೆ. **ಸರಕಾರದ ಈ ನಡೆ ಎರಡೂ ದುಡಿಯುವ ಜನವಿಭಾಗಗಳನ್ನು ನೇರ ಸಂಘರ್ಷಕ್ಕೆ ಇಳಿಯುವಂತೆ ಮಾಡಿದೆ. ಈ ಎರಡು ವರ್ಗಗಳ ನಡುವಿನ ಒಗ್ಗಟ್ಟು ರೈತ ಚಳುವಳಿಯಲ್ಲಿ ಮತ್ತು ನವಂಬರ್ 26ರ ಸಾರ್ವತ್ರಿಕ ಮುಷ್ಕರದಲ್ಲಿ ಸ್ಪಷ್ಟವಾಗಿ ಕಂಡು ಬಂದಿದೆ** ಎಂದು ಹನ್ನನ್ ಮೊಲ್ಲ ಹೇಳಿದರು.

ಇಂತಹ ಸಂಘರ್ಷ ಈಗ ಜಗತ್ತಿನಾದ್ಯಂತ ಕೂಡ ಕಾಣ ಬರುತ್ತಿದೆ. ಬಂಡವಾಳಶಾಹಿ ವ್ಯವಸ್ಥೆ ಒಂದು ಬಿಕ್ಕಟ್ಟಿನ ಪರಿಸ್ಥಿತಿಯನ್ನು ತಲುಪಿದೆ ಇದು ತೋರಿಸುತ್ತದೆ ಎಂದು ಇಬ್ಬರೂ ಎಐಕೆಎಸ್ ನಾಯಕರು ಅಭಿಪ್ರಾಯ ಪಟ್ಟರು. ಈ ಬಿಕ್ಕಟ್ಟಿನ ಪರಿಸ್ಥಿತಿಯಿಂದ ಹೊರಬರಲು ಬಹುರಾಷ್ಟ್ರೀಯ ಕಾರ್ಪೊರೇಟ್‌ಗಳು ಸಮಾಜದ ಈ ಎರಡು ಮೂಲ ವರ್ಗಗಳ ಆದಾಯಗಳ ಮೇಲೆ, ಜೀವನೋಪಾಯಗಳ ಮೇಲೆ ದಾಳಿ ಮಾಡುತ್ತಿವೆ. ಆದ್ದರಿಂದಲೇ ಈ ಚಳುವಳಿ ಕಾರ್ಪೊರೇಟ್‌ಗಳ ವಿರುದ್ಧ ದನಿ ಎತ್ತಿದೆ, ಅಂಬಾನಿ-ಅದಾನಿಗಳ ಉತ್ಪನ್ನಗಳ ಮತ್ತು ಸೇವೆಗಳ ಬಹಿಷ್ಕಾರಕ್ಕೆ ಕರೆ ನೀಡಲಾಗಿದೆ.

'ದುರ್ಬಲ, ವಿಫಲ ಆಡಳಿತಗಾರ'

ಮೋದಿ ಸರಕಾರ ಈ ಮೂರು ಕಾಯ್ದೆಗಳನ್ನು ಹಿಂತೆಗೆದುಕೊಳ್ಳಲು ನಿರಾಕರಿಸುತ್ತ ಅಹಂಕಾರ ಪ್ರದರ್ಶನ ಮಾಡಿದರೆ ಅದರ ಪರಿಣಾಮಗಳನ್ನು ಮುಂದೆ ಎದುರಿಸಬೇಕಾಗುತ್ತದೆ ಎಂದು ಇಬ್ಬರೂ ರೈತ ನಾಯಕರು ಎಚ್ಚರಿಕೆ ನೀಡಿದರು. ಹೆಚ್ಚೆಚ್ಚು ಜನವಿಭಾಗಗಳು ಈ ಹೋರಾಟವನ್ನು ಸೇರಿಕೊಳ್ಳುತ್ತಾರೆ. ಕಾರ್ಪೊರೇಟ್‌ಗಳ ಬಿಗಿಮುಷ್ಠಿಯಲ್ಲಿ ಸಿಲುಕಿರುವ ನರೇಂದ್ರ ಮೋದಿ 8 ಡಿಗ್ರಿ ಕೊರೆಯುವ ಚಳಿಯಲ್ಲಿ ಕೂತಿರುವ ಲಕ್ಷಾಂತರ ರೈತರ ಸಂಘರ್ಷವನ್ನು ಪರಿಹರಿಸುವ ಸಾಮರ್ಥ್ಯವಿಲ್ಲದ ಒಬ್ಬ ದುರ್ಬಲ ಮತ್ತು ವಿಫಲ ಆಡಳಿತಗಾರ ಎಂಬುದನ್ನು ರೈತ ಚಳುವಳಿ ಸಾಬೀತು ಮಾಡಿದೆ.

ಮೋದಿ ಸರಕಾರ ತನ್ನ ಮೊಂಡುತನವನ್ನು ಬಿಟ್ಟು ದೇಶದ ಪ್ರಜಾಪ್ರಭುತ್ವ ಪರಂಪರೆಯನ್ನು ನಿಭಾಯಿಸಬೇಕು ಎಂದು ಎಐಕೆಎಸ್ ಆಗ್ರಹಿಸಿದೆ.



"ಕಾರ್ಪೊರೇಟ್‌ಗಳ ಬಿಗಿ ಮುಷ್ಠಿಯಲ್ಲಿ ಸಿಲುಕಿರುವ ನರೇಂದ್ರ ಮೋದಿ 8 ಡಿಗ್ರಿ ಕೊರೆಯುವ ಚಳಿಯಲ್ಲಿ ಕೂತಿರುವ ಲಕ್ಷಾಂತರ ರೈತರ ಸಂಘರ್ಷವನ್ನು ಪರಿಹರಿಸುವ ಸಾಮರ್ಥ್ಯವಿಲ್ಲದ ಒಬ್ಬ ದುರ್ಬಲ ಮತ್ತು ವಿಫಲ ಆಡಳಿತಗಾರ ಎಂಬುದನ್ನು ರೈತ ಚಳುವಳಿ ಸಾಬೀತು ಮಾಡಿದೆ."

ವ್ಯಂಗ್ಯಚಿತ್ರ: ಪಿ. ಮಹಮ್ಮದ್, ವಾರ್ತಾಭಾರತಿ

ಸಂಪಾದಕೀಯ

ರೈತರಿಗೆ ಸ್ವಾತಂತ್ರ್ಯ ಸಿಕ್ಕಿದ್ದು ಯಾರಿಂದ?

"ದೇಶವಾಸಿಗಳೆ, ಕೇಳಿ ನನ್ನ 'ಮನ್ ಕಿ ಬಾತ್.' ವಿರೋಧ ಪಕ್ಷಗಳ ಮಾತು ಕೇಳಬೇಡಿ. ಅವರು ನಿಮ್ಮ ದಾರಿ ತಪ್ಪಿಸುತ್ತಾರೆ. ನಾನು ಮತ್ತು ನನ್ನ ಸರ್ಕಾರ ರೈತರ ಪರವಾಗಿದೆ. ರೈತರಿಗೆ ಸ್ವಾತಂತ್ರ್ಯವನ್ನು ದಯಪಾಲಿಸಿದವನು. ನಾನಲ್ಲದೆ ಮತ್ತ್ಯಾರು?" ಮನ್ ಕಿ ಬಾತ್ ಹಾಗೆಯೇ ಮುಂದುವರೆಯುತ್ತದೆ.

ಅಗಸ್ಟ್ 15, 1947 ರಂದು ರೈತರಿಗೆ ಸ್ವಾತಂತ್ರ್ಯ ದೊರಕಿರಲಿಲ್ಲವಂತೆ! ರೈತರಿಗೆ ಸ್ವಾತಂತ್ರ್ಯ ದೊರಕಿದ್ದು ಈಗಷ್ಟೇಯಂತೆ! ಜೂನ್ 3 2020 ರಂದು ಸಂಸತ್ತಿನಲ್ಲಿ, ಯಾವುದೇ ಚರ್ಚೆ ಇಲ್ಲದೆ, ಕೇವಲ ಧ್ವನಿಮತದ ಮೂಲಕ ಅಂಗೀಕರಿಸಲಾದ ಮೂರು ಕೃಷಿ ಮಸೂದೆಗಳ ಮೂಲಕವಷ್ಟೆ ರೈತರಿಗೆ ತಮ್ಮ ಕೃಷಿ ಉತ್ಪನ್ನಗಳನ್ನು ದೇಶದಲ್ಲಿ ಎಲ್ಲಿ ಬೇಕಾದರೂ ಮಾರಾಟ ಮಾಡುವ ಸ್ವಾತಂತ್ರ್ಯ ಲಭಿಸಿತಂತೆ. ಅಂದರೆ ಇನ್ನು ಮುಂದೆ ರೈತರು ತಮ್ಮ ಉತ್ಪನ್ನಗಳನ್ನು ಎಪಿಎಂಸಿ ಆವರಣಕ್ಕೆ ತರಬೇಕಾಗಿಲ್ಲ. ಎಪಿಎಂಸಿ ಗಳ ಹೊರಗೆ ಎಲ್ಲಿ ಬೇಕಾದರೆ ಅಲ್ಲಿ ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ಸಾಗಿಸಿ ಹೆಚ್ಚಿನ ಬೆಲೆಗೆ ಮಾರಾಟಮಾಡಿ ಲಾಭಮಾಡಿಕೊಳ್ಳಬಹುದು ಎಂಬುದು ಪ್ರಧಾನಿ ಮೋದಿ ಸಮರ್ಥಿಸುತ್ತಿರುವ ಹೊಸ ಕೃಷಿ ಕಾನೂನುಗಳ ಮೋಸ. ಇದೊಂದು ಬಾರಿ ದೊಡ್ಡ ಮೋಸ. ಎಪಿಎಂಸಿಗಳನ್ನು ಕ್ರಮೇಣ ಬಂದ್ ಮಾಡಿ ಕೃಷಿ ಮಾರುಕಟ್ಟೆಯನ್ನು ಲಾಭಕೋರ ಕಾರ್ಪೋರೇಟ್ ಕಂಪನಿಗಳಿಗೆ ಒಪ್ಪಿಸುವ ಹುನ್ನಾರ!

ಎಪಿಎಂಸಿ ಕಾಯ್ದೆ ಬಂದ ದಿನಗಳಿಂದಲೂ ರೈತರು ತಮ್ಮ ಬಹುತೇಕ ಕೃಷಿ ಉತ್ಪನ್ನಗಳನ್ನು ಎಪಿಎಂಸಿ ಪ್ರಾಂಗಣದ ಹೊರಗಡೆಯೂ ಮಾರಾಟ ಮಾಡುತ್ತಾ ಬಂದಿದ್ದಾರೆ. ಆದರೆ ರೈತರ ಈ ಪ್ರಯತ್ನ ಅವರಿಗೆ ಲಾಭದಾಯಕ ಬೆಲೆ ದೊರಕಿಸಲಿಲ್ಲ. ರೈತರ ಶೋಷಣೆ ನಿಲ್ಲಲಿಲ್ಲ. ದೊಡ್ಡ ವರ್ತಕರ ಹಾಗೂ ಖರೀದಿದಾರರ ಏಕಸ್ವಾಮ್ಯವನ್ನು ತಡೆಯಲು 1960 ರ ದಶಕದಲ್ಲಿ ಎಪಿಎಂಸಿ ಕಾಯ್ದೆಯನ್ನು ತರಲಾಯಿತು. ದರ ನಿಗದಿ, ಗುಣಮಟ್ಟ ನಿರ್ಧರಿಸುವುದು, ತೂಕ ಹಾಗೂ ಪಾವತಿಯಲ್ಲಿ ರೈತರ ಶೋಷಣೆಯಾಗದಂತೆ ಖಾತರಿ ಪಡಿಸುವುದು ಇದರ ಉದ್ದೇಶವಾಗಿತ್ತು. ಆದರೆ ಈ ಕಾಯ್ದೆ ಸಮರ್ಪಕವಾಗಿ ಜಾರಿಯಾಗಲೇ ಇಲ್ಲ. ರೈತರ ಸುಲಿಗೆ ನಿಲ್ಲಲಿಲ್ಲ. ಆದರೆ ಎಪಿಎಂಸಿಗಳಲ್ಲಿ ಹರಾಜು ವ್ಯವಸ್ಥೆಯನ್ನು ಜಾರಿಮಾಡಿದ ಪರಿಣಾಮವಾಗಿ ಕೃಷಿ ಉತ್ಪನ್ನಗಳ ಖರೀದಿಯಲ್ಲಿ ಹೆಚ್ಚಿನ ಸ್ಪರ್ಧೆ ಉಂಟಾಯಿತು. ಇದರಿಂದ ರೈತರಿಗೆ ಸ್ವಲ್ಪ ಅನುಕೂಲವಾಯಿತು. ಆದರೆ ಎಪಿಎಂಸಿಗಳು ರೈತರಿಗೆ ಕನಿಷ್ಠ ಬೆಂಬಲ ಬೆಲೆ (MSP) ಯನ್ನು ಖಾತರಿ ಪಡಿಸಲಿಲ್ಲ. ಈಗ ತರಲಾದ ಹೊಸ ಕಾಯ್ದೆಯಿಂದಾಗಿ ರೈತರು ಎಪಿಎಂಸಿಗಳ ವ್ಯಾಪ್ತಿಯ ಹೊರಗೆ ಯಾರಿಗೆ ಬೇಕಾದರೂ ಮಾರಾಟ ಮಾಡಬಹುದಾಗಿದೆ. ಅಲ್ಲಿ ರೈತರು ದೊಡ್ಡ ಖರೀದಿದಾರನ್ನು ಎದುರಿಸಬೇಕಾಗುತ್ತದೆ. ಅವರು ರೈತರಿಗೆ ಕನಿಷ್ಠ ಬೆಂಬಲ ಬೆಲೆ ನೀಡುವುದನ್ನು ಕಡ್ಡಾಯಗೊಳಿಸಲಾಗಿಲ್ಲ. ಕನಿಷ್ಠ ಬೆಂಬಲಬೆಲೆ ನೀಡದಿರುವುದನ್ನು ಶಿಕ್ಷಾರ್ಹ ಅಪರಾಧ ಎಂದು ಘೋಷಿಸಲಾಗಿಲ್ಲ.

ದೆಹಲಿ ಹೋರಾಟನಿರತ ರೈತರು ಒತ್ತಾಯಿಸುತ್ತಿರುವುದು ಇದನ್ನೇ. ಮೋದಿಯವರ ಕಾನೂನಿನಲ್ಲಿ ರೈತರಿಗೆ ಕನಿಷ್ಠ ಬೆಂಬಲ ಬೆಲೆಯ ಭರವಸೆಯೂ ಇಲ್ಲ. ಡಾ॥ ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನ ಪ್ರಕಾರ ಲಾಭದಾಯಕ ಬೆಲೆ (ಒಟ್ಟು ಖರ್ಚು ಮತ್ತು 50% ಲಾಭ) ನೀಡುವ ಭರವಸೆಯೂ ಇಲ್ಲ. ಸರ್ಕಾರ ರೈತರಿಂದ ದೊಡ್ಡ ಪ್ರಮಾಣದಲ್ಲಿ ಖರೀದಿ ಮಾಡುವ ಪ್ರಶ್ನೆಯೂ ಇಲ್ಲ. ಸರ್ಕಾರ ಮಾರುಕಟ್ಟೆಗೆ ಪ್ರವೇಶ ಮಾಡಿ ರೈತರ ಕೃಷಿ ಉತ್ಪನ್ನಗಳನ್ನು ಖರೀದಿ ಮಾಡಿದರೆ ಮಾತ್ರ ಮಾರುಕಟ್ಟೆಯಲ್ಲಿ ಸ್ಪರ್ಧೆ ನಿರ್ಮಾಣವಾಗಿ ರೈತರಿಗೆ ಒಳ್ಳೆಯ ಬೆಲೆ ಸಿಗಬಹುದಾಗಿದೆ. ಸರ್ಕಾರ ಖರೀದಿ ಮಾಡುವುದನ್ನು ನಿಲ್ಲಿಸಿದರೆ ಸಾರ್ವತ್ರಿಕ ಪಡಿತರ (ರೇಷನ್) ವ್ಯವಸ್ಥೆಯೂ ಕುಸಿದು ಬೀಳಲಿದೆ. ಮೋದಿಯವರ ಯೋಜನೆ ಪ್ರಕಾರವೇ ಎಲ್ಲವೂ ನಡೆದರೆ ಕ್ರಮೇಣ ಎಪಿಎಂಸಿ ಗಳು ಬಂದ್ ಆಗಲಿದ್ದು ರೈತರು ದೊಡ್ಡ ಖರೀದಿದಾರರು ಎಂಬ ಕಾರ್ಪೋರೇಟ್ ಕಂಪೆನಿಗಳಿಗೆ ಬಲಿಪಶುಗಳಾಗುವರು. ಎಪಿಎಂಸಿ ಬಂದ್ ಆಗುವುದರಿಂದ ಅಲ್ಲಿ ಕೆಲಸಮಾಡಿ ಜೀವನ ಸಾಗಿಸುತ್ತಿದ ಲಕ್ಷಾಂತರ ಹಮಾಲಿ ಕಾರ್ಮಿಕರು, ಇತರ ಸಿಬ್ಬಂಧಿಗಳು ಕೆಲಸ ಕಳೆದುಕೊಂಡು ಬೀದಿ ಪಾಲಾಗುವರು.

ಕಾರ್ಪೋರೇಟ್ ಕಂಪೆನಿಗಳಿಂದ ರೈತರಿಗೆ ಮೋಸ ಆಗುವುದನ್ನು ತಡೆಯಲು ಮೋದಿಯವರು ಇನ್ನೊಂದು ಕಾಯ್ದೆಯಲ್ಲಿ ಪರಿಹಾರ ಸೂಚಿಸುತ್ತಾರೆ. ಮೋದಿಯವರು ಜಾರಿಗೆ ತರಲು ಹೊರಟಿರುವ ಇನ್ನೊಂದು ಕಾಯ್ದೆಯಲ್ಲಿ ಇರುವ ಪರಿಹಾರ ರೋಗಕ್ಕಿಂತ ಭಯಾನಕವಾಗಿದೆ. ದೊಡ್ಡ ಖರೀದಿದಾರ ಕಂಪೆನಿಗಳು ರೈತರಿಗೆ ಮೋಸ ಮಾಡುವುದನ್ನು ತಡೆಯಲು ಅವರೊಂದಿಗೆ ಪೂರ್ವ ಭಾವಿ ಒಪ್ಪಂದ ಮಾಡಿಕೊಳ್ಳಬಹುದು. (Futures Trading) ಈ ಒಪ್ಪಂದದ ಕೃಷಿಯಲ್ಲಿ ಬೀಜ, ಗೊಬ್ಬರ, ಕ್ರಿಮಿನಾಶಕ, ತಂತ್ರಜ್ಞಾನವನ್ನು ಖರೀದಿದಾರ ಕಂಪೆನಿಯೇ ಒದಗಿಸುತ್ತದೆ. ಉತ್ಪನ್ನದ ಗುಣಮಟ್ಟ ಅವರೇ ನಿರ್ಧರಿಸುತ್ತಾರೆ. ಗುಣಮಟ್ಟ ಒಪ್ಪಂದದ ಪ್ರಕಾರ ಇಲ್ಲವೆಂದು ಉತ್ಪನ್ನವನ್ನು ಖರೀದಿ ಮಾಡಲು ಖರೀದಿದಾರ ಕಂಪೆನಿ ತಿರಸ್ಕರಿಸಬಹುದು ಅಥವ ಒಪ್ಪಂದಕ್ಕೆ ತಕ್ಕಂತೆ ಬೆಲೆ ನೀಡಲು ನಿರಾಕರಿಸಬಹುದು. ವಿವಾದಗಳನ್ನು ಇತ್ಯರ್ಥಪಡಿಸಲು ವೇದಿಕೆಯನ್ನು ಒದಗಿಸಲಾಗುವುದು. ವಿದೇಶಿ ಕಂಪನಿಯಾದರೆ ಅದು ತನ್ನ ದೇಶದ ನ್ಯಾಯಾಲಯದಲ್ಲಿ ದಾವೆ ಹೂಡಬಹುದು. ರೈತರು ನ್ಯಾಯಾಲಯಗಳಿಗೆ ಅಲೆದಾಡಿ, ಬೇಸತ್ತು ಆತ್ಮಹತ್ಯೆಯಲ್ಲಿ ಶಾಶ್ವತ ಪರಿಹಾರ ಕಾಣಬಹುದು. ಇಂತಹ ಕಾನೂನುಗಳಿಂದ ರೈತರ ಹಿತಸಾಧನೆ ಸಾಧ್ಯವೇ.

ಮೂರನೇ ಕಾನೂನೊಂದರಲ್ಲಿ ಅಗತ್ಯವಸ್ತುಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿಕೊಳ್ಳಲು ಅವಕಾಶ ಕಲ್ಪಿಸುತ್ತದೆ. ಹಿಂದಿನ ಕಾನೂನಿನಲ್ಲಿ ಆಹಾರ ಧಾನ್ಯಗಳು ಮೊದಲಾದ ಅಗತ್ಯ ವಸ್ತುಗಳನ್ನು ಬಚ್ಚಿಟ್ಟುಕೊಂಡು, ಗ್ರಾಹಕರ ಮಾರುಕಟ್ಟೆಯಲ್ಲಿ ಕೃತಕ ಅಭಾವವನ್ನು ಸೃಷ್ಟಿಸಿ ಕಾಳಸಂತೆಯಲ್ಲಿ ಬೆಲೆಗಳನ್ನು ವ್ಯಾಪಕವಾಗಿ ಏರಿಸಿ ದೇಶದ ಸಾಮಾನ್ಯ ಗ್ರಾಹಕರನ್ನು ಕೊಳ್ಳೆ ಹೊಡೆಯಲು ಅವಕಾಶವಿರಲಿಲ್ಲ. ಈಗ ಸದರಿ ಕಾನೂನಿಗೆ ತಿದ್ದುಪಡಿ ತಂದು ಹಿಂದಿನ ಎಲ್ಲ ನಿರ್ಬಂಧಗಳನ್ನು ಕಿತ್ತುಹಾಕಲಾಗಿದೆ. ಇದರಿಂದ ಕಪ್ಪುಹಣದ ಖದೀಮರಿಗೆ, ಅಕ್ರಮ ದಾಸ್ತಾನುದಾರರಿಗೆ, ಕಾಳಸಂತೆಕೋರರಿಗೆ ತಮ್ಮ ಲೂಟಿಯನ್ನು ನಿರಾತಂಕವಾಗಿ ಮುಂದುವರಿಸಲು ಸ್ವಾತಂತ್ರ್ಯದೊರಕಿದೆ. ರೈತರ ಪಾಲಿಗೆ ಈ ಕಾನೂನುಗಳು ಮರಣ ಶಾಸನವಾಗಲಿವೆ.

ಆದ್ದರಿಂದಲೇ ಸುಧಾರಣೆಗಳೆಂಬ ಹೆಸರಿನಲ್ಲಿ ಬರುತ್ತಿರುವ ಈ ಹೊಸ ಕೃಷಿ ಕಾನೂನುಗಳನ್ನು ಬಂಡವಾಳಗಾರರು ಮುಕ್ತ ಕಂಠದಿಂದ ಹಾಡಿ ಹೊಗಳುತ್ತಿದ್ದಾರೆ. ರೈತರು ಕೊರೆಯುವ ಚಳಿಯಲ್ಲಿ ಈ ದೇಶದ್ರೋಹಿ ಕಾನೂನುಗಳನ್ನು ಹಿಂಪಡೆಯಲು ಒತ್ತಾಯಿಸುತ್ತಿದ್ದಾರೆ. ಮೋದಿಯವರ ನಿಷ್ಠಾವಂತ ಶಿಷ್ಯ ಯಡಿಯೂರಪ್ಪ ರಾಜ್ಯದಲ್ಲಿ ಅದೇ ದಾಟಿಯ ಕಾನೂನುಗಳನ್ನು ಜಾರಿ ಮಾಡುವ ಆತುರದಲ್ಲಿದ್ದಾರೆ. ಕರ್ನಾಟಕ ಯಡಿಯೂರಪ್ಪ ರವರಿಗೆ ಪಾಠ ಕಲಿಸಲು ಸಜ್ಜಾಗುತ್ತಿದೆ.

ವಿಧಾನ ಪರಿಷತ್ ಗದ್ದಲ, ರಾಜ್ಯ ಸರಕಾರವೇ ನೇರ ಹೊಣೆ–ಸಿಪಿಐ(ಎಂ)

ವಿಧಾನ ಪರಿಷತ್ ಕಲಾಪ ನಿರ್ವಹಣೆಯಲ್ಲಿ ರಾಜ್ಯ ಸರಕಾರ ಘೋರವಾಗಿ ವಿಫಲವಾಗಿದೆ. ದೇಶದ ಮುಂದೆ ತಲೆತಗ್ಗಿಸುವಂತಹ ಪರಿಸ್ಥಿತಿ ನಿರ್ಮಿಸಿದೆ, ಎಂದು ಭಾರತ ಕಮ್ಯುನಿಸ್ಟ್ ಪಕ್ಷ ಮಾರ್ಕ್ಸವಾದಿ) ದ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ.

ವಿಧಾನ ಪರಿಷತ್ ಕಲಾಪದಲ್ಲಿ ಗದ್ದಲ ಉಂಟಾಗಲು, ಬಿಜೆಪಿ ಮತ್ತು ರಾಜ್ಯ ಸರಕಾರವೂ ಕಲಾಪಕ್ಕೆ ಸಭಾಪತಿಗಳು ಬಾರದಂತೆ ತಡೆದುದೇ, ಇಂತಹದೊಂದು ಕೆಟ್ಟ ಪರಿಸ್ಥಿತಿ ನಿರ್ಮಾಣವಾಗಲು ಮೂಲ ಕಾರಣವಾಯಿತು.

ಸಭಾಪತಿಗಳು ಕಲಾಪಕ್ಕೆ ಬರಲು ಬಿಟ್ಟು, ನಂತರವೇ ಅವಿಶ್ವಾಸ ಮಂಡನೆ ಮತ್ತು ಮುಂದಿನ ನಡೆಯ ಕುರಿತು ನಿಯಮಾವಳಿಯಂತೆ ಕ್ರಮವಹಿಸಲು ಮುಂದಾಗ ಬೇಕಿತ್ತು.

ಹಾಗೇ ಶಾಂತಿಯುತವಾಗಿಯೇ ನಿರ್ವಹಿಸ ಬಹುದಾಗಿದ್ದ ಪ್ರಸಂಗವನ್ನು ಯಾಕೆ ಈ ರೀತಿಯ ಗದ್ದಲದ ವಾತಾವರಣಕ್ಕೆ ತಿರುಗಿಸಲಾಯಿತೆಂಬ ಕಡೆ ರಾಜ್ಯದ ಜನತೆ ಗಮನ ಹರಿಸ ಬೇಕಿದೆ.

ಇಂತಹ ಗದ್ದಲ ಉಂಟಾಗಲು ಬೇಕಾದ ಪರಿಸ್ಥಿತಿಯನ್ನು ನಿರ್ಮಿಸುವ ಮೂಲಕ, ಬಿಜೆಪಿ ತನ್ನ ಜನ ವಿರೋಧಿ ನೀತಿಗಳನ್ನು ಮುಚ್ಚಿಟ್ಟು ಕೊಳ್ಳಲು ಮತ್ತು ಜನಗಳ ಗಮನವನ್ನು ಬೇರೆಡೆ ಸೆಳೆಯಲು ಆ ಮೂಲಕ ರಾಜಕೀಯ ಲಾಭ ಪಡೆಯಲು ಅದು ಯತ್ನಿಸಿದೆ.

ಯಾಕೆಂದರೇ ಕಳೆದ ಐದು ದಿನಗಳ ಹಿಂದೆ ನಡೆದ ವಿಧಾನ ಮಂಡಲದ ಅಧಿವೇಶನದಲ್ಲಿ ತೀವ್ರ ವಿರೋಧದ ನಡುವೆ, ರೈತರ, ನಾಗರೀಕರ ಮತ್ತು ಜನತೆಯನ್ನು ಒಡೆದಾಳುವ ಹಾಗೂ ಪ್ರಜಾಪ್ರಭುತ್ವ ವಿರೋಧಿಯಾದ ಭೂ ಸುಧಾರಣೆ ತಿದ್ದುಪಡಿ ಮಸೂದೆ– 2020 ಮತ್ತು ಎಪಿಎಂಸಿ ತಿದ್ದುಪಡಿ ಮಸೂದೆ–2020 ಮತ್ತು ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಮಸೂದೆ– 2020 ನ್ನು ಅಂಗೀಕರಿಸಿ,ರಾಜ್ಯದ ಜನತೆಯ ಕೆಂಗಣ್ಣಿಗೆ ಗುರಿಯಾಗಿದೆ.

ವಿರೋಧಿ ಕಾಂಗ್ರೆಸ್ ಪಕ್ಷವೂ ಕೂಡ ವಿಧಾನ ಪರಿಷತ್ ಕಲಾಪದ ಸದರಿ ಪರಿಸ್ಥಿತಿಯನ್ನು ಪ್ರಬುದ್ಧತೆಯಿಂದ ನಿಭಾಯಿಸುವ ಬದಲು, ಬಿಜೆಪಿಯ ತಾಳಕ್ಕೆ ಸರಿಯಾಗಿ ಕುಣಿದಿದೆ.

ಹೀಗಾಗಿ, ರಾಜ್ಯದ ಘನತೆಗೆ ಕುಂದುಂಟಾಗುವಂತಾಗಿದೆ.

ಇಂತಹ ಎಲ್ಲಾ ಕುತಂತ್ರಗಳು ಬಿಜೆಪಿಯ ಹಾಗೂ ರಾಜ್ಯ ಸರಕಾರದ ಜನ ವಿರೋಧಿ ನಡೆಗಳನ್ನು ಎಂದಿಗೂ ಮುಚ್ಚಿಡಲಾರವು.

ವಿಷನ್ ಇಲ್ಲದ ಬೆಂಗಳೂರು ಮಿಷನ್ 2022

ಬೆಂಗಳೂರಿಗೆ ನವಚೈತನ್ಯದ ಹೆಸರಿನಲ್ಲಿ ರಾಜ್ಯ ಸರ್ಕಾರವು ಬಿಡುಗಡೆ ಮಾಡಿರುವ ಬೆಂಗಳೂರು ಮಿಷನ್ 2022 ವಿಷನ್ ಇಲ್ಲದ ಬಿಬಿಎಂಪಿ ಚುನಾವಣೆ ಮೇಲೆ ಕಣ್ಣಿಟ್ಟಿರುವ ರಾಜಕೀಯ ಘೋಷಣೆಯಾಗಿದೆ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಟೀಕಿಸಿವೆ.

ಭಾರತ ಸ್ವತಂತ್ರ 75 ರ ಸಂದರ್ಭಕ್ಕೆ ರಾಜಧಾನಿಯ ಚಹರೆ ಬದಲಿಸಲಿದೆ ಈ ಯೋಜನೆ ಎಂಬ ಮುಖ್ಯ ಮಂತ್ರಿಗಳ ಮಾತಿಗೆ ಪೂರಕ ಯಾವುದೆ ನಿರ್ದಷ್ಟ ಅಂಶಗಳು ಅವರು ಬಿಡುಗಡೆ ಮಾಡಿರುವ ಬೆಂಗಳೂರು ಮಿಷನ್ 2022 ರಲಿಲ್ಲ.

ಸದರಿ ಯೋಜನೆಯಲ್ಲಿ ಸುಗಮ ಸಂಚಾರದಡಿ 400 ಕಿ.ಮಿ. ಉದ್ದದ ನಗರದ ರಸ್ತೆಗಳ ಅತ್ಯುತ್ತಮ ನಿರ್ವಹಣೆಯನ್ನು ವಾರ್ಷಿಕ ನಿರ್ವಹಣ ಒಪ್ಪಂದ ಮೂಲಕ ಸಾಧಿಸಲಾಗುವುದು ಎಂದರೆ ರಸ್ತೆ ನಿವರ್ಹಣೆಯನ್ನು ಖಾಸಗಿಯವರಿಗೆ ವಹಿಸುವುದೆಂಬ ಅಂಶದ ಸೂಚಕವಾಗಿದೆ. ಅದಕ್ಕೆ ತಯಾರಿ ಎಂಬಂತೆ ಬಿಬಿಎಂಪಿಯು ಈಗಾಗಲೆ ಆಸ್ತಿ ತೆರಿಗೆಯ 2 ಶೇಕಡ ರಸ್ತೆ ಸಾರಿಗೆ ಸೆಸ್ ಸಂಗ್ರಹಕ್ಕೆ ಪ್ರಸ್ತಾವನೆ ನೀಡಿದೆ.

ಸಚ್ಚ ಬೆಂಗಳೂರು ಅಡಿ ಕಸ ನಿರ್ವಹಣೆಗೆ ಸಾಂಸ್ಥಿಕ ರೂಪ

ಪುಟ 4 ಕ್ಕೆ

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಉಡುಪಿಯಲ್ಲಿ ಧರಣಿ

ವರದಿ: ವಾ.ಉ.

ಕಟ್ಟಡ ಕಾರ್ಮಿಕರ ಹಾಗೂ ಇತರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸಿಐಟಿಯು ಉಡುಪಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಡಿಸೆಂಬರ್ 15 ರಂದು ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಲಾಯಿತು.

ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾತನಾಡಿದ ಉಡುಪಿ ಜಿಲ್ಲಾ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಕಾರ್ಮಿಕ ಕಲ್ಯಾಣ ಮಂಡಳಿಯು ಕಾರ್ಮಿಕರ ಅರ್ಜಿಗಳು ಸೇವಾ ಸಿಂಧುವಿನಲ್ಲಿ ಸಲ್ಲಿಸುವುದನ್ನು ಸ್ಥಗಿತಗೊಳಿಸಿದೆ. ಇದರಿಂದ ಸಮಸ್ಯೆಯಾಗಿ ಸಾಕಷ್ಟು ಅರ್ಜಿಗಳು ಬಾಕಿ ಉಳಿದಿವೆ. ಆದ್ದರಿಂದ ಅರ್ಜಿ ಅವಧಿ ವಿಸ್ತರಣೆ ಹಾಗೂ ಅಧಿಕಾರಿಗಳ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ನೀಡಬೇಕು ಎಂದು ಅವರು ಒತ್ತಾಯಿಸಿದರು.

ಮಂಡಳಿಯ ನಿಯಮ ಪ್ರಕಾರ ಎಲ್ಲಾ ಅರ್ಜಿಗಳು ಈ ಹಿಂದೆ ಇದ್ದ ಆರು ತಿಂಗಳ ಕಾಲ ಮಿತಿಯನ್ನು ಒಂದು ವರ್ಷದವರೆಗೆ ವಿಸ್ತರಿಸಬೇಕು. ಕೊರೋನಾ ಲಾಕ್‌ಡೌನ್ ಅವಧಿಯಲ್ಲಿ ಸರಕಾರ ಮಂಡಳಿ ಮೂಲಕ ಘೋಷಿಸಿದ 5,000 ರೂ. ಪರಿಹಾರ ಮೊತ್ತ ಕೆಲವು ಕಾರ್ಮಿಕರಿಗೆ ಜಮೆಯಾಗದೆ ಬಾಕಿ ಉಳಿದಿದ್ದು, ಈ ಬಗ್ಗೆ ಕೂಡಲೇ ಕ್ರಮತೆಗೆದುಕೊಳ್ಳಬೇಕು ಎಂದು ಅವರು ತಿಳಿಸಿದರು.

ಇದೇ ಸಂದರ್ಭದಲ್ಲಿ ಸರಕಾರ ಅಂಗೀಕರಿಸಿದ ಭೂಸುಧಾರಣಾ ಕಾಯ್ದೆ ತಿದ್ದುಪಡಿ ಪ್ರತಿಗಳನ್ನು ಸುಟ್ಟು ಆಕ್ರೋಶ ವ್ಯಕ್ತಪಡಿಸಲಾಯಿತು. ಬಳಿಕ ಜಿಲ್ಲಾಧಿಕಾರಿ ಜಿ.ಜಗದೀಶ್ ಮೂಲಕ ಸಿಎಂಗೆ ಮನವಿ ಸಲ್ಲಿಸಲಾಯಿತು.

ಧರಣಿಯಲ್ಲಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ, ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಸಂಘದ ಕುಂದಾಪುರ ತಾಲೂಕು ಅಧ್ಯಕ್ಷ ದಾಸ್ ಭಂಡಾರಿ, ಉಡುಪಿ ಜಿಲ್ಲಾ ಕೋಶಾಧಿಕಾರಿ ಗಣೇಶ್ ನಾಯಕ್, ಬೈಂದೂರು ತಾಲೂಕು ಕೋಶಾಧಿಕಾರಿ ರೋನಾಲ್ಡ್ ರಾಜೇಶ್ ಕ್ವಾಡ್ರಸ್, ಮುಖಂಡರಾದ ಬಲ್ಕೀಸ್, ಮಹಾಬಲ ವಡೇರಹೋಬಳಿ, ಕವಿರಾಜ್, ಭಾರತಿ, ಶಶಿಧರ ಗೊಲ್ಲ, ಸುಭಾಷ್ ನಾಯಕ್ ಮತ್ತಿತರರು ಉಪಸ್ಥಿತರಿದ್ದರು. ■



ಮೀನುಗಾರರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯ ಬೈಂದೂರು ತಹಶೀಲ್ದಾರ್ ಕಚೇರಿ ಎದುರು ಪ್ರತಿಭಟನೆ

ಅಖಿಲ ಭಾರತ ಮೀನುಗಾರರ ಮತ್ತು ಮೀನು ಕಾರ್ಮಿಕರ ಫೆಡರೇಶನ್ ನವದೆಹಲಿಗೆ ಸಂಯೋಜಿಸಲ್ಪಟ್ಟಬೈಂದೂರು ವಲಯ ಮೀನುಗಾರರ ಮತ್ತು ಮೀನು ಕಾರ್ಮಿಕರ ಸಂಘ ಉಪ್ಪುಂದ ಘಟಕ(ಸಿಐಟಿಯು) ನೇತೃತ್ವದಲ್ಲಿ ಮೀನುಗಾರರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ, ಬೈಂದೂರು ತಹಶೀಲ್ದಾರ್ ಕಚೇರಿ ಎದುರು ಮೀನುಗಾರರು ಪ್ರತಿಭಟನೆ ನಡೆಸಿ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಬೇಡಿಕೆಗಳ ಮನವಿ ಪತ್ರ ಸಲ್ಲಿಸಿತು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಜಿಲ್ಲಾ ಉಪಾಧ್ಯಕ್ಷ ವೆಂಕಟೇಶ್ ಕೋಣಿ ಮಾತನಾಡಿ, ಕರಾವಳಿ ಪ್ರದೇಶದಲ್ಲಿ ಮೀನುಗಾರರ ಪಂಜರ ಕೃಷಿ ಮೀನು ಲಕ್ಷಾಂತರ ಸಂಖ್ಯೆಯಲ್ಲಿ ಮೃತಪಟ್ಟ ಘಟನೆ ಬಗ್ಗೆ ವಿವಿಧ ಕ್ಷೇತ್ರಗಳ ವಿಷಯ ಪರಿಣತರಿಂದ ಕಾರಣ ಹುಡುಕಿ ಮೀನುಗಾರರಿಗೆ ನಷ್ಟ ಪರಿಹಾರವನ್ನು ಸರಕಾರ ಈ ಕೂಡಲೆ ಬಿಡುಗಡೆ ಮಾಡಲು ಕ್ರಮವಹಿಸಬೇಕು ಎಂದು ಆಗ್ರಹಿಸಿದರು. ಮೀನುಗಾರರ ಸಂಘದ ಜಿಲ್ಲಾಧ್ಯಕ್ಷ ಕೆ. ಶಂಕರ, ಮುಖಂಡರಾದ ರಾಮಖಾರ್ವಿ, ವಿಠಲ ಖಾರ್ವಿ, ಗಣೇಶ ಮೊಗವೀರ ಬೈಂದೂರು, ಜ್ಯೋತಿ ಮೊಗವೀರ ಉಪ್ಪುಂದ, ಶ್ರೀಧರ ನಾಡ, ಮಂಜ ಪೂಜಾರಿ ದೊಂಬೆ ಪಡುವರಿ ಇದ್ದರು.

ಎಪಿಎಂಸಿ ಸೆಸ್ ಹೆಚ್ಚಳವನ್ನು ವಾಪಾಸು ಪಡೆಯಲು ಕೆಪಿಆರ್‌ಎಸ್ ಒತ್ತಾಯ

ಕರ್ನಾಟಕ ಸರಕಾರ ಮಾರುಕಟ್ಟೆ ಸೆಸ್ ಶೇ 0.35 ರಿಂದ ಶೇ 01 ಕ್ಕೆ ಹೆಚ್ಚಿಸಿರುವ ರಾಜ್ಯ ಸರಕಾರದ ಕ್ರಮವನ್ನು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಬಲವಾಗಿ ಖಂಡಿಸುತ್ತದೆ ಮತ್ತು ಅದನ್ನು ತಕ್ಷಣವೇ ವಾಪಾಸು ಪಡೆಯಲು ಒತ್ತಾಯಿಸಿದೆ.

ರಾಜ್ಯ ಸರಕಾರದ ಈ ಕ್ರಮದಿಂದ ಎಪಿಎಂಸಿಗಳ ಆದಾಯ ಹೆಚ್ಚಲಿದೆಯೆಂಬುದು ಸುಳ್ಳು ಬದಲಿಗೆ ಆದಾಯ ಕುಸಿಯುವಂತೆ ಮಾಡಲು ಸಹಾಯ ಮಾಡುತ್ತದೆ.

ಒಂದು ಕಡೆ ಕೃಷಿ ಉತ್ಪನ್ನ ಮಾರುಕಟ್ಟೆಗಳನ್ನು ನಾಶ ಮಾಡುವ ಎಪಿಎಂಸಿ ತಿದ್ದುಪಡಿ ಕಾಯ್ದೆ – 2020 ನ್ನು ಜಾರಿಗೊಳಿಸಲು ಯತ್ನಿಸುತ್ತದೆ, ಇನ್ನೊಂದೆಡೆ ಈ ಮೂಲಕ ಕೃಷಿ ಉತ್ಪನ್ನಗಳ ವ್ಯಾಪಾರಿಗಳ ಮೇಲೆ ಶೇ 65 ರಷ್ಟು ಮಾರುಕಟ್ಟೆ ಸೆಸ್ ಹೆಚ್ಚಳ ಮಾಡುವ ಮೂಲಕ ಎಪಿಎಂಸಿಗಳ ಆಚೆ ತಳ್ಳುವ ಕಾರ್ಯಕ್ಕೆ ಕೈ ಹಾಕಿದೆ.

ರಾಜ್ಯ ಸರಕಾರ ರೈತರನ್ನು ಮತ್ತು ವ್ಯಾಪಾರಿಗಳನ್ನು ವಂಚಿಸುವ ನೀತಿಯನ್ನು ತಕ್ಷಣವೇ ಕೈಬಿಡುವಂತೆ, ಹಾಗೂ ಎಪಿಎಂಸಿ ತಿದ್ದುಪಡಿ ಕಾಯ್ದೆ– 2020 ನ್ನು ವಾಪಾಸು ಪಡೆಯುವಂತೆ ಹಾಗೂ ಎಪಿಎಂಸಿಗಳನ್ನು ಬಲಪಡಿಸಲು ಅಗತ್ಯ ನೆರವು ಹಾಗು ಕ್ರಮಗಳನ್ನು ವಹಿಸಲು ಕರ್ನಾಟಕ ಪ್ರಾಂತ ರೈತ ಸಂಘ ಮರಳಿ ಬಲವಾಗಿ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದೆ.

ವಿಷನ್ ಇಲ್ಲದ ಬೆಂಗಳೂರು ಮಿಷನ್ 2022....... ಪುಟ 3 ರಿಂದ

ನೀಡುವ ಪ್ರಸ್ತಾವನೆ ಕಸ ನಿರ್ವಹಣೆಗೆ ಪ್ರತ್ಯೇಕ ಮಂಡಳಿ ರಚಿಸುವ ಅಂಶವಾಗಿದೆ. ಆ ಮೂಲಕ 940 ಕೋಟಿ ರೂ. ಗಳ ಕಸದ ವ್ಯವಹಾರವನ್ನು ಖಾಸಗಿ ಕಂಪನಿಗಳಿಗೆ ವಹಿಸುವ ಕುತಂತ್ರವಾಗಿದೆ. ಅದಕ್ಕಾಗಿ ಸದ್ಯಕ್ಕೆ ಹಿಂಪಡೆದಿರುವ ಕಸ ನಿರ್ವಹಣೆ ಬಳಕೆದಾರರ ಶುಲ್ಕ ಪ್ರತಿ ಮನೆಗೆ 200 ರೂ. ಸಂಗ್ರಹಿಸುವ ಪ್ರಸ್ತಾವನೆಯನ್ನು ಬಿಬಿಎಂಪಿ ನೀಡಿದೆ.

ಹಸಿರು ಬೆಂಗಳೂರು ಅಡಿಯಲ್ಲಿ ಈಗಾಗಲೆ ಒತ್ತುವರಿಗೆ ಒಳಗಾಗಿ ನಶಿಸುತ್ತಿರುವ ತುರಳ್ಳಿ ಅರಣ್ಯ, ಕೆರೆ ಮತ್ತು ರಾಜ ಕಾಲುವೆ, ಮರಗಳ ರಕ್ಷಿಸಿ ಸಂರಕ್ಷಿಸುವ ಯಾವುದೆ ಪ್ರಸ್ತಾಪವನ್ನು ಮಿಷನ್ ಹೊಂದಿಲ್ಲ.

ಜನ ಸಂಪರ್ಕದಡಿ ಬಿಬಿಎಂಪಿಯ ವಾರ್ಡ್‌ಗಳಲ್ಲಿ ಸ್ಥಳೀಯ ನಿವಾಸಿಗಳ ಪಾಲ್ಗೊಳ್ಳುವಿಕೆ ಮುಂತಾದ ಅಂಶಗಳನ್ನು ಒಳಗೊಳ್ಳದೆ 75 ನೇ ಸ್ವತಂತ್ರೋತ್ಸವದ ಉತ್ಸಾಹವನ್ನು ನಾಗರೀಕರಲ್ಲಿ ಮೂಡಿಸಿ ಅವರನ್ನು ಬೆಂಗಳೂರಿನ ಸುಸ್ಥಿರ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುವ ಯಾವುದೆ ಅಂಶಗಳನ್ನು ಮಿಷನ್ ಒಳಗೊಂಡಿಲ್ಲ.

ಒಟ್ಟಾರೆ ಬಿಜೆಪಿ ಸರ್ಕಾರವು ಮುಂಬರುವ ಬಿಬಿಎಂಪಿ ಚುನಾವಣೆಗಳಿಗಾಗಿ ಎಂದಿನಂತೆ ತನ್ನ ಘೋಷಣೆಗಳ ನಯವಂಚಕ ಕಸರತ್ತನ್ನು ಬೆಂಗಳೂರು ಮಿಷನ್ 2022 ಮೂಲಕ ನಡೆಸಿದೆ. ನವ ಉದಾರವಾದಿ ಆರ್ಥಿಕ ನೀತಿಗಳಿಗೆ ಅನುಗುಣವಾಗಿ ನಯವಾಗಿ ಬಳಕೆದಾರರ ಶುಲ್ಕ ವಿಧಿಸುವ, ನಾಗರೀಕ ಸೌಲಭ್ಯಗಳ ಪೂರೈಕೆಯನ್ನು ಖಾಸಗಿಯವರಿಗೆ ವಹಿಸುವ ಯೋಜನೆ ಇದಾಗಿದೆ. ಮಹಾನಗರದ ಜನತೆಯ ನಿರೀಕ್ಷೆಗಳನ್ನು ಪೂರೈಸುವ ಯಾವುದೆ ಯೋಜನೆ ಇದರಲ್ಲಿ ಇಲ್ಲವಾಗಿದೆ ಎಂದು ಸಿಪಿಐ (ಎಂ) ಟೀಕಿಸಿದೆ. ■

ಜನತೆಯ ನೈಜ ಸಮಸ್ಯೆಗಳ ಪರಿಹಾರಕ್ಕೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು ಎಐಕೆಎಸ್‌ಸಿಸಿ ರಾಜ್ಯ ಘಟಕ ಒತ್ತಾಯ

ಕೇಂದ್ರ ಸರ್ಕಾರವು ಅಸಾಂವಿಧಾನಿಕ ವಿಧಾನದಿಂದ, ಅತ್ಯಂತ ಅಪ್ರಜಾತಾಂತ್ರಿಕ ರೀತಿಯಲ್ಲಿ ಜಾರಿಗೆ ತಂದಿರುವ ಕೃಷಿ ಸಂಬಂಧಿತವಾದ (ಮುಂಗಡ ವ್ಯಾಪಾರ ಕೃಷಿ, ಎ.ಪಿ.ಎಂ.ಸಿ., ವಿದ್ಯುತ್ ವಿತರಣೆ, ಕಾರ್ಮಿಕ ಹಾಗೂ ಅಗತ್ಯ ವಸ್ತು ಕಾಯ್ದೆಗಳಿಗೆ ಸಂಬಂಧಿಸಿದ) ತಿದ್ದುಪಡಿ ಕಾಯ್ದೆಗಳು ಇಡೀ ದೇಶದ ರೈತಾಪಿಯ ಹಾಗೂ ಕಾರ್ಮಿಕರ ಬದುಕಿಗೆ ಮಾರಕವಾಗಿವೆ ಮತ್ತು ಕಾರ್ಪೋರೇಟ್ ಲೂಟಿಗೆ ಪೂರಕವಾಗಿವೆ. ಆದ್ದರಿಂದ ಅವುಗಳನ್ನು ರದ್ದುಪಡಿಸಬೇಕು ಹಾಗೂ ಕನಿಷ್ಠ ಬೆಂಬಲ ಬೆಲೆ ಖಾತರಿ (ಎಂಎಸ್‌ಪಿ)ಯನ್ನು ಶಾಸನಬದ್ಧಗೊಳಿಸಬೇಕು ಮತ್ತು ಸಾರ್ವಜನಿಕ ಸಾಲ ಒದಗಿಸುವ ಹಾಗೂ ಋಣಮುಕ್ತಿ ನೀಡುವ ಕಾಯ್ದೆ ಜಾರಿಗೆ ತರಬೇಕು ಎಂಬ ಹಕ್ಕೊತ್ತಾಯಗಳೊಂದಿಗೆ ದೇಶದ ನಾನಾ ಭಾಗಗಳ ಒಂದು ಕೋಟಿಗೂ ಹೆಚ್ಚು ರೈತರು ಇದೇ ನವೆಂಬರ್ 26 ರಿಂದ ದೆಹಲಿಯ ಸರಹದ್ದಿನಲ್ಲಿ ಸತತವಾಗಿ ಸತ್ಯಾಗ್ರಹ ನಡೆಸುತ್ತಿದ್ದಾರೆ. ಅವರನ್ನು ದೆಹಲಿಗೆ ಪ್ರವೇಶ ಮಾಡದಂತೆ ತಡೆದಿರುವ ಕೇಂದ್ರ ಸರ್ಕಾರ ಮತ್ತು ಉತ್ತರ ಪ್ರದೇಶ, ಬಿಹಾರ ರಾಜ್ಯ ಸರ್ಕಾರಗಳು ರೈತರ ಮೇಲೆ ಅಮಾನುಷ ದೌರ್ಜನ್ಯ ನಡೆಸುತ್ತಿವೆ. ಕಳೆದ 70 ವರ್ಷಗಳಲ್ಲೆಂದೂ ಇರದಿದ್ದಂತಹ ತೀವ್ರ ಚಳಿಯಿಂದಾಗಿ ಈ ಕಷ್ಟಜೀವಿಗಳು ಅಪಾರ ಬವಣೆಗೆ ಈಡಾಗಿರುವುದಲ್ಲದೆ ಈಗಾಗಲೇ ಸುಮಾರು 40ಕ್ಕೂ ಹೆಚ್ಚು ಜನರು ದಾರುಣವಾಗಿ ಸಾವಿಗೆ ಬಲಿಯಾಗಿದ್ದಾರೆಂದು ವರದಿಗಳು ತಿಳಿಸಿವೆ. ಇದ್ಯಾವುದನ್ನೂ ಪರಿವೆ ಮಾಡದ 'ಐಲುದೊರೆ ನೀರೋ'ನಂಥ ಕ್ರೂರಿ ಕೇಂದ್ರ ಸರ್ಕಾರ ಮಾತುಕತೆಯ ನಾಟಕವಾಡುತ್ತ ಸಮಯವನ್ನೂ ರೈತರನ್ನೂ ಕೊಲ್ಲುತ್ತಿದೆ.

ಇನ್ನೊಂದೆಡೆ ಕೇಂದ್ರದ ಬಿಜೆಪಿ ಸರ್ಕಾರವು ತನ್ನ 'ಗೋದೀ ಮೀಡಿಯಾ' ಬಳಸಿಕೊಂಡು, ಐತಿಹಾಸಿಕವಾದ ಈ ಅಹಿಂಸಾತ್ಮಕ, ಸಂವಿಧಾನಬದ್ಧ, ನ್ಯಾಯಯುತ ಹೋರಾಟದ ಬಗ್ಗೆ ತೀವ್ರ ಆಕ್ಷೇಪಾರ್ಹವಾದ ದುಷ್ಪ್ರಚಾರವನ್ನು ಹರಿಬಿಟ್ಟಿದೆ. ಈ ಎಲ್ಲ ತಿದ್ದುಪಡಿಗಳಿಂದ ರೈತರಿಗೆ ಹಿಂದೆಂದೂ ಇರದಿದ್ದಂತಹ ಲಾಭವಾಗುತ್ತದೆ, ಅವರ ಆದಾಯ ದುಪ್ಪಟ್ಟಾಗುತ್ತದೆ; ರೈತರು ಆತಂಕ ವ್ಯಕ್ತಪಡಿಸುತ್ತಿರುವಂತಹ ಎ.ಪಿ.ಎಂ.ಸಿ. ರದ್ದತಿ, ಎಂಎಸ್‌ಪಿ ರದ್ದತಿ ಮತ್ತಿತರ ಅಂಶಗಳು ಕಾಯ್ದೆಗಳಲ್ಲಿ ಇಲ್ಲ, ಅಷ್ಟಾಗಿಯೂ ರೈತರು ಸೂಚಿಸಿರುವ ಕೆಲವು ಬದಲಾವಣೆಗಳನ್ನು ಮಾಡಲು ಕೇಂದ್ರ ಸರ್ಕಾರ ಸಿದ್ಧವಿದೆ; ಆದರೂ ರೈತರು ಮತ್ತು "ಕೆಲವು" ರೈತ ಸಂಘಟನೆಗಳು ವಿರೋಧ ಪಕ್ಷಗಳ ಚಿತಾವಣೆಗೆ ಬಲಿಯಾಗಿ, ಮಾತುಕತೆಗಳಲ್ಲಿ ಸಹಕರಿಸದೆ ವಿತಂಡವಾದ ಮಾಡುತ್ತ ಇಲ್ಲಸಲ್ಲದ ಮೊಂಡು ಹಟ ಮಾಡುತ್ತಿವೆ; ಹೋರಾಟದ ಹೆಸರಿನಲ್ಲಿ ದೇಶದ್ರೋಹಿ, ವಿಚ್ಛಿದ್ರಕಾರಿ ಹಾಗೂ ಭಯೋತ್ಪಾದಕ ಶಕ್ತಿಗಳು ರೈತರನ್ನು ಎತ್ತಿಕಟ್ಟಿ ಕೇಂದ್ರ ಸರ್ಕಾರದ ವಿರುದ್ಧ ಪಿತೂರಿ ನಡೆಸುತ್ತಿವೆ ... ಮುಂತಾಗಿ ಹಸೀ ಹಸೀ ಸುಳ್ಳಿನ ಸರಮಾಲೆಯನ್ನು ಹರಿಬಿಟ್ಟು, ರೈತರನ್ನು ತಿಳುವಳಿಕೆಯಿಲ್ಲದ ಮೂಢರಂತೆ, ಭಯೋತ್ಪಾದಕರಂತೆ ಚಿತ್ರಿಸುತ್ತಿದೆ.

ಕೇಂದ್ರ ಸರ್ಕಾರದ ಈ ಎಲ್ಲ ರೈತದ್ರೋಹಿ ಹಾಗು ಸಂವಿಧಾನ–ವಿರೋಧಿ ಕ್ರಮಗಳನ್ನು ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ (ಎಐಕೆಎಸ್‌ಸಿಸಿ) ಕರ್ನಾಟಕ ರಾಜ್ಯ ಘಟಕ ತೀವ್ರವಾಗಿ ಖಂಡಿಸುತ್ತದೆ. ಬರೀ ಸುಳ್ಳುಗಳು ಮತ್ತು ಹುಸಿ ಆಶ್ವಾಸನೆಗಳಿಂದಲೇ ಜನರನ್ನು ನಂಬಿಸಿ ಕೇಂದ್ರದಲ್ಲಿ ಅಧಿಕಾರಕ್ಕೇರಿ, ಒಂದರಮೇಲೊಂದು ಜನವಿರೋಧಿ ನೀತಿಗಳನ್ನೂ ಕಾಯ್ದೆಗಳನ್ನೂ ಜಾರಿಗೆ ತರುತ್ತ, ಜನರ ಬದುಕನ್ನು ನರಕವಾಗಿಸಿರುವ ಬಿಜೆಪಿ ಸರ್ಕಾರದ ಈ ಎಲ್ಲ ಅಪಪ್ರಚಾರಗಳನ್ನು ಜನತೆ ನಂಬಿ ಮೋಸ ಹೋಗಬಾರದೆಂದು ಎಐಕೆಎಸ್‌ಸಿಸಿ ಕರ್ನಾಟಕ ರಾಜ್ಯ ಘಟಕ ಮನವಿ ಮಾಡುತ್ತದೆ. ದೇಶದ ಅನ್ನದಾತರಾದ ರೈತಾಪಿ ವರ್ಗ ಅಮಾಯಕರಿರಬಹುದು, ಆದರೆ ಸರ್ಕಾರಗಳು ಬಿಂಬಿಸುತ್ತಿರುವಂತೆ ದಡ್ಡರೋ ಮೂರ್ಖರೋ ಅಲ್ಲ; ತಮಗೇನು ಬೇಕು, ಏನು ಬೇಡ ಎಂಬ ಬಗ್ಗೆ ಅವರಿಗೆ ಪೂರ್ಣ ಅರಿವಿದೆ ಎಂಬುದನ್ನು ಜನತೆ ಮನಗಾಣುತ್ತಾರೆಂಬ ನಂಬಿಕೆಯಿದೆ. ಈ ನಿಟ್ಟಿನಲ್ಲಿ ದೆಹಲಿಯಲ್ಲಿ ನಡೆಯುತ್ತಿರುವ ಹೋರಾಟಕ್ಕೆ ಎಐಕೆಎಸ್‌ಸಿಸಿ ಸಂಪೂರ್ಣ ಬೆಂಬಲ ನೀಡುವುದಲ್ಲದೆ ರೈತರು ಡಿ. 16 ರಿಂದ ಕರೆ ನೀಡಿರುವ ಅನಿರ್ದಿಷ್ಟಾವಧಿ ದೇಶವ್ಯಾಪಿ ಪ್ರತಿಭಟನೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತದೆ.

ಇತ್ತ ಕರ್ನಾಟಕದ ಬಿಜೆಪಿ ➜



ವಿಸ್ಟ್ರಾನ್ ಕಾರ್ಖಾನೆಯ ಕಾರ್ಮಿಕರ ನಿರ್ಲಕ್ಷ್ಯ: ತನಿಖೆಗೆ ಸಿಐಟಿಯು ಆಗ್ರಹ

ಕೋಲಾರ: ವಿಸ್ಟ್ರಾನ್ ಕಾರ್ಖಾನೆಯ ಮಾಲೀಕರು ಕಾರ್ಮಿಕರ ಬಗ್ಗೆ ನಿರ್ಲಕ್ಷ್ಯದಿಂದ ಕಾರ್ಮಿಕ ಕಾನೂನುಗಳ ಉಲ್ಲಂಘನೆ ಮಾಡಿ ಈ ಘಟನೆ ಸಂಬಂಧಿಸಿದ್ದು ಇದರ ಬಗ್ಗೆ ನಿಷ್ಪಕ್ಷಪಾತ ತನಿಖೆಯಾಗಿ ನೈಜ ಸತ್ಯಾಂಶ ಹೊರಬರಬೇಕಾಗಿದೆ ಎಂದು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಒತ್ತಾಯಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ವತಿಯಿಂದ ವಿಸ್ಟ್ರಾನ್ ಕಂಪನಿಯಲ್ಲಿ ನಡೆದ ಘಟನೆಯ ಕುರಿತು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಕಾರ್ಮಿಕರನ್ನು 12 ಗಂಟೆಗಳ ಕಾಲ ದುಡಿಸಿಕೊಂಡರು ಯಾಕೆ ನಾಲ್ಕು ತಿಂಗಳಿಂದ ಸಂಬಳ ನೀಡಿಲ್ಲ, ಇದರ ಬಗ್ಗೆ ಕಾರ್ಮಿಕ ಇಲಾಖೆ ಗಮನಹರಿಸದೇ ಕಾನೂನು ಕಾಯಿದೆ ಉಲ್ಲಂಘನೆಯಾಗಿದ್ದರೂ ಮೌನ ವಹಿಸಿದ್ದು ಯಾಕೆ ರಾಜ್ಯ ಸರಕಾರವೇ ಬಂಡವಾಳಗಾರರ ಗುಲಾಮರಂತೆ ಕೆಲಸ ಮಾಡುತ್ತಾ ಇದ್ದು ಈ ಘಟನೆಯು ಸಂಪೂರ್ಣ ಹೊಣೆ ರಾಜ್ಯ ಸರಕಾರದ ಜಿಲ್ಲಾಡಳಿತ ವೈಫಲ್ಯ ಎದ್ದು ಕಾಣುತ್ತದೆ ಎಂದು ಆರೋಪಿಸಿದರು.

ಯಾವುದೇ ಒಂದು ಕಾರ್ಖಾನೆ ಪ್ರಾರಂಭಸಿದ್ದ ಸಂದರ್ಭದಲ್ಲಿ ಕಾರ್ಮಿಕರು ಮಾಲೀಕರ ಆಧಾರ ಸ್ತಂಭವಾಗಿರುತ್ತಾರೆ ಮಾಲೀಕರು ಕಾರ್ಮಿಕರನ್ನು ಖಾಯಂ ಮಾಡಿದ್ದರಾ ಅವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿದ್ದಾರಾ ದೇಶದ ಕಾರ್ಮಿಕ ಕಾಯಿದೆಗಳು ಕಾರ್ಖಾನೆಗಳಲ್ಲಿ ಸಮರ್ಪಕವಾಗಿ ಜಾರಿಯಾಗಿದ್ದಾವಾ ಕಾರ್ಮಿಕರಿಗೆ ರಕ್ಷಣೆ ಇದೀಯಾ ಕಾರ್ಖಾನೆಯಲ್ಲಿ ಇಂತಹ ಪರಿಸ್ಥಿತಿ ಬರಲು ಬಂಡವಾಳ ಹೂಡಿದವರ ತಪ್ಪು ಇದ್ದೀಯಾ ಎಂಬುದರ ಬಗ್ಗೆ ತನಿಖೆಯಾದಾಗ ಮಾತ್ರ ಘಟನೆಯ ನೈಜ ಅಂಶಗಳು ಹೊರಬರಲು ಸಾಧ್ಯ ಇದರ ಬಗ್ಗೆ ಪೋಲಿಸ್ ಇಲಾಖೆ ಒತ್ತಡಕ್ಕೆ ಮಣಿದು ಅಮಾಯಕರನ್ನು ಬಂಧಿಸದ ರೀತಿಯಲ್ಲಿ ಗಮನ ಹರಿಸಬೇಕು ಎಂದರು

ಎಐಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿಜಯ ಭಾಸ್ಕರ್ ಮಾತನಾಡಿ, ಬಂಡವಾಳ ಹೂಡಿಕೆಗೆ ಭೂಮಿ ಕಳೆದುಕೊಂಡವರನ್ನು ಖಾಯಂ ಮಾಡಿದ್ದರಾ ಮಾಲೀಕರು ಈ ನೆಲದ ಬಗ್ಗೆ ಅಗೌರವ ತರಲು ಹೊರಟಿದ್ದಾರೆ ವಿಸ್ಟ್ರಾನ್ ಕಂಪನಿಯ ಕಾರ್ಮಿಕರ ಪರವಾಗಿ ಜೆಸಿಟಿಯು ನಿಲ್ಲಲಿದೆ ಸರಕಾರದ ಮೇಲೆ ಸಂಸದರು ಒತ್ತಡ ತಂದು ತನಿಖೆಯನ್ನು ದಿಕ್ಕು ತಪ್ಪಸುತ್ತಾ ಇದ್ದಾರೆ ಕಾರ್ಮಿಕರು ತಪ್ಪು ಮಾಡುದ್ರು ಎಂದು ಕ್ರಿಮಿನಲ್ ರೀತಿಯಲ್ಲಿ ಅವರನ್ನು ನೋಡುವುದು ತಪ್ಪು ನಿಷ್ಪಕ್ಷಪಾತವಾಗಿ ತನಿಖೆಯಾಗಿ ಜನತೆಯ ಮುಂದೆ ಬಹಿರಂಗ ಪಡಿಸಬೇಕು ಏಕ ಪಕ್ಷಕೀಯಾವಾಗಿ ಹೇಳಿಕೆ ನೀಡುವುದು ತಪ್ಪು ಎಂದರು.

ಸಿಐಟಿಯು ರಾಜ್ಯ ಅಧ್ಯಕ್ಷೆ ಎಸ್. ವರಲಕ್ಷ್ಮೀ ಮಾತನಾಡಿ, ಸಂಸದರು ಹೇಳುವ ಪ್ರಕಾರ ಪ್ರಗತಿ ನನ್ನ ಕೈಲಿ ಇದೆ ಎಂದು ತನಿಖೆಯನ್ನು ಏಕಮುಖದಲ್ಲಿ ನೋಡುವುದು ಬಿಟ್ಟು ಕಾರ್ಮಿಕರು ದುಡಿದರೆ ಮಾತ್ರ ಅಭಿವೃದ್ಧಿ ಕಾರ್ಖಾನೆಗಳ ವಿಚಾರವಾಗಿ ಇನ್ನೊಂದು ಮುಖವಾಗಿ ನೋಡಬೇಕು ಕಂಪನಿಯಲ್ಲಿ ಹತ್ತು ಸಾವಿರ ಕಾರ್ಮಿಕರನ್ನು ಕೆಲಸಕ್ಕೆ ದುಡಿಸಿಕೊಳ್ಳಕ್ಕೆ ಅನುಮತಿ ನೀಡಿದವರು ಯಾರು ಗುತ್ತಿಗೆದಾರನಿಗೆ ಹಣ ಎಷ್ಟು ಬಿಡುಗಡೆಯಾಗಿದೆ ಅದರಲ್ಲಿ ಕಾರ್ಮಿಕರಿಗೆ ಎಷ್ಟು ಪ್ರಮಾಣದಲ್ಲಿ ಸೇರಿದೆ ಎಂಬುದು ತನಿಖೆಯಾಗಬೇಕು ಜಿಲ್ಲಾಡಳಿತ, ಕಾರ್ಮಿಕ ಇಲಾಖೆ, ರಾಜ್ಯ ಸರ್ಕಾರ ಬಾಯಿಗೆ ಬಂದಂತೆ ಘಟನೆ ಬಗ್ಗೆ ಹೇಳುತ್ತಿವುದು ಸರಿಯಲ್ಲ ಎಂದರು

ಪತ್ರಿಕಾಗೋಷ್ಠಿಯಲ್ಲಿ ಜೆಸಿಟಿಯು ಮುಖಂಡರಾದ ಶ್ಯಾಮಣ್ಣರೆಡ್ಡಿ, ಕೆ.ವಿ ಭಟ್, ಜಿ.ಆರ್ ಶಿವಶಂಕರ್, ಅಪ್ಪಣ್ಣ, ನಾಗನಾಥ್, ಕಾಳಪ್ಪ, ಷಣ್ಮುಖ, ಸತ್ಯಾನಂದ್, ಗಾಂಧಿನಗರ ನಾರಾಯಣಸ್ವಾಮಿ, ಯಲ್ಲಪ್ಪ, ಇದ್ದರು.







ರಾಜ್ಯದಾದ್ಯಂತ ಡಿಹೆಚ್‌ಎಸ್ ನಿಂದ ಅಂಬೇಡ್ಕರ್ ಪರಿನಿರ್ಮಾಣ ದಿನ ಆಚರಣೆ



ಡಾ|| ಬಿ.ಆರ್. ಅಂಬೇಡ್ಕರ್ ರವರ ಪರಿ ನಿರ್ವಾಣ ದಿನದ ರಾಜ್ಯದಾದ್ಯಂತ ಡಿಸೆಂಬರ್ 6 ರಂದು ದಲಿತ ಹಕ್ಕುಗಳ ಸಮಿತಿ ಕರ್ನಾಟಕ ರಾಜ್ಯ ಸಮಿತಿ ಕರೆಯ ಮೇರೆಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಜಾಥ, ವಾಹನ ಜಾಥ್, ಬೈಕ್ ರ್ಯಾಲಿ ನಡೆಸಿ ಅಂದು ಸಂಜೆ 7 ಗಂಟೆಗೆ ಎಲ್ಲಾ ಶಾಖೆಗಳಲ್ಲಿ ಕಾರ್ಯಕರ್ತರು ಕ್ಯಾಂಡಲ್ ದೀಪ ಬೆಳಗಿಸಿ ಅಂಬೇಡ್ಕರ್ ರವರಿಗೆ ನಮನ ಸಲ್ಲಿಸಲು ನಿರ್ಧರಿಸಲಾಗಿತ್ತು. ರಾಜ್ಯದ ಮಂಡ್ಯ, ಮೈಸೂರು, ಬೆಂಗಳೂರು, ಉತ್ತರ ಮತ್ತು ದಕ್ಷಿಣ, ತುಮಕೂರು, ಬಳ್ಳಾರಿ, ಕಲಬುರಗಿ, ದ.ಕ. ಜಿಲ್ಲೆ, ರಾಮನಗರ ಜಿಲ್ಲೆಗಳಲ್ಲಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಸಂವಿಧಾನ ಪೀಠಿಕೆ ಹಾಗೂ ಪ್ರತಿಜ್ಞೆ ಸ್ವೀಕಾರವನ್ನು ನಡೆಸಲಾಯಿತು.

ಡಿ 7, 2020 ರಂದು ದಲಿತ ಶೋಷಣ್ ಮುಕ್ತಿ ಮಂಚನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಮಚಂದ್ರ ರವರು "ಮನುವಾದ ತಿರಸ್ಕರಿಸಿ ಸಂವಿಧಾನ ಉಳಿಸಿ" ಉಪನ್ಯಾಸ ಮಾಲಿಕೆಯನ್ನು ಮಾಡಿದರು.

ಸರ್ಕಾರವೂ ಸಹ ಕೇಂದ್ರದ ಈ ಎಲ್ಲ ಕಾಯ್ದೆಗಳನ್ನು ರಾಜ್ಯದಲ್ಲೂ ಅನುಷ್ಠಾನಕ್ಕೆ ತರಲು ಸುಗ್ರೀವಾಜ್ಞೆಗಳನ್ನು ಬಳಸುತ್ತ, ವಿಧಾನಮಂಡಲದಲ್ಲೂ ಕಾಯ್ದೆಯಾಗಿ ಪಾಸು ಮಾಡಿಕೊಳ್ಳಲು ಹವಣಿಸಿದೆ. ಅಲ್ಲದೆ, ಕಾರ್ಪೋರೇಟ್ ಕಂಪನಿಗಳು, ಭೂಗಳ್ಳ ಮಾಫಿಯಾಗಳು ಹಾಗೂ ಕಪ್ಪುಹಣದ ತಿಮಿಂಗಿಲಗಳು ತಮಗೆ ಬೇಕಾದಂತೆ, ಬೇಕಾದ ಕೃಷಿಯೇತರ ಲಾಭಕೋರ ಉದ್ದೇಶಕ್ಕೆ, ಬೇಕಾದಷ್ಟು ಕೃಷಿ ಭೂಮಿಯನ್ನು ಖರೀದಿಸಲು, ವ್ಯವಸಾಯದಲ್ಲಿ ತೊಡಗಲು ಅನುಕೂಲವಾಗುವಂತೆ ‘ಕರ್ನಾಟಕ ಭೂ ಸುಧಾರಣೆ ಕಾಯ್ದೆ–1961’ಕ್ಕೆ ಕೃಷಿಗೆ ಮಾರಕವಾಗುವಂತಹ ತಿದ್ದುಪಡಿಗಳನ್ನು ಮಾಡಿ ರೈತರನ್ನು ದಿವಾಳಿಯಾಗಿಸಲು ಹೊರಟಿದೆ. ಅದೇ ರೀತಿಯಲ್ಲಿ ಕಾರ್ಪೋರೇಟ್ ಕಂಪನಿಗಳ ಮುಂಗಡ ಕೃಷಿ ವ್ಯಾಪಾರಕ್ಕೆ ಅನೂಕೂಲವಾಗುವಂತೆ ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ಮಾಡಿದೆ. ಇದರ ವಿರುದ್ಧ ಕರ್ನಾಟಕದ ಸಮಸ್ತ ರೈತಾಪಿ ಜನತೆ ತಿಂಗಳುಗಟ್ಟಲೆ ಹೋರಾಟ ಮಾಡಿದರೂ ಸರ್ಕಾರ ಅದಕ್ಕೆ ಕಿವಿಗೊಡುತ್ತಿಲ್ಲ.

ಇಷ್ಟು ಸಾಲದೆಂಬಂತೆ, ಕಾರ್ಪೋರೇಟ್ ಕಂಪನಿಗಳ ಲೂಟಿಗೆ ನೆರವಾಗಲು, ರೈತರಿಗೆ ಮಾರಕವಾಗುವಂತಹ ಜಾನುವಾರು ಹತ್ಯ ನಿಷೇಧ(ತಿದ್ದುಪಡಿ) ಕಾಯ್ದೆಯನ್ನು ಜಾರಿಗೊಳಿಸಲು ಸರ್ಕಾರ ಸಜ್ಜಾಗಿದೆ. ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಅನಾದಿ ಕಾಲದಿಂದಲೂ ರೈತರು ತಮ್ಮ ಅಗತ್ಯಕ್ಕೆ ತಕ್ಕಂತೆ ಜಾನುವಾರುಗಳನ್ನು ಸಾಕುತ್ತ, ದನಕರುಗಳನ್ನು ಗೋಮಾತೆಯೆಂದು ಪೂಜಿಸುತ್ತ ಬಂದಿದ್ದಾರೆ. ಅನುಪಯುಕ್ತವಾದವುಗಳನ್ನು ವಿಲೇವಾರಿ (ಡಿಸ್ಪೋಸ್) ಮಾಡುತ್ತಲೂ ಬಂದಿದ್ದಾರೆ. ದೇಸೀ ತಳಿಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಸರ್ಕಾರಗಳು ಸರಿಯಾಗಿ ಗಮನ ನೀಡದೆ ಹೋದ ಕಾರಣ ಹಲವು ಗೋ ತಳಿಗಳು ಅವಸಾನದ ಹಂತ ತಲುಪಿವೆಯೇ ಹೊರತು, ರೈತರು ಅನುಪಯುಕ್ತ ಜಾನುವಾರುಗಳನ್ನು ವಿಲೇವಾರಿ ಮಾಡಿದ್ದರಿಂದಾಗಲಿ, ಅಂಥವುಗಳ ಮಾಂಸವನ್ನು ಕೆಲವು ಜನಸಮುದಾಯಗಳು ಆಹಾರವಾಗಿ ಬಳಸುತ್ತ ಬಂದುದರಿಂದಾಗಲಿ ದೇಶದಲ್ಲಿ ಯಾವತ್ತೂ ದನಕರುಗಳ/ಜಾನುವಾರುಗಳ ಕೊರತೆ ಉಂಟಾಗಿಲ್ಲ. ಈಗ ಬಿಜೆಪಿ ಸರ್ಕಾರ ತರಲು ಹೊರಟಿರುವ ಕಾಯ್ದೆ ಕೇವಲ ದುರುದ್ದೇಶದಿಂದ ಕೂಡಿದ್ದು, ಅದರಿಂದಾಗಿ ರೈತರು ಜಾನುವಾರು ಸಾಕುವುದನ್ನೇ ಕೈಬಿಡುವಂತಾಗಿ, ಕೃಷಿ ಬದುಕಿನ ಮೇಲೆ, ಹೈನುಗಾರಿಕೆಯ ಮೇಲೆ ಹಾಗೂ ಕೃಷಿ ಆರ್ಥಿಕತೆಯ ಮೇಲೆ ತೀವ್ರವಾದ ಮಾರಕ ಪರಿಣಾಮಗಳು ಉಂಟಾಗುತ್ತವೆ. ಇರುವ ದನಕರುಗಳ ಸಂತತಿಯೂ ಕ್ರಮೇಣ ಅವಸಾನಗೊಳ್ಳುತ್ತದೆ. ಹೈನೋದ್ಯಮ, ಮಾಂಸೋದ್ಯಮ ಮತ್ತು ಚರ್ಮೋದ್ಯಮಗಳು ಕಾರ್ಪೋರೇಟ್ ಲೂಟಿಯ ಪಾಲಾಗಲಿವೆ.


ಆದಕಾರಣ, ಕರ್ನಾಟಕ ಸರ್ಕಾರ ವಿಧಾನ ಮಂಡಲದಲ್ಲಿ ಪಾಸು ಮಾಡಿಕೊಂಡಿರುವ ಭೂ ಸುಧಾರಣಾ ತಿದ್ದುಪಡಿ ಮಸೂದೆ–2020, ಎಪಿಎಂಸಿ ತಿದ್ದುಪಡಿ ಮಸೂದೆ–2020, ಜಾನುವಾರು ಹತ್ಯ ನಿಷೇಧ ತಿದ್ದುಪಡಿ ಮಸೂದೆ–2020 ಮತ್ತು ಕಾರ್ಮಿಕ ಕಾಯ್ದೆ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಬೇಕು, ಕೇಂದ್ರ ಸರ್ಕಾರ ತಂದಿರುವ ಕಾಯ್ದೆಗಳನ್ನು ರಾಜ್ಯದಲ್ಲಿ ಜಾರಿ ಮಾಡಬಾರದು ಎಂದು ಎಐಕೆಎಸ್‌ಸಿಸಿ ರಾಜ್ಯ ಘಟಕ ಆಗ್ರಹಿಸಿದೆ. ಈ ನಿಟ್ಟಿನಲ್ಲಿ ಎಐಕೆಎಸ್‌ಸಿಸಿಯು ಸಮಸ್ತ ರೈತ–ದಲಿತ–ಕಾರ್ಮಿಕ ಹಾಗೂ ಜನಪರ ಸಂಘಟನೆಗಳ ಸಹಯೋಗದೊಂದಿಗೆ ಡಿಸೆಂಬರ್ 16 ರಿಂದ ಬೆಂಗಳೂರಿನ ಮೌರ್ಯ ಸರ್ಕಲ್ ಗಾಂಧಿ ಪ್ರತಿಮೆ ಬಳಿ ನಿರಂತರ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಿದೆ. ರೈತಾಪಿಯ ಈ ಎಲ್ಲ ಹಕ್ಕೊತ್ತಾಯಗಳು ಈಡೇರುವವರೆಗೂ ಹೋರಾಟಗಳು ನಿಲ್ಲುವುದಿಲ್ಲ, ಇದರಿಂದ ಉಂಟಾಗುವ ಯಾವುದೇ ದುಷ್ಪರಿಣಾಮಗಳಿಗೆ ಸರ್ಕಾರವೇ ನೇರ ಹೊಣೆಯಾಗಬೇಕಾಗುತ್ತದೆ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಬಯಸುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸುಳ್ಳು ಮತ್ತು ಅಪಪ್ರಚಾರಗಳಿಂದ ಜನತೆಯ ದಿಕ್ಕು ತಪ್ಪಿಸುವುದನ್ನು ಬಿಟ್ಟು, ಈ ಎಲ್ಲ ಜನವಿರೋಧಿ ಕಾಯ್ದೆಗಳನ್ನೂ ಕೈಬಿಡಬೇಕು ಹಾಗೂ ದೇಶದ, ಜನತೆಯ ನೈಜ ಸಮಸ್ಯೆಗಳ ಪರಿಹಾರಕ್ಕೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಎಐಕೆಎಸ್‌ಸಿಸಿ ರಾಜ್ಯ ಘಟಕ ಒತ್ತಾಯಿಸಿದೆ. ■

ಡಿಸೆಂಬರ್ 18, ಅಂತರರಾಷ್ಟ್ರೀಯ ಅಲ್ಪಸಂಖ್ಯಾತರ ಹಕ್ಕುಗಳ ದಿನ


ಅಲ್ಪಸಂಖ್ಯಾತರ ಹಕ್ಕುಗಳ ದಮನ ನಿಲ್ಲುವುದು ಯಾವಾಗ?

ಶಮೀಮಾ ಕೆ.ಪಿ.

ಡಿಸೆಂಬರ್ 18 ರಂದು ಅಂತರರಾಷ್ಟ್ರೀಯ ಅಲ್ಪಸಂಖ್ಯಾತರ ದಿನವನ್ನು ಆಚರಿಸಲಾಗುತ್ತಿದೆ. ಡಿಸೆಂಬರ್ 10ರ ಮಾನವ ಹಕ್ಕುಗಳ ದಿನಾಚರಣೆಯ ನಂತರದಲ್ಲಿ ಬರುವ ಈ ದಿನಾಚರಣೆಯು ಸದ್ದಿಲದೆ ಕಳೆದು ಹೋಗುತ್ತದೆ. ಭಾಷಾ, ಧಾರ್ಮಿಕ, ವರ್ಣ, ಲೈಂಗಿಕ ಇತ್ಯಾದಿ ಎಲ್ಲ ಅಲ್ಪಸಂಖ್ಯಾತರ ಸ್ಥಾನಮಾನ ಬಗ್ಗೆ ಗಮನಿಸಿ, ಅವರ ಹಕ್ಕುಗಳನ್ನು ರಕ್ಷಿಸಲು ಪೂರಕವಾಗಿ ಅರಂಭವಾದದ್ದು ಈ ದಿನ. ಅಂದರೆ 1992 ರ ಡಿಸೆಂಬರ್ 18 ರಂದು ಧಾರ್ಮಿಕ, ಭಾಷಾ, ರಾಷ್ಟ್ರೀಯ ಮತ್ತು ಜನಾಂಗೀಯ ಅಲ್ಪಸಂಖ್ಯಾತರ ಹಕ್ಕುಗಳ ಹೇಳಿಕೆಯನ್ನು ವಿಶ್ವ ಸಂಸ್ಥೆಯಲ್ಲಿ ಅಂಗೀಕರಿಸಲಾಯಿತು. ಇದರ ಅನ್ವಯ ಅಲ್ಪ ಸಂಖ್ಯಾತರ ಧಾರ್ಮಿಕ, ಭಾಷಾ, ಮತ್ತು ರಾಷ್ಟ್ರೀಯ, ಸಾಂಸ್ಕೃತಿಕ ಐಡೆಂಟಿಟಿಗಳನ್ನು ಗೌರವಿಸಬೇಕು ಮತ್ತು ರಕ್ಷಿಸಬೇಕು ಎಂದಿದೆ. ಅದರ ವಾಸ್ತವಿಕ ಜಾರಿಯ ಇತಿಹಾಸದ ಕುರಿತ ಸಂಕ್ಷಿಪ್ತ ನೋಟ ಆಶಾದಾಯಕವಾಗಿಲ್ಲ.







ಜಗತ್ತಿನಾದ್ಯಂತ ಅಲ್ಪ ಸಂಖ್ಯಾತ ಹಕ್ಕುಗಳ ಮೇಲೆ ನಿರಂತರವಾಗಿ ದಾಳಿ ದಬ್ಬಾಳಿಕೆ ದೌರ್ಜನ್ಯಗಳು ಸಮಕಾಲೀನ ಸಂದರ್ಭದಲ್ಲಿ ಕಾಣಸಿಗುತ್ತವೆ. ಅಲ್ಪಸಂಖ್ಯಾತರೆಂದರೆ ಜನಾಂಗೀಯ, ವರ್ಣೀಯ, ಧಾರ್ಮಿಕ, ಭಾಷಾ ಮತ್ತು ಲೈಂಗಿಕ ಅಧಾರದಲ್ಲಿ ಸಂಖ್ಯೆಯಲ್ಲಿ ಕಡಿಮೆ ಇರುವ ಜಗತ್ತಿನಾದ್ಯಂತ ಹರಡಿಕೊಂಡಿರುವ ಜನಸಮುದಾಯಗಳು. ಸ್ವಾಭಾವಿಕ ನ್ಯಾಯದಡಿಯಲ್ಲಿ, ಮಾನವ ಹಕ್ಕುಗಳಡಿಯಲ್ಲಿ, ಅಂತರರಾಷ್ಟ್ರೀಯ ಕಾನೂನು/ಒಡಂಬಡಿಕೆಗಳು ಹಾಗು ದೇಶಗಳ ಸಂವಿಧಾನದಡಿಯಲ್ಲಿ ನೀಡಲಾಗಿರುವ ಹಕ್ಕುಗಳನ್ನು ಚಲಾಯಿಸಲಾಗದ ದಯನೀಯ ಸ್ಥಿತಿಯಲ್ಲಿ ಇಂದು ಅಲ್ಪಸಂಖ್ಯಾತರಿದ್ದಾರೆ ಎಂದರೆ ಅತಿಶಯೋಕ್ತಿಯೆನಲ್ಲ.

ಅಲ್ಪಸಂಖ್ಯಾತರ ಹಕ್ಕು ಭಾದ್ಯತೆಗಳಿಗಾಗಿ ನಾಗರಿಕ ಸಮಾಜದಲ್ಲಿ ಕಳೆದೆರಡು ಶತಮಾನಗಳಿಂದಲೇ ಚಳುವಳಿಗಳು ನಡೆಯುತ್ತಿರುವುದನ್ನು ಗುರುತಿಸ ಬಹುದಾಗಿದೆ. ಕ್ರಿ.ಶ. 1814 ರಲ್ಲಿ ವಿಯೆನ್ನಾ ಕಾಂಗ್ರೇಸ್ ನಲ್ಲಿ ಜರ್ಮನಿಯ ಅಲ್ಪ ಸಂಖ್ಯಾತರಾದ ಯಹೂದಿಗಳು ಮತ್ತು ಪೋಲಾಂಡ್ ನಾಗರೀಕರ ಹಕ್ಕುಗಳ ಬಗ್ಗೆ ಚರ್ಚಿಸಲಾಗಿತ್ತು. ಈ ಕಾಂಗ್ರೇಸ್ ಪ್ರಷ್ಯಾ, ರಷ್ಯಾ, ಆಸ್ಟ್ರಿಯಾ ಮುಂತಾದ ರಾಷ್ಟ್ರಗಳಲ್ಲಿ ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸಬಹುದೆಂಬ ಆಶಯವನ್ನು ವ್ಯಕ್ತಪಡಿಸಿತ್ತು. ಆದರೂ ಅಲ್ಲಿನ ಅಳರಸರು ಈ ಅಶಯಗಳನ್ನು ಧಿಕ್ಕರಿಸಿ ಮತ್ತಷ್ಟು ವ್ಯವಸ್ಥಿತವಾಗಿ ತಾರತಮ್ಯಗಳನ್ನು ಮುಂದುವರಿಸಿದರು.

ಇತಿಹಾಸದಲ್ಲಿ ಅಲ್ಪಸಂಖ್ಯಾತರು

ಹೀಗೆ ಇತಿಹಾಸದ ಪುಟಗಳನ್ನು ಅವಲೋಕಿಸುತ್ತಾ ಹೋದಲ್ಲಿ ಜಗತ್ತಿನಾದ್ಯಂತ ಅಲ್ಪಸಂಖ್ಯಾತರ ಮೇಲಿನ ದಾಳಿ ದಬ್ಬಾಳಿಕೆಗಳು ಮುಂದುವರಿದಿರುವುದು ಮತ್ತು ಅ ಕುರಿತು ಚರ್ಚೆ, ಪ್ರತಿರೋಧಗಳು ಬೆಳೆದಿರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದಾಗಿದೆ. ಕ್ರಿ.ಶ. 1844 ರಲ್ಲಿ ಪ್ರಥಮಬಾರಿಗೆ ಹಂಗೇರಿಯ ಪಾರ್ಲಿಮೆಂಟ್ ಅಲ್ಪ ಸಂಖ್ಯಾತರ ಹಕ್ಕುಗಳಿಗೆ ಮನ್ನಣೆ ನೀಡಿತು. ಕ್ರಿ.ಶ.1867 ರಲ್ಲಿ ಆಸ್ಟ್ರಿಯ ದೇಶದಲ್ಲಿ ಅಲ್ಪಸಂಖ್ಯಾತರ ಹಕ್ಕುಗಳ ಕುರಿತು ಸಂಹಿತೆಗಳನ್ನು ರಚಿಸಲಾಯಿತು.

ಈ ನಡುವೆ ಪ್ರಥಮ ಜಾಗತಿಕ ಮಹಾಯುದ್ದದ ನಂತರ ಅಂತರರಾಷ್ಟ್ರೀಯ ಮಟ್ಟದಲ್ಲಿ ಅಲ್ಪ ಸಂಖ್ಯಾತರ ಸಂರಕ್ಷಣೆಯ ವಿಚಾರವು ಚರ್ಚೆಗೆ ಬಂದು ವರ್ಸೆಲ್ ಶಾಂತಿ ಸಮ್ಮೇಳನದ ಉನ್ನತ ಸಮಿತಿಯು "ದ ಕಮಿಟಿ ಆನ್ ನ್ಯೂ ಸ್ಟೇಟ್ಸ್ & ಫೋರ್ ದ ಪ್ರೊಟೆಕ್ಷನ್ ಆಫ್ ಮೈನಾರಿಟಿಸ' ಅನ್ನು ಸ್ಥಾಪಿಸಲಾಯಿತು. ಇದರ ಭಾಗವಾಗಿ ಎಲ್ಲಾ ಸದಸ್ಯ ದೇಶಗಳು ಕೂಡ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಯ ಘೋಷಣೆ ನೀಡುವ ರಾಜ ತಾಂತ್ರಿಕ ಅನಿವಾರ್ಯತೆಗೆ ಒಳಗಾದವು.

ಎರಡನೇ ಜಾಗತಿಕ ಮಹಾ ಯುದ್ದದ ಸುತ್ತ ಮುತ್ತ ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್ ತನ್ನ ರಾಜಕೀಯ ವೈರಿಗಳಿಗೆ ಹಾಗು ಅಲ್ಪ ಸಂಖ್ಯಾತರ ಮೇಲೆ ನಡೆಸಿದ ಅಮಾನವೀಯ, ರಾಕ್ಷಸಿಯ ದಾಳಿಗಳು ಇಂದು ಸಹ ಇತಿಹಾಸದ ಪುಟಗಳಲ್ಲಿ ರಕ್ತಸಿಕ್ತವಾದ ಅಧ್ಯಾಯಗಳಾಗಿ ಉಳಿದಿವೆ. ರಷ್ಯದ ಕೆಂಪು ಸೇನೆ ಹಿಟ್ಲರ್ ಸೃಷ್ಟಿಸಬಹುದಾದ ಮತ್ತಷ್ಟು ನರಕಯಾತನೆಗಳನ್ನು ತಡೆಯದೆ ಹೋಗಿದ್ದಲ್ಲಿ ಜಗತ್ತಿನ ಲಕ್ಷಗಟ್ಟಲೆ ಅಮಾಯಕರು ಬಲಿಯಾಗುತ್ತಿದ್ದರು. 2ನೇ ಮಹಾ ಯುದ್ದದ ನಂತರದಲ್ಲಿ ಅಲ್ಪಸಂಖ್ಯಾತರ ಹಕ್ಕುಗಳು ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಒಡಂಬಡಿಕೆಯ ಭಾಗವಾದ ಕಾರಣ ಈ ಹಕ್ಕುಗಳಿಗೆ ಜಾಗತಿಕ ಮಾನ್ಯತೆ ದೊರೆಯುವಂತಾಯಿತು.

ಈ ಹಿನ್ನೆಲೆಯಲ್ಲಿ ವಿವಿಧ ಅಲ್ಪಸಂಖ್ಯಾತರ ಹಕ್ಕುಗಳ ಅಂತರರಾಷ್ಟ್ರೀಯ ಕಾನೂನುಗಳ ಉಗಮಕ್ಕೆ ದಾರಿಯಾಯಿತು. ಧಾರ್ಮಿಕ, ಭಾಷಿಕ, ಜನಾಂಗೀಯ ಹಾಗು ಮೂಲನಿವಾಸಿಗಳ ಹಕ್ಕುಗಳನ್ನು ಸಹ ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಭಾಗವಾಗಿ ಪರಿಗಣಿಸ ಬೇಕಾಗಿದೆ. ಮಕ್ಕಳು, ಮಹಿಳೆಯರು, ನಿರಾಶ್ರಿತರ ಹಕ್ಕುಗಳು, ಹಾಗು ಅಲ್ಪಸಂಖ್ಯಾತರ ಹಕ್ಕುಗಳು, ದುರ್ಬಲ ಜನ ಸಮುದಾಯಗಳು ಮತ್ತು ಸಮಾಜದಂಚಿನಲ್ಲಿರುವವರ ರಕ್ಷಣೆಗೆ ಹಾಗು ಜನಾಂಗೀಯ ಹತ್ಯೆಗಳ ತಡೆಗೆ ಅಂತರರಾಷ್ಟ್ರೀಯ ಕಾನೂನಿನ ಚೌಕಟ್ಟು ರೂಪಗೊಳ್ಳಲು 20ನೇ ಶತಮಾನದಲ್ಲಿ ಸಾಧ್ಯವಾಯಿತು.

ನಾಗರಿಕ ಹಾಗು ರಾಜಕೀಯ ಹಕ್ಕುಗಳ ಕುರಿತು ಅಂತರರಾಷ್ಟ್ರೀಯ ಒಡಂಬಡಿಕೆಗಳು 1948 ರಲ್ಲಿ ಅಂಗೀಕರಿಸಲಾದ "ಸಾರ್ವತ್ರಿಕ ಮಾನವ ಹಕ್ಕುಗಳ ಘೋಷಣೆ"ಯ ಭಾಗವಾಗಿರುವುದರಿಂದ ಜಗತ್ತಿನ ಬಹುತೇಕ ರಾಷ್ಟ್ರಗಳ ಮೇಲೆ ಅಲ್ಪ ಸಂಖ್ಯಾತರ ಹಕ್ಕುಗಳ ರಕ್ಷಣೆಯ ಒತ್ತಡ ಉಂಟಾಯಿತು.


ಭಾರತದಲ್ಲಿ ಅಲ್ಪಸಂಖ್ಯಾತರು

ಭಾರತದಲ್ಲಿ ವಿಭಿನ್ನ ಅಲ್ಪಸಂಖ್ಯಾತರಿದ್ದಾರೆ. ಅದರೆ ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳ ದಮನವೇ ಪ್ರಧಾನ ಸ್ಥಾನ ಪಡೆಯುತ್ತದೆ. ದೇಶದ ಜನಸಂಖ್ಯೆಯ ಶೇ. 19.32 ಧಾರ್ಮಿಕ ಅಲ್ಪಸಂಖ್ಯಾತರು ಇದ್ದಾರೆ. ಶೇ. 14.23 ಮುಸ್ಲಿಮರು, ಶೇ. 0.70 ಬೌದ್ದರು, ಶೇ. 0.37 ಜೈನರು, ಶೇ. 1.72 ಸಿಖ್ಖರು, ಶೇ. 2.30 ಕ್ರೈಸ್ತರು ಮತ್ತು ಝೋರಾಷ್ಟ್ರೀಯರನ್ನು ಧಾರ್ಮಿಕ ಅಲ್ಪಸಂಖ್ಯಾತರು ಎಂದು ಗುರುತಿಸಲಾಗಿದೆ. ಭಾರತದ ಸಂವಿಧಾನವು ದೇಶದ ಎಲ್ಲಾ ನಾಗರೀಕರಿಗೆ ಸಮಾನ ಹಕ್ಕುಗಳನ್ನು ನೀಡಿದೆ. ಆದರೂ ಸಂವಿಧಾನ ಸಮರ್ಪಿಸಿಕೊಂಡು 71 ವರ್ಷಗಳು ಸಂದರೂ ಸಂವಿಧಾನಿಕ ಅಶಯಗಳನ್ನು ಜಾರಿಗೆ ತರುವಲ್ಲಿ ಕೊರತೆಗಳು ಸಾಕಷ್ಟಿವೆ. ಸಂವಿಧಾನದ 15ನೇ ವಿಧಿಯು "ದೇಶದ ಯಾವುದೇ ನಾಗರಿಕರ ನಡುವೆ ತಾರತಮ್ಯವನ್ನು ಮಾಡುವಂತಿಲ್ಲ." ಅಂದರೆ ರಾಷ್ಟ್ರಕವಿ ಕುವೆಂಪು ಅವರ ಕವಿವಾಣಿಯಂತೆ "ಸರ್ವರಿಗೂ ಸಮಪಾಲು. ಸರ್ವರಿಗೂ ಸಮ ಬಾಳು' ಎನ್ನುವುದನ್ನು ಸರ್ಕಾರ ಖಾತ್ರಿ ಪಡಿಸಬೇಕಾಗಿದೆ, ಅದರೆ ಆಳುವ ಸರಕಾರಗಳು ಸಹ ಧಾರ್ಮಿಕ ಅಲ್ಪಸಂಖ್ಯಾತ್ಯರ, ಮಹಿಳೆಯರ, ಮಕ್ಕಳ, ದಲಿತರ, ಆದಿವಾಸಿಗಳ ಮೇಲೆ ನಿರಂತರ ತಾರತಮ್ಯಗಳು, ದಾಳಿ ದಬ್ಬಾಳಿಕೆಗಳನ್ನು ನಡೆಯುತ್ತಿವೆ.

ಈ ದಾಳಿಗಳನ್ನು ವಿಶ್ಲೇಷಣೆಗೆ ಒಳಪಡಿಸಿದಲ್ಲಿ ಅದರ ಹಿಂದೆ ರಾಜಕೀಯ ಹಿತಾಸಕ್ತಿಗಾಗಿ ಸಂವಿಧಾನವನ್ನು ಗಾಳಿಗೆ ತೂರಿ ಜನತೆಯನ್ನು ಧರ್ಮಾಧಾರಿತವಾಗಿ ವಿಭಜನೆ ಮಾಡಲು, ಹಸಿ ಹಸಿ ಸುಳ್ಳುಗಳನ್ನು ಪ್ರಚಾರಮಾಡಿ, ಈ ಜನ ಸಮುದಾಯಗಳ ಮೇಲೆ ನಿರಂತವಾಗಿ ದಾಳಿಗಳು ನಡೆಸುತ್ತಿವೆ ಎಂಬುದು ಸಾಬೀತಾಗುತ್ತದೆ. ಓರಿಸ್ಸಾದ ಕ್ರೈಸ್ತ ಪಾದ್ರಿಯನ್ನು ಜೀವಂತವಾಗಿ ಸುಟ್ಟ ಘಟನೆಯಿಂದ ಅರಂಭಿಸಿ ಅಕ್ಲಾಖ್ ನ ಸಾವಿನ ತನಕ ಸಾವಿರಾರು ಅಮಾಯಕ ಜೀವಗಳನ್ನು ಬಲಿ ಪಡೆಯಲಾಗಿದೆ. ದೇಶದಲ್ಲಿ ಈಗಲೂ ಅಲ್ಪಸಂಖ್ಯಾತರು ಗುರುತಿಸುವಿಕೆ [ಐಡೆಂಟಿಟಿ], ರಕ್ಷಣೆ [ಸೆಕ್ಯೂರಿಟಿ], ಸಮಾನತೆ [ಇಕ್ವಾಲಿಟಿ] ಪಡೆಯುವಲ್ಲಿನ ಸಮಸ್ಯೆಗಳಿಂದ ಬಳಲುತಿದ್ದಾರೆ.

ದೇಶದ ಸಂವಿಧಾನವು ಧಾರ್ಮಿಕ ಆಚರಣೆಯ, ಆಯ್ಕೆಯ ಸ್ವಾತಂತ್ರವನ್ನು ನೀಡಿದೆ. ಅದರೂ ಅಲ್ಪಸಂಖ್ಯಾತರ ಅಚರಣೆಗಳು, ನಂಬಿಕೆಗಳ ನೆಪದಲ್ಲಿ ಪದೇ ಪದೇ ಸ್ಥಾಪಿತ ರಾಜಕೀಯ ಹಿತಾಸಕ್ತ ಗುಂಪುಗಳಿಂದ ದಾಳಿಗೆ ಒಳಗಾಗುತ್ತಿವೆ. ಅಲ್ಪಸಂಖ್ಯಾತರಿಂದ ತಾವು ಮಾಡದ ತಪ್ಪಿಗೆ ಉತ್ತರದಾಯಿತ್ವ ಬಯಸುವ ಮನಸ್ಥಿತಿಯನ್ನು ಈ ಗುಂಪುಗಳು ಹೊಂದಿವೆ. ಆಹಾರದ ಹಕ್ಕು, ಪ್ರತಿರೋಧ ತೋರುವ ಹಕ್ಕು, ವೃತ್ತಿ ಅಯ್ಕೆಯ ಹಕ್ಕು, ಅಭಿವ್ಯಕ್ತಿಯ ಹಕ್ಕುಗಳು ಸಹ ಈ ಮನಸ್ಥಿತಿಯ ಗುಂಪುಗಳಿಂದ ದಮನಕ್ಕೆ ಒಳಗಾಗುತ್ತಿವೆ.

ಮಾನವ ಹಕ್ಕುಗಳ ಮೇಲಿನ ಪ್ರಭುತ್ವ ಪ್ರಯೋಜಿತವಾದ ದಾಳಿಗಳು ಹೆಚ್ಚುತ್ತಿವೆ, ಹಾಗು ಈ ಸಂವಿಧಾನಬಾಹಿರ ನಡೆಗಳು ಇರುವ ಗುಂಪುಗಳ ರಕ್ಷಣೆಗೆ ಸರ್ಕಾರಗಳು ನಿಲ್ಲುತ್ತಿವೆ. ನ್ಯಾಯಾಂಗಕ್ಕೆ ಸಕಲ ಗೌರವಗಳನ್ನು ನೀಡುತ್ತಲೆ ನ್ಯಾಯಾಂಗವು ಇಂದು ಇದರ ಪ್ರಭಾವಲಯದ ಹೊರಗುಳಿದಿದೆಯೇ ಎಂದು ಪ್ರಶ್ನಿಸುವಂತಾಗಿದೆ.



ಅಲ್ಪಸಂಖ್ಯಾತರ ಹಕ್ಕುಗಳು ಮಾನವ ಹಕ್ಕುಗಳ ಭಾಗ ಎಂದು ಸಮಾಜ ಪರಿಭಾವಿಸಿ ಅದರ ರಕ್ಷಣೆಗೆ ನಿಲ್ಲದೆ ಒಟ್ಟಾರೆ ಸಮಾಜವು ಶಾಂತಿ-ಸೌಹಾರ್ದತೆ, ಬ್ರಾತೃತ್ವ, ಸಹಬಾಳ್ವೆಗಳಿಲ್ಲದೆ ನಲುಗಿಹೋಗುತ್ತದೆ, ನಾಗರಿಕ ಸಮಾಜ ಈ ನಿಟ್ಟಿನಲ್ಲಿ ಎಚ್ಚೆತ್ತು ಕೊಳ್ಳಬೇಕಾಗಿದೆ. ■



ಲೈಫ್ ಮಿಷನ್(ವಸತಿ ಯೋಜನೆ), ಆರ್ದ್ರಂ (ಆರೋಗ್ಯ ಯೋಜನೆ), ಸರ್ಕಾರಿ ಶಾಲೆಗಳನ್ನು ಉತ್ತಮಪಡಿಸುವ ಹಾಗೂ ಆಧುನೀಕರಣಗೊಳಸುವ ಮತ್ತು ಸಾಮಾಜಿಕ ಭದ್ರತೆ ಸವಲತ್ತುಗಳನ್ನು ಹೆಚ್ಚಿಸುವ ಎಲ್‌ಡಿಎಫ್ ಸರ್ಕಾರದ ವ್ಯಾಪಕವಾದ ಅಭಿವೃದ್ಧಿ ಕಾರ್ಯಕ್ರಮಗಳು ಈ ಜನಪ್ರಿಯ ತೀರ್ಪಿಗೆ ಕಾರಣವಾಗಿವೆ.



ಕೇರಳದಲ್ಲಿ ಗೆಲುವಿನ ಕಹಳೆ

ಪ್ರಕಾಶ ಕಾರಟ್

ಇದು ಎಲ್‌ಡಿಎಫ್‌ಗೆ ತಕ್ಕುದಾದ ಯೋಗ್ಯವಾದ ವಿಜಯವಾಗಿದೆ. ಕೇರಳದ ಅಭಿವೃದ್ಧಿಯ ಕಥನದಲ್ಲಿ ಚೈತನ್ಯಶೀಲ ಪಾತ್ರ ವಹಿಸಿರುವ ಸ್ವಯಮಾಡಳತ ಸಂಸ್ಥೆಗಳಿಗೆ ಅದು ಈಗ ನವಚೈತನ್ಯ ಕೊಡಲಿದೆ ಹಾಗೂ ಬಲಪಡಿಸಲಿದೆ.

ಕೇರಳದಲ್ಲಿನ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳ ಚುನಾವಣೆಗಳಲ್ಲಿ ಎಡ ಪ್ರಜಾಸತ್ತಾತ್ಮಕ ರಂಗ(ಎಲ್‌ಡಿಎಫ್)ವು ಅದ್ಭುತ ಜಯ ಸಾಧಿಸಿದೆ. ಎಲ್‌ಡಿಎಫ್ ಜಿಲ್ಲಾ ಪಂಚಾಯತುಗಳಲ್ಲಿ 14 ರಲ್ಲಿ 11, ಬ್ಲಾಕ್ ಪಂಚಾಯತುಗಳಲ್ಲಿ 152 ರಲ್ಲಿ 108, 941 ರಲ್ಲಿ 514 ಗ್ರಾಮ ಪಂಚಾಯತುಗಳಲ್ಲಿ ಜಯಗಳಿಸಿದೆ. ಆರು ಕಾರ್ಪೊರೇಷನ್ನುಗಳಲ್ಲಿ ಐದರಲ್ಲಿ ಮತ್ತು 86 ಮುನಿಸಿಪಾಲಿಟಿಗಳ ಪೈಕಿ 35 ರಲ್ಲಿ ಎಲ್‌ಡಿಎಫ್ ಗೆಲುವು ಸಾಧಿಸಿದೆ.(ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಎಲ್‌ಡಿಎಫ್ 551 ಗ್ರಾಮ ಪಂಚಾಯತುಗಳಲ್ಲಿ ಮತ್ತು 42 ನಗರಸಭೆಗಳಲ್ಲಿ ಬಹುಮತ ಪಡೆದಿದೆ, ಯುಡಿಎಫ್ ಸಂಖ್ಯೆ ಅನುಕ್ರಮವಾಗಿ 315 ಮತ್ತು 36ಕ್ಕೆ ಇಳಿದಿದೆ, ಎಂದು ವರದಿಯಾಗಿದೆ:

ಐದು ವರ್ಷಗಳ ಹಿಂದೆ, 2015 ರ ಚುನಾವಣೆಯ ಗೆಲುವಿಗಿಂತ ಈ ಬಾರಿ ಎಲ್‌ಡಿಎಫ್ ಇನ್ನೂ ಉತ್ತಮ ಸಾಧನೆ ಮಾಡಿರುವುದು ಮಹತ್ವಪೂರ್ಣವಾದುದು. ಆಗ, ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅಧಿಕಾರದಲ್ಲಿತ್ತು. ಈ ಚುನಾವಣೆಗಳು ಎಲ್‌ಡಿಎಫ್ ಸರ್ಕಾರದ ನಾಲ್ಕೂವರೆ ವರ್ಷಗಳ ನಂತರ ನಡೆದಿದೆ. ಆದ್ದರಿಂದ, ಈ ತೀರ್ಪು ಪಿಣರಾಯಿ ವಿಜಯನ್ ಸರ್ಕಾರದ ಸಾಧನೆಗಾಗಿ ಜನರ ಮೆಚ್ಚುಗೆಯೆಂದು ನೋಡಬಹುದು.

ಲೈಫ್ ಮಿಷನ್(ವಸತಿ ಯೋಜನೆ), ಆರ್ದ್ರಂ (ಆರೋಗ್ಯ ಯೋಜನೆ), ಸರ್ಕಾರಿ ಶಾಲೆಗಳನ್ನು ಉತ್ತಮಪಡಿಸುವ ಹಾಗೂ ಆಧುನೀಕರಣಗೊಳಿಸುವ ಮತ್ತು ಸಾಮಾಜಿಕ ಭದ್ರತೆ ಸವಲತ್ತುಗಳನ್ನು ಹೆಚ್ಚಿಸುವ ಎಲ್‌ಡಿಎಫ್ ಸರ್ಕಾರದ ವ್ಯಾಪಕವಾದ ಅಭಿವೃದ್ಧಿ ಕಾರ್ಯಕ್ರಮಗಳು ಈ ಜನಪ್ರಿಯ ತೀರ್ಪಿಗೆ ಕಾರಣವಾಗಿವೆ.

ಕೇರಳದಲ್ಲಿನ ಸ್ವಯಮಾಡಳಿತ ಸಂಸ್ಥೆಗಳು ಇಡೀ ದೇಶಕ್ಕೇ ಮಾದರಿಯಾಗಿವೆ. 25 ವರ್ಷಗಳ ಹಿಂದೆ 1996 ರಲ್ಲಿ ಎಲ್‌ಡಿಎಫ್ ಸರ್ಕಾರವು ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರವನ್ನು ಪರಿಣಾಮಕಾರಿಯಾಗಿ ವಿಕೇಂದ್ರೀಕರಿಸಿ, ಹಣಕಾಸನ್ನು ವರ್ಗಾಯಿಸಲು ಶಾಸನಗಳ ಬೆಂಬಲವನ್ನು ಒದಗಿಸಿತು. ಮೂರು ಸ್ತರಗಳ ಪಂಚಾಯತ್ ವ್ಯವಸ್ಥೆಯು ಅದರಡಿಯಲ್ಲಿ ಬರುವ ಸಂಸ್ಥೆಗಳಿಗೆ ಅಧಿಕಾರ ಹಾಗೂ ಜವಾಬ್ದಾರಿಯನ್ನು ಸ್ಪಷ್ಟವಾಗಿ ಗೊತ್ತು ಮಾಡಿದೆ. ಜಿಲ್ಲಾ ಮಟ್ಟದವರೆಗಿನ ಶಾಲೆಗಳು ಹಾಗೂ ಆಸ್ಪತ್ರೆಗಳು ಮತ್ತು ಜನರ ದಿನನಿತ್ಯದ ಬದುಕಿನ ಅಗತ್ಯತೆಗಳಿಗೆ ಒದಗುವ ಕೃಷಿ, ಮೀನುಗಾರಿಕೆ, ಸಣ್ಣ ನೀರಾವರಿ ಹಾಗೂ ಸಣ್ಣ ಕೈಗಾರಿಕಾ ವಲಯದ ಸಂಸ್ಥೆಗಳು ಮೂರು ಸ್ತರಗಳ ಪಂಚಾಯತ್ ವ್ಯಾಪಿಗೆ ಒಳಪಡುತ್ತವೆ. ರಸ್ತೆಗಳ ನಿರ್ವಹಣೆ ಹಾಗೂ ವಸತಿ, ನೈರ್ಮಲ್ಯ ಮತ್ತು ಕುಡಿಯುವ ನೀರಿನ ಸೌಲಭ್ಯಗಳಂತಹ ಮೂಲಭೂತ ಸೇವೆಗಳನ್ನು ಒದಗಿಸುವುದು ಅವುಗಳ ಹೊಣೆಯಾಗಿರುತ್ತವೆ.

ಜನರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಜತೆಯಲ್ಲೇ, ಕಳೆದ ನಾಲ್ಕೂವರೆ ವರ್ಷಗಳ ಎಲ್‌ಡಿಎಫ್ ಸರ್ಕಾರದ ಅಡಿಯಲ್ಲಿ, ಅಧಿಕಾರಯುತ ಸ್ಥಳೀಯ ಸಂಸ್ಥೆಗಳು 2018 ಹಾಗೂ 2019 ರ ತೀವ್ರತರದ ಪ್ರವಾಹ ನಿರ್ವಹಿಸುವಲ್ಲಿ ಮತ್ತು ಕೋವಿಡ್ ಮಹಾರೋಗವನ್ನು ಎದುರಿಸುವಲ್ಲಿ ಗಮನ ಸೆಳೆಯುವ ಸಾಧನೆ ಮಾಡಿವೆ. ಕೋವಿಡ್ ಮಹಾರೋಗದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವಲ್ಲಿ, ಕೋವಿಡ್ ಬಾಧಿತ ಜನರ ದತ್ತಾಂಶಗಳನ್ನು ಸಂಗ್ರಹಿಸುವಲ್ಲಿ, ಕ್ವಾರಂಟೈನ್ ನಿಯಮಗಳನ್ನು ಜಾರಿಗೊಳಿಸುವಲ್ಲಿ ಮತ್ತು ಜನರಿಗೆ, ಮುಖ್ಯವಾಗಿ ಕೋವಿಡ್ ಬಾಧಿತರಿಗೆ ಜೀವನಾವಶ್ಯಕ ವಸ್ತುಗಳನ್ನು ಪೂರೈಸುವಲ್ಲಿ ಸರಿಸುಮಾರು 1200 ಸ್ಥಳೀಯ ಸಂಸ್ಥೆಗಳು ರಾಜ್ಯ ಸರ್ಕಾರದೊಂದಿಗೆ ಸೇರಿಕೊಂಡು ವಿಶ್ವಸನೀಯ ಸಾಧನೆ ಮಾಡಿವೆ.

ಆದರೆ ಈ ಸಾಧನೆ, ಅಥವಾ ಸ್ಥಳೀಯ ಬೆಳವಣಿಗೆಗಳಿಗೆ ಸಂಬಂಧಪಟ್ಟ ಪ್ರಶ್ನೆಗಳು ವಿರೋಧಿಗಳಾದ ಕಾಂಗ್ರೆಸ್ ನೇತೃತ್ವದ ಯುಡಿಎಫ್‌ಗಾಗಲೀ ಅಥವಾ ಬಿಜೆಪಿಗಾಗಲೀ ಮುಖ್ಯವೆನಿಸಲಿಲ್ಲ. ಅವರ ಚುನಾವಣಾ ಪ್ರಚಾರವು ಕೇವಲ ಅಪಪ್ರಚಾರ ಹಾಗೂ ಮುಖ್ಯ ಮಂತ್ರಿಗಳು, ಸಚಿವರು ಹಾಗೂ ಸಿಪಿಐ(ಎಂ) ಮುಖಂಡರುಗಳ ಮೇಲೆ ಇಲ್ಲಸಲ್ಲದ ಭ್ರಷ್ಟಾಚಾರದ ಆರೋಪಗಳನ್ನು ಮಾಡುವುದಕ್ಕೇ ಸೀಮಿತವಾಗಿತ್ತು. ಚಿನ್ನ ಕಳ್ಳ ಸಾಗಾಣಿಕೆ ಪ್ರಕರಣ ಹಾಗೂ ಲೈಫ್ ಮಿಷನ್ ಮತ್ತಿತರ ಸರ್ಕಾರಿ ಯೋಜನೆಗಳಲ್ಲಿ ನೀತಿಭಂಗವಾಗಿದೆಯೆಂಬ ಬಗ್ಗೆ ಕಪೋಲಕಲ್ಪಿತ ಆಪಾದನೆಗಳನ್ನು ಮುಖ್ಯವಾಹಿನಿ ಮಾಧ್ಯಮಗಳೊಂದಿಗೆ ಸೇರಿಕೊಂಡು ಜನರಲ್ಲಿ ತಪ್ಪು ಕಲ್ಪನೆಗಳನ್ನು ಉಂಟುಮಾಡುವಲ್ಲಿ ಅವು ನಿರತವಾಗಿದ್ದವು. ದುರುದ್ದೇಶಪೂರಿತ ಸುಳ್ಳು ಸುದ್ದಿಗಳನ್ನು ಮಾಧ್ಯಮಗಳಿಗೆ ಸೋರಿಕೆ ಮಾಡಿ ಚುನಾವಣೆಯ ಸಂದರ್ಭದಲ್ಲಿ ಎಲ್‌ಡಿಎಫ್ ಸರ್ಕಾರದ ಹೆಸರು ಕೆಡಿಸಲು ಜಾರಿ ನಿರ್ದೇಶನಾಲಯ(ಇಡಿ)ಗಳಂತಹ ಕೇಂದ್ರ ಸರ್ಕಾರದ ಸಂಸ್ಥೆಗಳನ್ನು ಬಳಸಿಕೊಳ್ಳಲಾಯಿತು.



ಪಂಚಾಯತು ಚುನಾವಣಾ ಪ್ರಚಾರ

ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಇಂತಹ ಅಪಪ್ರಚಾರ ಮಾಡುವಲ್ಲಿ ಪೈಪೋಟಿ ನಡೆಸಿದವು. ಜನರ ಸೇವೆಯಲ್ಲಿ ಎಲ್‌ಡಿಎಫ್ ಸರ್ಕಾರ ಹಾಗೂ ಸ್ವಯಮಾಡಳಿತ ಸಂಸ್ಥೆಗಳ ಆದರ್ಶಪ್ರಾಯ ಸಾಧನೆಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯಲು ಎಲ್‌ಡಿಎಫ್ ಸರ್ಕಾರದ ಹೆಸರು ಕೆಡಿಸುವುದೊಂದೇ ಕಾಂಗ್ರೆಸ್–ಬಿಜೆಪಿಗೆ ಉಳಿದ ದಾರಿಯಾಗಿತ್ತು.

ಈ ನಕಾರಾತ್ಮಕ ಹಾಗೂ ಭಂಡ ಪ್ರಚಾರವನ್ನು ಕೇರಳದ ಜನತೆ ತಿರಸ್ಕರಿಸಿದೆ ಮತ್ತು ಎಲ್‌ಡಿಎಫ್ ಸರ್ಕಾರದ ಸಾಧನೆಯ ಬಗೆಗಿನ ಅವರದೇ ಆದ ಅನುಭವದ ಆಧಾರದಲ್ಲಿ ಮತಚಲಾವಣೆ ಮಾಡಿದ್ದಾರೆ.

ತನ್ನ ಸುಭದ್ರ ಕೋಟೆಯಾದ ಕೊಟ್ಟಾಯಂ ಜಿಲ್ಲೆ ಹಾಗೂ ಕೊಚ್ಚಿ ಮಹಾನಗರಪಾಲಿಕೆಯಲ್ಲಿ ಯುಡಿಎಫ್ ಸೋತಿರುವುದನ್ನು ಫಲಿತಾಂಶ ತೋರಿಸಿದೆ. ತಿರುವಂತಪುರ ಮಹಾನಗರಪಾಲಿಕೆಯಲ್ಲಿ ಗೆಲ್ಲಲೇಬೇಕೆಂದು ಹಠ ತೊಟ್ಟಿದ್ದ ಬಿಜೆಪಿ ಹಿಂದಿನ ಬಾರಿಗಿಂತ ಕಡಿಮೆ ಸ್ಥಾನ ಗಳಿಸಿದೆ.

ಇದು ಎಲ್‌ಡಿಎಫ್‌ಗೆ ತಕ್ಕುದಾದ ಯೋಗ್ಯವಾದ ವಿಜಯವಾಗಿದೆ. ಕೇರಳದ ಅಭಿವೃದ್ಧಿಯ ಕಥನದಲ್ಲಿ ಚೈತನ್ಯಶೀಲ ಪಾತ್ರ ವಹಿಸಿರುವ ಸ್ವಯಮಾಡಳಿತ ಸಂಸ್ಥೆಗಳಿಗೆ ಅದು ಈಗ ನವಚೈತನ್ಯ ಕೊಡಲಿದೆ ಹಾಗೂ ಬಲಪಡಿಸಲಿದೆ. ಮುಂದಿನ ವರ್ಷದ ಏಪ್ರಿಲ್–ಮೇನಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಗಾಗಿ ನಡೆಸುವ ತಯಾರಿಗೆ ಈ ವಿಜಯವು ಎಲ್‌ಡಿಎಫ್‌ನ ಆತ್ಮವಿಶ್ವಾಸವನ್ನು ಮತ್ತು ಸ್ಥೈರ್ಯವನ್ನು ಹೆಚ್ಚಿಸಲಿದೆ.

ಅನು: ಟಿ. ಸುರೇಂದ್ರ ರಾವ್

	ಒಟ್ಟು	ಎಲ್‌ಡಿಎಫ್	ಯುಡಿಎಫ್	ಬಿಜೆಪಿ	ಇತರರು
ಗ್ರಾಮ ಪಂಚಾಯತುಗಳು	941	551	315	10	4+61 *
ವಾರ್ಡುಗಳು	15962	7263	5892	1182	1620
ಬ್ಲಾಕ್ ಪಂಚಾಯತುಗಳು	152	108	44	–	–
ವಾರ್ಡುಗಳು	2080	1267	727	37	49
ಜಿಲ್ಲಾ ಪಂಚಾಯತುಗಳು	14	11	2	–	1 *
ವಾರ್ಡುಗಳು 331	331	212	110	2	6
ನಗರಸಭೆಗಳು	86	42	36	2	6 *
ವಾರ್ಡುಗಳು	3078	1167	1172	320	416
ಮಹಾನಗರಪಾಲಿಕೆಗಳು	6	5	1	–	–
ವಾರ್ಡುಗಳು	414	207	120	59	27

* ಯಾರಿಗೂ ಬಹುಮತವಿಲ್ಲದ ಪಂಚಾಯತು/ನಗರಸಭೆಗಳು

ಕೇರಳದಲ್ಲಿ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳ ಚುನಾವಣೆಗಳು 2015 ಮತ್ತು 2020

	ಎಲ್‌ಡಿಎಫ್		ಯುಡಿಎಫ್		ಬಿಜೆಪಿ	
	2015	2020	2015	2020	2015	2020
ಗ್ರಾಮ ಪಂಚಾಯತುಗಳು	549	551	365	315	14	10
ಬ್ಲಾಕ್ ಪಂಚಾಯತುಗಳು	89	108	62	44	–	–
ಜಿಲ್ಲಾ ಪಂಚಾಯತುಗಳು	7	11	7	2	–	–
ನಗರಸಭೆಗಳು	44	42	41	36	1	2
ಮಹಾನಗರಪಾಲಿಕೆಗಳು	4	5	2	1	–	–





ಕಾನೂನಿನಲ್ಲಿ ಯಾವುದೂ ಸ್ಪಷ್ಟವಾಗಿಲ್ಲ. ಸಾಮಾಜಿಕ ಭದ್ರತೆಗಳನ್ನು 'ಜಾರಿಮಾಡಬಹುದು', 'ನೀಡಬಹುದು', 'ಸೂಚಿಸಬಹುದು', 'ಕೊಡಬಹುದು' ಎನ್ನುವ ಭವಿಷ್ಯಕ ವಾಕ್ಯಗಳೇ ತುಂಬಿವೆ. ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ 'ಸಾಮಾಜಿಕ ಭದ್ರತಾ ನಿಧಿ' ಸ್ಥಾಪಿಸಲು 2020ರ ಸಾಮಾಜಿಕ ಭದ್ರತಾ ಸಂಹಿತೆ ಪ್ರಸ್ತಾಪಿಸಿದೆ. ನಾಲ್ಕು ಸಂಹಿತೆಯ ಅಡಿಯಲ್ಲಿ ಮಾಲಿಕರಿಗೆ ವಿಧಿಸಲಾದ ದಂಡಗಳಿಂದ ಸಂಗ್ರಹಿಸಲಾದ ಮೊತ್ತವನ್ನು ಈ ನಿಧಿಗೆ ಜಮಾ ಮಾಡಲಾಗುವುದು ಎಂದು ಮಾತ್ರ ಹೇಳಲಾಗಿದೆ. ಮಾಲಿಕರು ಕಾನೂನು ಉಲ್ಲಂಘಿಸಿದ್ದಾರೋ ಇಲ್ಲವೋ ಎಂದು ಇದುವರೆಗೂ ತಪಾಸಣೆ ಮಾಡಿ ದಂಡ ವಿಧಿಸುವ ಅಧಿಕಾರ "ಕಾರ್ಮಿಕ ನಿರೀಕ್ಷಕರಿಗೆ" ಇತ್ತು. ಈಗ ಆ ಹುದ್ದೆಯನ್ನು "ಫೆಸಿಲಿಟೇಟರ್" ಎಂದು ಬದಲಾಯಿಸಲಾಗಿದೆ ಮತ್ತು ಅವರಿಗೆ ಈಗಿರುವಂತೆ ತನಿಖೆ ಮಾಡುವ ದಂಡವಿಧಿಸುವ ಯಾವ ಅಧಿಕಾರವು ಇಲ್ಲ. ಹೀಗಿರುವಾಗ ದಂಡ ವಿಧಿಸುವುದು, ಆ ದಂಡ ಸಾಮಾಜಿಕ ಭದ್ರತಾ ನಿಧಿಗೆ ಬರುವುದು, ಅದರಿಂದ ಅಸಂಘಟಿತ ಕಾರ್ಮಿಕರಿಗೆ ಸೌಲಭ್ಯಗಳನ್ನು ನೀಡುವ ಪ್ರಶ್ನೆ ಎಲ್ಲಿಂದ ಬರುತ್ತದೆ?

ಸಾಮಾಜಿಕ ಸುರಕ್ಷತಾ ಸಂಹಿತೆ–2020

ಸಾಮಾಜಿಕ ಭದ್ರತೆ ಖಾತ್ರಿ ಇಲ್ಲ, ಕೇವಲ ಭರವಸೆ ಮಾತ್ರ

ಕೆ. ಮಹಾಂತೇಶ್

ಭಾರತ ಸರಕಾರ ಸಂಸತ್ತಿನ ಉಭಯ ಸದನಗಳಲ್ಲಿ ಸೆಪ್ಟೆಂಬರ್ 28 ರಂದು ಅಂಗೀಕರಿಸಿದ 'ಸಾಮಾಜಿಕ ಸುರಕ್ಷತಾ ಸಂಹಿತೆ 2020' ಕ್ಕೆ ಸೆಪ್ಟೆಂಬರ್ 28 ರಂದು ರಾಷ್ಟ್ರಪತಿಗಳು ಅಂತಿಮ ಮುದ್ರೆ ಹೊತ್ತಿದ್ದಾರೆ. ಇದಾದ ಬಳಿಕ 'ಸಾಮಾಜಿಕ ಸುರಕ್ಷತಾ ಸಂಹಿತೆ – 2020' ನ್ನು ಸೆಪ್ಟೆಂಬರ್ 29ರಂದು ಭಾರತ ಸರಕಾರದ ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸುವ ಮೂಲಕ ದೇಶದ 36 ನೇ ಕಾನೂನಾಗಿ ಜಾರಿಯಾಗಿದೆ. ಇದೀಗ ಕಾನೂನು ಜಾರಿ ಪ್ರಕ್ರಿಯೆಯಾಗಿ ನಿಯಮಾವಳಿಗಳನ್ನು ಪ್ರಕಟ ಮಾಡಿ ಆಕ್ಷೇಪಣೆ ಸಲ್ಲಿಸಲು ಸಮಯಾವಕಾಶ ನೀಡಲಾಗಿದೆ.

ಒಂಬತ್ತು ಕಾನೂನುಗಳ ರದ್ದು

ಕೇಂದ್ರ ಸರಕಾರದ ಹಾಲಿ ಜಾರಿಯಲ್ಲಿದ್ದ ಒಂಬತ್ತು ಕಾನೂನುಗಳನ್ನು 'ಸಾಮಾಜಿಕ ಸುರಕ್ಷತಾ ಸಂಹಿತೆ 2020 ರಲ್ಲಿ ವಿಲೀನಗೊಳಿಸಿ (ಕಲಂ 164ರಲ್ಲಿ) ರದ್ದುಗೊಳಿಸಿದೆ. ಅವುಗಳೆಂದರೆ: ನೌಕರರ ನಷ್ಟ ಪರಿಹಾರ ಕಾಯ್ದೆ 1923, ನೌಕರರ ರಾಜ್ಯ ವಿಮಾ ಕಾಯ್ದೆ (ಇ.ಎಸ್.ಐ) 1948, ನೌಕರರ ಭವಿಷ್ಯನಿಧಿ ಮತ್ತು ವಿವಿಧ ನಿಬಂಧಗಳ ಕಾಯ್ದೆ 1952, ಹೆರಿಗೆ ಸವಲತ್ತು ಕಾಯ್ದೆ 1961, ಗ್ರಾಚುಯಿಟಿ ಪಾವತಿ ಕಾಯ್ದೆ 1972, ಉದ್ಯೋಗ ವಿನಿಮಯ ಕೇಂದ್ರ ಕಾಯ್ದೆ (ಕಡ್ಡಾಯ ಖಾಲಿ ಸ್ಥಾನಗಳ ಪ್ರಕಟಣೆ) 1959. ಸಿನಿಮ ಕಾರ್ಮಿಕರ ಸಾಮಾಜಿಕ ನಿಧಿ ಕಾಯ್ದೆ 1981. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ನಿಧಿ ಕಾಯ್ದೆ 1996, ಮತ್ತು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008 ಪ್ರಮುಖವಾದವುಗಳು.

ಸಾಮಾಜಿಕ ಭದ್ರತೆ ಸಂಹಿತೆ ಉದ್ದೇಶ

ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವ ಸಂತೋಷ ಕುಮಾರ್ ಗಂಗ್ವಾರ್ ಅವರು ಲೋಕಸಭೆಯಲ್ಲಿ ಸಾಮಾಜಿಕ ಭದ್ರತಾ ಸಂಹಿತೆ 2020 ನ್ನು ಮಂಡಿಸಿ ಪರಿಚಯಿಸುತ್ತಾ ಕಾರ್ಮಿಕರು ತಮ್ಮ ಮೂಲಭೂತ ಅಗತ್ಯಗಳನ್ನು ಕಳೆದುಕೊಳ್ಳುವುದನ್ನು ತಪ್ಪಿಸಲು ಸಾರ್ವತ್ರಿಕ ಮತ್ತು ಸಮಗ್ರ ಸಾಮಾಜಿಕ ಭದ್ರತೆಯ ಅಗತ್ಯವನ್ನು ಎರಡನೇ ರಾಷ್ಟ್ರೀಯ ಕಾರ್ಮಿಕ ಆಯೋಗ (ಎನ್.ಸಿ.ಎಲ್ 2002) ಹೇಳಿತ್ತು ಮತ್ತು ಈ ನಿಟ್ಟಿನಲ್ಲಿ ಅಸ್ತಿತ್ವದಲ್ಲಿರುವ ಕಾನೂನುಗಳ ಸರಳೀಕರಣ ಮತ್ತು ಕ್ರೋಢೀಕರಣಕ್ಕೆ ಶಿಫಾರಸ್ಸು ಮಾಡಿತ್ತು. ಹೀಗಾಗಿ ಅದಕ್ಕನುಗುಣವಾಗಿ ಸಾಮಾಜಿಕ ಭದ್ರತಾ ಸಂಹಿತೆ 2020 ಈ ಕಾನೂನುಗಳ ನಿಬಂಧನೆಗಳನ್ನು ಸರಳೀಕರಿಸಲು ಮತ್ತು ಸಂಯೋಜಿಸಲು ಪ್ರಯತ್ನಿಸಿದೆ ಎಂದು ಕೋಡ್ ಅಗತ್ಯವನ್ನು ಪ್ರತಿಪಾದಿಸಿದ್ದರು.

ಸಾಮಾಜಿಕ ಭದ್ರತೆ ಸಂಹಿತೆ ರೂಪುಗೊಂಡ ಬಗೆ

ಸಾಮಾಜಿಕ ಭದ್ರತೆ (ಸಂಹಿತೆ) ಮಸೂದೆಯನ್ನು ಮೊದಲು ಸಂಸತ್ತಿನಲ್ಲಿ 2019 ಡಿಸೆಂಬರ್ 11 ರಂದು ಮಂಡಿಸಲಾಯಿತು. ಬಳಿಕ ಅದನ್ನು ಸಂಸತ್ತಿನ ಜಂಟಿ ಸ್ಥಾಯಿ ಸಮಿತಿಗೆ 2019ರ 24 ಡಿಸೆಂಬರ್ ರಂದು ವರ್ಗಾಯಿಸಲಾಯಿತು. ಸಂಸತ್ತಿನ ಸ್ಥಾಯಿ ಸಮಿತಿಯು ಹಲವು ಶಿಫಾರಸ್ಸುಗಳೊಂದಿಗೆ ದಿನಾಂಕ 31–7–2020 ರಂದು ತನ್ನ ವರದಿ ನೀಡಿತು. ಇದಾದ ಬಳಿಕ ಸೆಪ್ಟೆಂಬರ್ 19 2020 ರಂದು ಸಂಸತ್ತಿನಲ್ಲಿ ಪುನರ್ ಮಂಡಿಸಲಾಯಿತು 23–9–2020 ರಂದು ಅದು ಅಲ್ಲಿ ಅಂಗೀಕಾರ ಪಡೆದು ಸೆಪ್ಟೆಂಬರ್ 28 ರಂದು ರಾಷ್ಟ್ರಪತಿ ಅಂಕಿತ ಹಾಗೂ 29 ರಂದು ಗೆಜೆಟ್ ಪ್ರಕಟಣೆ ಮೂಲಕ ಸಾಮಾಜಿಕ ಭದ್ರತೆ ಸಂಹಿತೆ 2020 ಕಾನೂನಿನ ಸ್ವರೂಪ ಪಡೆಯಿತು. ಈ ಸಂಹಿತೆಯು 14 ಅಧ್ಯಾಯಗಳನ್ನು 164 ಕಲಂಗಳನ್ನು ಹಾಗೂ 7 ಅನುಚ್ಛೇಧಗಳನ್ನು ಒಳಗೊಂಡಿದೆ.

ಎರಡನೇ ರಾಷ್ಟ್ರೀಯ ಕಾರ್ಮಿಕ ಆಯೋಗದ(ಎನ್.ಸಿ.ಎಲ್ 2002) ಶಿಫಾರಸ್ಸುಗಳೇನು?

2002 ರಲ್ಲಿ ಸಮಾವೇಶಗೊಂಡಿದ್ದ ಎರಡನೇ ರಾಷ್ಟ್ರೀಯ ಕಾರ್ಮಿಕ ಆಯೋಗ ದ(ಎನ್.ಸಿಎಲ್)ವು ಪ್ರಮುಖವಾಗಿ ಈ ಕೆಳಗಿನ ಮೂರು ಶಿಫಾರಸ್ಸುಗಳನ್ನು ಸಾರ್ವತ್ರಿಕ ಸಾಮಾಜಿಕ ಸುರಕ್ಷತೆ ಕುರಿತಾಗಿ ಮಾಡಿತ್ತು 1) ಎಲ್ಲಾ ಉದ್ಯಮಗಳಿಗೂ ಸಾಮಾಜಿಕ ಭದ್ರತಾ ವ್ಯವಸ್ಥೆಯೂ ಅನ್ವಯವಾಗಬೇಕು 2) ಸಾಮಾಜಿಕ ಭದ್ರತೆ ಜಾರಿಗೆ ಅಡ್ಡಿಯಾಗಿರುವ ಎಲ್ಲಾ ವೇತನ ಮಿತಿಗಳನ್ನು ತೆಗೆದು ಹಾಕಬೇಕು ಮತ್ತು 3) ಅಸ್ತಿತ್ವದಲ್ಲಿರುವ ಯೋಜನೆಗಳ ಆಡಳಿತಾತ್ಮಕ ಏಕೀಕರಣಗೊಳ್ಳಬೇಕು.

ಸಾಮಾಜಿಕ ಭದ್ರತೆ ಸಂಹಿತೆ ಅಡಿಯಲ್ಲಿ ಅಸ್ತಿತ್ವಕ್ಕೆ ಬರುವ ಸಂಸ್ಥೆಗಳು


ಈ ನೂತನ ಸಂಹಿತೆಯಡಿ ಜಾರಿಯಾಗುವ ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿಗೊಳಿಸಲು ಈ ಕೆಳಕಂಡ ರೀತಿಯ ಮಂಡಳಿಗಳನ್ನು ಅಸ್ತಿತ್ವಕ್ಕೆ ತರಲಾಗುವುದೆಂದು ಹೇಳಲಾಗಿದೆ. (ಕಲಂ 4 ರಿಂದ 13)

1) ಇ.ಪಿ.ಎಫ್ (ಭವಿಷ್ಯನಿಧಿ) ಇಪಿಎಸ್(ಪಿಂಚಣಿ) ಮತ್ತು ಇ.ಡಿ.ಎಲ್.ಐ (ವಂತಿಗೆ ಆಧಾರಿತ ವಿಮೆ) ಯೋಜನೆಗಳನ್ನು ನಿರ್ವಹಿಸಲು ಕೇಂದ್ರ ಭವಿಷ್ಯನಿಧಿ ಆಯುಕ್ತರ ನೇತೃತ್ವದಲ್ಲಿ ಟ್ರಸ್ಟೀಗಳನ್ನು ಒಳಗೊಂಡ ಕೇಂದ್ರ ಮಂಡಳಿ.
2) ಅಸಂಘಟಿತ ಕಾರ್ಮಿಕರಿಗಾಗಿ ಯೋಜನೆಗಳನ್ನು ನಿರ್ವಹಿಸಲು ಕ್ರಮವಾಗಿ ಕೇಂದ್ರ ಮತ್ತು ರಾಜ್ಯ ಕಾರ್ಮಿಕ ಮತ್ತು ಉದ್ಯೋಗ ಸಚಿವರ ನೇತೃತ್ವದಲ್ಲಿ ರಾಷ್ಟ್ರೀಯ ಮತ್ತು ರಾಜ್ಯಮಟ್ಟದಲ್ಲಿ ಸಾಮಾಜಿಕ ಭದ್ರತಾ ಮಂಡಳಿಗಳು. ಇದಲ್ಲದೆ ಹೊಸ ವಿಭಾಗದ ಗಿಗ್ ಮತ್ತು ಪ್ಲಾಟ್ ಫಾರ್ಮ ಕಾರ್ಮಿಕರಿಗಾಗಿ ಕೂಡ ರಾಷ್ಟ್ರೀಯ ಮಂಡಳಿ ರಚನೆ ಮತ್ತು
3) ರಾಜ್ಯ ಮಟ್ಟದ ಕಟ್ಟಡ ಕಾರ್ಮಿಕರ ಯೋಜನೆಗಳನ್ನು ನಿರ್ವಹಿಸಲು ರಾಜ್ಯ ಸರಕಾರವು ನಾಮನಿರ್ದೇಶನ ಮಾಡಿದ ಅಧ್ಯಕ್ಷರ ನೇತೃತ್ವದಲ್ಲಿ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಗಳು.

ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಯೋಜನೆಗಳು

ಸಂಹಿತೆಯ ಕಲಂ 109 ರಲ್ಲಿ ಕೇಂದ್ರ ಸರಕಾರ ಕಾಲಕಾಲಕ್ಕೆ ಈ ಕೆಳಕಂಡ ಯೋಜನೆಗಳನ್ನು ಅಸಂಘಟಿತ ಕಾರ್ಮಿಕರಿಗೆ ಜಾರಿಗೊಳಿಸಬಹುದು





ಎಂದು ಹೇಳಲಾಗಿದೆ 1) ಜೀವ ಮತ್ತು ಅಂಗವೈಕಲ್ಯಕ್ಕೆ ಭದ್ರತೆ 2) ಆರೋಗ್ಯ ಮತ್ತು ಹೆರಿಗೆ ಸೌಲಭ್ಯ 3) ವೃದ್ಧಾಪದಲ್ಲಿ ರಕ್ಷಣೆ 4) ಶಿಕ್ಷಣ ಮತ್ತು ಇತರೆ 5) ಕೇಂದ್ರ ಸರಕಾರದ ನಿರ್ಧಾರಕ್ಕೆ ಬಿಟ್ಟ ಇತರೆ ಸೌಲಭ್ಯಗಳು. ಹಾಗೆನೇ ರಾಜ್ಯ ಸರಕಾರವೂ ಈ ಕೆಳಕಂಡ ವಿಷಯಗಳ ಕುರಿತಾಗಿ ಕಾಲಕಾಲಕ್ಕೆ ಯೋಜನೆಗಳನ್ನು ಪ್ರಕಟಿಸಬಹುದೆಂದು ಹೇಳಲಾಗಿದೆ 1) ಭವಿಷ್ಯನಿಧಿ 2) ಉದ್ಯೋಗದಲ್ಲಿ ಉಂಟಾಗುವ ಗಾಯಕ್ಕೆ ಸೌಲಭ್ಯ 3) ವಸತಿ 4) ಮಕ್ಕಳಿಗೆ ಶಿಕ್ಷಣ ಸೌಲಭ್ಯಗಳು 5) ಕಾರ್ಮಿಕರಿಗೆ ಕೌಶಲಭಿವೃದ್ಧಿ 6) ಅಂತ್ಯ ಕ್ರಿಯೆಗೆ ಸಹಾಯ 6) ವೃದ್ಧಾಪ್ಯ ಕೇಂದ್ರಗಳು

ಕೊಡುಗೆಗಳು ಅಥವಾ ವಂತಿಗೆಗಳು

ಉದ್ಯೋಗದಾತ ಮತ್ತು ಉದ್ಯೋಗಿಗಳ ವಂತಿಗೆಗಳ ಮೂಲಕ ಇಪಿಎಫ್, ಇಪಿಎಸ್, ಮತ್ತು ಇ.ಡಿ.ಎಲ್.ಐ ಮತ್ತು ಇ.ಎಸ್.ಐ ಯೋಜನೆಗಳಿಗೆ ಹಣಕಾಸು ಸಂಪನ್ಮೂಲ ಪಡೆಯುತ್ತದೆ. ಗಿಗ್ ಮತ್ತು ಪ್ಲಾಟ್ ಪಾರ್ಮ ಕಾರ್ಮಿಕರಿಗೆ ಅವರ ಉದ್ಯೋಗದಾತರಿಂದ ಮತ್ತು ಅಸಂಘಟಿತ ಕಾರ್ಮಿಕರಿಗೆ ಸೂಕ್ತ ಸರಕಾರದ ಕೊಡುಗೆಗಳು ಮತ್ತು ಉದ್ಯೋಗದಾತರಿಂದ ಕಾನೂನು ಉಲ್ಲಂಘಿಸಿದಾಗ ವಸೂಲಾಗುವ ದಂಡಗಳ ಮೂಲಕ ಹಣಕಾಸು ಸಂಪನ್ಮೂಲ ಸಂಗ್ರಹಿಸುವ ಪ್ರಸ್ತಾಪ.

ತಪಾಸಣೆ ಮತ್ತು ಮೇಲ್ಮನವಿಗಳ ಕುರಿತು

ಸರಕಾರವು ಸಂಹಿತೆಯ ವ್ಯಾಪ್ತಿಗೆ ಬರುವ ಉದ್ಯಮ ಮತ್ತು ಸಂಸ್ಥೆಗಳನ್ನು ಪರಿಶೀಲಿಸಲು ಸೂಕ್ತವಾದ ಇನ್ಸ್‌ಪೆಕ್ಟರ್ ಕಂ ಫೆಸಿಲಿಟೆಟರ್ ಗಳನ್ನು ನೇಮಿಸಬಹುದು ಮತ್ತು ಸಂಹಿತೆಯ ಅನುಸರಣೆ ಬಗ್ಗೆ ಉದ್ಯೋಗದಾತರಿಗೆ ಮತ್ತು ಉದ್ಯೋಗಿಗಳಿಗೆ

ಪುಟ 10 ಕ್ಕೆ




ಫೆಬ್ರುವರಿ 2020 ರ ದಿಲ್ಲಿ ಹಿಂಸಾಚಾರ ಹೊಣೆ ಯಾರು?



ದಿಲ್ಲಿ ಗಲಭೆಗಳು ದೇಶದ ವಿಭಜನೆಯ ನಂತರ ದೇಶದ ರಾಜಧಾನಿಯಲ್ಲಿ ನಡೆದ ಅತಿ ದೊಡ್ಡ ಗಲಭೆ ಎಂದು ದಾಖಲಾಗಿದೆ. ಇದು ನಡೆದು ಹತ್ತು ತಿಂಗಳಾಗುತ್ತ ಬಂದಿದೆ. ದೇಶದ ರಾಜಧಾನಿಯಲ್ಲೇ 54 ಜೀವಗಳನ್ನು ಬಲಿ ತೆಗೆದುಕೊಂಡ, ನೂರಾರು ಕುಟುಂಬಗಳನ್ನು ದಿಕ್ಕುಗಾಣದಂತೆ ಮಾಡಿರುವ ಈ ಭೀಕರ ಘಟನೆ ಏಕೆ ಸಂಭವಿಸಿತು ಎಂಬುದರ ಬಗ್ಗೆ ಒಂದು ಸ್ವತಂತ್ರ ನ್ಯಾಯಾಂಗ ತನಿಖೆ ನಡೆಯಬೇಕೆಂಬ ಆಗ್ರಹಕ್ಕೆ ಕೇಂದ್ರ ಸರಕಾರ ಇನ್ನೂ ಕಿವುಡಾಗಿಯೇ ಕೂತಿದೆ. ಏಕೆ ಎಂಬುದು ಡಿಸೆಂಬರ್ 9ರಂದು ಅಂತರ್ಜಾಲ ಸಭೆಯಲ್ಲಿ ಸಿಪಿಐ(ಎಂ)ನ ದಿಲ್ಲಿ ರಾಜ್ಯಸಮಿತಿ ಬಿಡುಗಡೆ ಮಾಡಿರುವ ಒಂದು ಸಮಗ್ರ ವರದಿಯಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ಇದರಲ್ಲಿ ಗಲಭೆಗಳ ಸಮಯದಿಂದಲೇ ಸಂತ್ರಸ್ತರ ನೆರವಿಗೆ ಧಾವಿಸಿದ ಸಿಪಿಐ(ಎಂ) ಕಾರ್ಯಕರ್ತರು ಸಂಗ್ರಹಿಸಿದ ಮಾಹಿತಿಗಳನ್ನು ನೋಡಿದರೆ ಅವೆಲ್ಲ ನೇರವಾಗಿ ಕೇಂದ್ರ ಗೃಹ ಮಂತ್ರಾಲಯದತ್ತವೇ ಬೊಟ್ಟು ಮಾಡಿ ತೋರಿಸುತ್ತಿವೆ.

ಆದ್ದರಿಂದಲೇ ಈ ಬಿಡುಗಡೆಯ ಸಭೆಯಲ್ಲಿ ಆಹ್ವಾನಿತರಾಗಿದ್ದ ಸುಪ್ರಿಂ ಕೋರ್ಟಿನ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲ ಗೌಡ, ನಿವೃತ್ತ ಮುಖ್ಯ ಮಾಹಿತಿ ಆಯುಕ್ತ ವಜಾಹತ್ ಹಬಿಬುಲ್ಲ ಮತ್ತು ಐಎಎಸ್ ಅಧಿಕಾರಿ ಹುದ್ದೆಗೆ ರಾಜೀನಾಮೆ ಕೊಟ್ಟು ಈಗ ಸಾಮಾಜಿಕ ಪ್ರಶ್ನೆಗಳ ಬಗ್ಗೆ ವ್ಯಾಪಕ ಸಂಶೋಧನೆ ನಡೆಸಿರುವ ಪ್ರಮುಖ ಮಾನವ ಹಕ್ಕುಗಳ ಹೋರಾಟಗಾರ ಹರ್ಷ ಮಂದರ್ ಈಗಲಾದರೂ ಸರಕಾರ ಒಂದು ಸ್ವತಂತ್ರ ನ್ಯಾಯಾಂಗ ತನಿಖೆಯನ್ನು ನಡೆಸಬೇಕು ಎಂದು ಆಗ್ರಹಿಸುವಂತೆ ಈ ವರದಿ ಮಾಡಿದೆ ಎಂದರು.



Communal Violence in North East Delhi, February 2020

A Report

A CPI(M) Delhi publication

ಸಿಪಿಐ(ಎಂ)ನ ದಿಲ್ಲಿ ರಾಜ್ಯ ಕಾರ್ಯದರ್ಶಿ ಕೆ.ಕೆ. ತಿವಾರಿ ಮತ್ತು ಪೊಲಿಟ್ ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಮಾರ್ಗದರ್ಶನದಲ್ಲಿ ತಯಾರಿಸಿದ **"ಈಶಾನ್ಯ ದಿಲ್ಲಿಯಲ್ಲಿ ಕೋಮುವಾದಿ ಹಿಂಸಾಚಾರ, ಫೆಬ್ರುವರಿ 2020–ಒಂದು ವರದಿ" ಎಂಬ ಹೆಸರಿನ ಈ ವರದಿಯಲ್ಲಿನ ಮಾಹಿತಿಗಳು ಮುಖ್ಯವಾಗಿ ಸರಕಾರೀ ದಸ್ತಾವೇಜುಗಳಿಂದಲೇ ಶ್ರಮ ಪಟ್ಟು ಕಲೆ ಹಾಕಿದವುಗಳು**. ಮುಖ್ಯವಾಗಿ ಪೋಲಿಸರ ಚಾರ್ಜ್‌ಶೀಟುಗಳು ಮತ್ತು ನ್ಯಾಯಾಲಯದಲ್ಲಿ ನೀಡಿದ 'ಉತ್ತರಗಳನ್ನೇ ಆಧರಿಸಿ ಕಲೆ ಹಾಕಿದ ದತ್ತಾಂಶಗಳು ಕೇಂದ್ರ ಗೃಹ ಮಂತ್ರಾಲಯದ ಆಡಳಿತ ವೈಖರಿಯ ಬಗ್ಗೆ ಹಲವು ಪ್ರಶ್ನೆಗಳನ್ನು ಎತ್ತುತ್ತವೆ. ಕೇಂದ್ರ ಗೃಹ ಮಂತ್ರಿಗಳು ತಮ್ಮ ಪೋಲಿಸರು ಇದನ್ನು 'ಮೂರೇ ದಿನಗಳಲ್ಲಿ' ಹತೋಟಿಗೆ ತಂದರು ಎಂದು ಹೇಳಿದರೂ, ವಾಸ್ತವವಾಗಿ ಆರು ದಿನಗಳ ಕಾಲ ಅದು ಲುಂಗುಲಗಾಮಿಲ್ಲದಂತೆ ನಡೆಯಿತು.

ಫೆಬ್ರುವರಿ 23ರಂದು ಈಶಾನ್ಯ ದಿಲ್ಲಿಯಲ್ಲಿ ಗಲಭೆಗಳು ಆರಂಭವಾದವು. ಆ ವೇಳೆಗಾಲೇ ಸರಕಾರಕ್ಕೆ 39 ಬೇಹುಗಾರಿಕೆ ಮಾಹಿತಿಗಳು ಬಂದಿದ್ದವು. 700ಕ್ಕೂ ಹೆಚ್ಚು ಹತಾಶ ಕರೆಗಳು ಪೋಲಿಸರಿಗೆ ಬಂದವು. ಆದರೆ ಅವುಗಳನ್ನು ನಿರ್ವಹಿಸಲು ಅಲ್ಲಿದ್ದ ಪೋಲಿಸ್ ಸಿಬ್ಬಂದಿ ಕೇವಲ 450. ಹಿಂಸಾಚಾರ ಎರಡನೇ ದಿನವೂ ತೀವ್ರ ಸ್ವರೂಪದಲ್ಲಿ ಮುಂದುವರೆದರೂ, ಕರ್ಫ್ಯೂ ಹಾಕಲಿಲ್ಲ. ಪೋಲಿಸ್ ಸಿಬ್ಬಂದಿಯ ಸಂಖ್ಯೆಯನ್ನೇನೋ ತುಸು ಹೆಚ್ಚಿಸಿ 1393ಕ್ಕೆ ಏರಿಸಲಾಯಿತು. ಆದರೆ ಅವರ ಸಮ್ಮುಖದಲ್ಲೇ ಹತ್ತಾರು ಮನೆಗಳು, ಅಂಗಡಿಗಳನ್ನು ಧ್ವಂಸ ಮಾಡಲಾಯಿತು, ಹಲವಾರು ಮಂದಿ ಸಾವಿಗೀಡಾದರು. ದಿಲ್ಲಿ ಅಲ್ಪಸಂಖ್ಯಾತ ಆಯೋಗ ಮತ್ತೆ–ಮತ್ತೆ ಮನವಿ ಮಾಡಿಕೊಂಡರೂ ಭದ್ರತಾ ಪಡೆಗಳನ್ನು ಗಮನಾರ್ಹವಾಗಿ ಹೆಚ್ಚಿಸಿದ್ದು ನಾಲ್ಕನೇಯ ದಿನದ ನಂತರವೇ ಎಂದು ಈ ವರದಿಯಲ್ಲಿ ಕೊಟ್ಟಿರುವ ಸರಕಾರೀ ಅಂಕಿ–ಅಂಶಗಳೇ ಹೇಳುತ್ತವೆ. ಆಗಲೂ, ಸುಮಾರು 26ಲಕ್ಷ ಜನಸಂಖ್ಯೆಯಿರುವ ಈ ಪ್ರದೇಶದಲ್ಲಿ ಇದ್ದ ಒಟ್ಟು ಭದ್ರತಾ ಸಿಬ್ಬಂದಿ 4756ಕ್ಕಷ್ಟೇ ಏರಿದ್ದು. ಆವೇಳೆಗಾಗಲೇ ಬಹಳಷ್ಟು ಸಾವು–ನೋವುಗಳು ಸಂಭವಿಸಿದ್ದವು. **ಏಕೆ ಇಂತಹ ಸಡಿಲತನ ಎಂಬುದೇ ಇಲ್ಲಿ ಎದ್ದಿರುವ ಪ್ರಶ್ನೆ.**

ಬೃಂದಾ ಕಾರಟ್ ವರದಿಯ ಬಿಡುಗಡೆ ಸಭೆಯಲ್ಲಿ ಮಾತಾಡುತ್ತ **"ಇದು ಸಿ.ಎ.ಎ. ವಿರುದ್ಧ ಪ್ರತಿಭಟನೆ ಸಲ್ಲದು ಎಂಬ ಒಂದು ರಾಜಕೀಯ ಸಂದೇಶ ಎಂಬುದು ಸ್ಪಷ್ಟವಾಗುತ್ತದೆ, ನೀವು ಪ್ರತಿಭಟಿಸಿದರೆ ಶಿಕ್ಷೆ ಅನುಭವಿಸಬೇಕಾಗುತ್ತದೆ ಎಂಬ ಸಂದೇಶವದು"** ಎಂದರು. ನಿಜ ಸಂಗತಿಯೆಂದರೆ ಅದು ಹಿಂಸಾಚಾರ ಕಡಿಮೆಯಾಗದೆ ಹಾಗೇ ಮುಂದುವರೆಯಲಿ ಎಂಬ ಕೇಂದ್ರ ಸರಕಾರದ ಉದ್ದೇಶಪೂರ್ವಕ ಪ್ರಯತ್ನವಾಗಿತ್ತು ಎಂದು ಅವರು ಹೇಳಿದರು.

ವಿಸ್ತೃತ ವರದಿ

ಸುಮಾರು 250 ಸಿಪಿಐ(ಎಂ) ದಿಲ್ಲಿ ರಾಜ್ಯಸಮಿತಿಯ ಮುತುವರ್ಜಿಯಿಂದ ರಚನೆಗೊಂಡ "ಪರಿಹಾರ ಮತ್ತು ಪುನರ್ವಸತಿ ಸೌಹಾರ್ದ ಸಮಿತಿ'ಯ ಕಾರ್ಯಕರ್ತರು ಅಂದಿನಿಂದ ನಡೆಸುತ್ತಿರುವ ಪರಿಹಾರ, ನೆರವು ಕಾರ್ಯಗಳ ವೇಳೆ ಸಂಪರ್ಕಕ್ಕೆ ಬಂದ 400ಕ್ಕೂ ಹೆಚ್ಚು ಸಂತ್ರಸ್ತ ಕುಟುಂಬಗಳೊಂದಿಗೆ, ಎಲ್ಲ ಸಮುದಾಯಗಳಿಗೂ ಸೇರಿದ ಸ್ಥಳೀಯ ಜನರೊಂದಿಗೆ ನಡೆಸಿದ ವಿವರವಾದ ಸಂದರ್ಶನಗಳು ಮತ್ತು ಮೇಲೆ ಹೇಳಿದಂತೆ ಪೋಲಿಸ್ ಚಾರ್ಜ್‌ಶೀಟುಗಳು ಮತ್ತು ಇದಕ್ಕೆ ಸಂಬಂಧಪಟ್ಟ ವಿವಿಧ ಅರ್ಜಿಗಳಲ್ಲಿ ಕೋರ್ಟುಗಳಿಗೆ ಸಲ್ಲಿಸಿದ ಮಾಹಿತಿಗಳ ಆಧಾರದಲ್ಲಿ ಮತ್ತು 'ದಿ ವೈರ್' ಪತ್ರಿಕೆಯಲ್ಲಿ ಪ್ರಕಟವಾದ ವಿವರಗಳನ್ನು ತಗೊಂಡು ತಯಾರಿಸಿದ ಈ ವಿಸ್ತೃತ ವರದಿಯಲ್ಲಿ ಮೂರು ಭಾಗಗಳಿವೆ.

ಮೊದಲನೆಯದು, ಹಿನ್ನೆಲೆ– ಇದರಲ್ಲಿ ಈಶಾನ್ಯ ದಿಲ್ಲಿಯ ಸಾಮಾಜಿಕ–ಆರ್ಥಿಕ–ರಾಜಕೀಯ ಸನ್ನಿವೇಶವನ್ನು ಪರಿಶೀಲಿಸಲಾಗಿದೆ. ದಿಲ್ಲಿ ವಿಧಾನಸಭಾ ಚುನಾವಣೆಗಳಲ್ಲಿ ಸೋತ ನಂತರ ಬಿಜೆಪಿ ತನ್ನ 'ಪರಿವಾರ'ದ ಸಂಘಟನೆಗಳೊಂದಿಗೆ ಚುನಾವಣೆಯ ವೇಳೆಯಲ್ಲಿಯೇ ಆರಂಭಿಸಿದ್ದ ಕೋಮು ಧ್ರುವೀಕರಣದ ವಾತಾವರಣವನ್ನು ಇನ್ನಷ್ಟು ಗಂಭೀರಗೊಳಿಸಿತು.

ಎರಡನೆಯ ಭಾಗ 'ಕೋಮುವಾದಿ ಹಿಂಸಾಚಾರದ ಭೀಕರ ಮುಖ'. ಇದರಲ್ಲಿ ಹಿಂಸಾಚಾರದ ಆರಂಭ ಮತ್ತು ಹರಡಿಕೆ, ಹಾಗೂ ಗೃಹ ಮಂತ್ರಾಲಯದ ಪಾತ್ರದ ಬಗ್ಗೆ ವಿವರವಾದ ಮಾಹಿತಿಗಳನ್ನು ಕೊಡಲಾಗಿದೆ.

ಮೂರನೇ ಭಾಗ–'ಆನಂತರ'. ಇದರಲ್ಲಿ ಕೇಂದ್ರ ಸರಕಾರ ಪ್ರಚುರಪಡಿಸುತ್ತಿರುವ 'ಪಿತೂರಿ;ಯ ಹಿಂದಿರುವ ಪಿತೂರಿ, ಗೃಹಮಂತ್ರಿಗಳು ಹೇಗೆ ಒಂದು ನಿಷ್ಪಕ್ಷಪಾತ ತನಿಖೆ ನಡೆಯದಂತೆ ಮೊದಲೇ ನೋಡಿಕೊಂಡರು, ಸಿಎಎ–ಎನ್‌ಆರ್‌ಸಿ/ಎನ್‌ಆರ್‌ಪಿ ವಿರುದ್ಧ ಪ್ರತಿಭಟಿಸಿದವರ ವಿರುದ್ಧವೇ ಎಫ್‌ಐಆರ್‌ಗಳ ಸುರಿಮಳೆ, 'ಸಾಕ್ಷ್ಯ'ಗಳ ಉತ್ಪಾದನೆ ಇತ್ಯಾದಿಗಳ ವಿವರಗಳನ್ನು ಕೊಡುತ್ತ ನ್ಯಾಯ ಪಡೆಯುವುದಕ್ಕಾಗಿ ಅಗತ್ಯವಾದ ಕ್ರಮಗಳ ಬಗ್ಗೆ ಹೇಳಲಾಗಿದೆ.

ಮೂರು ಅನುಬಂಧಗಳಲ್ಲಿ ಈ ಹಿಂಸಾಚಾರಗಳಲ್ಲಿ ಪ್ರಾಣ ಕಳಕೊಂಡವರ ಪಟ್ಟಿ, ಹಿಂಸಾಚಾರಕ್ಕೆ ಬಲಿಯಾದ ಕುಟುಂಬಗಳ ಕುರಿತ ಸರ್ವೆಯ ದತ್ತಾಂಶಗಳ ವಿಶ್ಲೇಷಣೆ ಮತ್ತು ಸೌಹಾರ್ದ ಹಾಗೂ ಪರಿಹಾರ ಕೆಲಸಗಳ ಬಗ್ಗೆ ಮಾಹಿತಿಗಳನ್ನು ಕೊಡಲಾಗಿದೆ.

ವಾಸ್ತವವಾಗಿ ಇದು ಕೋಮು ಘರ್ಷಣೆ ಅಲ್ಲವೇ ಅಲ್ಲ, ಸಾವು–ನೋವುಗಳು ಅಲ್ಪಸಂಖ್ಯಾತ ಸಮುದಾಯದ ಕುಟುಂಬಗಳಲ್ಲೇ ಹೆಚ್ಚಾಗಿ ನಡೆದಿರುವುದು, ಹಿಂಸಾಚಾರಗಳು ಮಹಿಳೆಯರು ಸಿಎಎ ವಿರುದ್ಧ ಪ್ರತಿಭಟನೆಗಳಿಗೆ ಕುಳಿತ ಸ್ಥಳಗಳ ಸುತ್ತ–ಮುತ್ತ, ಮತ್ತು ಅಲ್ಪಸಂಖ್ಯಾತರ ಜನಸಂಖ್ಯೆ ಹೆಚ್ಚು ದಟ್ಟವಾದ ಪ್ರದೇಶಗಳಲ್ಲೇ ನಡೆದಿರುವುದೇ ಇದಕ್ಕೆ ಸಾಕ್ಷಿ ಎಂದು ಈ ವರದಿ ಹೇಳುತ್ತದೆ. ಪೋಲೀಸರು ಹಿಂದುತ್ವ ಪಡೆಗಳ ಕಡೆಯಿಂದಲೇ ಮಧ್ಯಪ್ರವೇಶಿದ್ದಕ್ಕೆ ಹಲವು ವೀಡಿಯೋ ಸಾಕ್ಷಿಗಳಿವೆ.

ಗೃಹಮಂತ್ರಿಗಳ ಪಾತ್ರದ ಬಗ್ಗೆ ಹೇಳುತ್ತ, 26ಲಕ್ಷ ಜನಸಂಖ್ಯೆಯಿರುವ ಈ ಪ್ರದೇಶದಲ್ಲಿ ತೀವ್ರ ಹಿಂಸಾಚಾರಗಳ ಸಂದರ್ಭದಲ್ಲೂ ಭದ್ರತಾ ಸಿಬ್ಬಂದಿಯ ಸಂಖ್ಯೆ 1393ರಿಂದ 4756 ನಡುವೆಯೇ ಏಕೆ ಉಳಿಯಿತು, ಸಾಕಷ್ಟು ಪಡೆಗಳನ್ನು ಏಕೆ ಒದಗಿಸಲಿಲ್ಲ, ಅದರಿಂದಾಗಿ ಈ ದಿನಗಳಲ್ಲಿ 13,000 ಹತಾಶ ಕರೆಗಳಿಗೆ ಸ್ಪಂದಿಸಲಾರದೆ ಹೋದದ್ದು ಏಕೆ ಎಂಬ ಪ್ರಶ್ನೆಗಳಿಗೆ ಅವರು ಇದುವರೆಗೂ ಉತ್ತರ ನೀಡಿಲ್ಲ ಎಂಬ ಸಂಗತಿಯತ್ತ ವರದಿ ಗಮನ ಸೆಳೆದಿದೆ. ಇದು ಜಿಹಾದಿಗಳ ಕೃತ್ಯವಾಗಿದ್ದರೆ, ಈ ಹಿಂದುತ್ವ–ಪರ ಸರಕಾರ ಅವರ ಹಿಂಸಾಚಾರವನ್ನು ತಕ್ಷಣವೇ ಕೊನೆಗೊಳಿಸಲು ವಿಫಲವಾದದ್ದೇಕೆ, ಅಥವ ಹಿಂದುತ್ವ ಪಡೆಗಳು ಹುಚ್ಚೆದ್ದು ಕುಣಿಯುತ್ತಿವೆ ಎಂದು ಗೊತ್ತಿದ್ದರಿಂದಲೇ ಅದು ಏನೂ ಮಾಡದೆ ಸುಮ್ಮನಿತ್ತೇ ಎಂದು ವರದಿ ತನ್ನ ತೀರ್ಮಾನದಲ್ಲಿ ಸಂದೇಹ ವ್ಯಕ್ತಪಡಿಸಿದೆ.

ವರದಿಯ ಮೇಲೆ ಸಂವಾದ

ಈ ವರದಿ ಕುರಿತ ಸಂವಾದದಲ್ಲಿ ಮಾತಾಡಿದ ನ್ಯಾಯಮೂರ್ತಿ ವಿ.ಗೋಪಾಲ ಗೌಡ "ಕಾನೂನು ಪಾಲನೆಯ ಕಡೆಯಿಂದ ತೀವ್ರ ವೈಫಲ್ಯಗಳಾಗಿವೆ. 54 ಜನ ಸತ್ತರು, ನೂರಾರು ಅಂಗಡಿಗಳು ಧ್ವಂಸವಾದವು ಎಂಬುದು ನಾಚಿಕೆಗೇಡಿನ ಸಂಗತಿ. ಕರ್ಫ್ಯೂ ಏಕೆ ಹಾಕಲಿಲ್ಲ? ಅರೆ ಮಿಲಿಟರಿ ಪಡೆಗಳನ್ನು ಏಕೆ

ಪುಟ 10 ನೋಡಿ



CPI(M) Delhi



CPI(M) Delhi



Wajahat Habibullah



Justice V.Gopala Gowda



Harsh Mander

ಫೆಬ್ರುವರಿ 2020ರ ದಿಲ್ಲಿ ಹಿಂಸಾಚಾರ–ಹೊಣೆ ಯಾರು?



ಪುಟ 9 ರಿಂದ

ಬಳಸಲಿಲ್ಲ? ಕೇಂದ್ರ ಸರಕಾರ ಏನು ಮಾಡುತಿತ್ತು?" ಎಂದು ಪ್ರಶ್ನಿಸುತ್ತ ಈಗಲಾದರೂ ನಿವೃತ್ತ ಸುಪ್ರಿಂ ಕೋರ್ಟ್ ನ್ಯಾಯಾಧೀಶರು ಅಥವ ದಿಲ್ಲಿ ಹೈಕೋರ್ಟಿನ ನ್ಯಾಯಾಧೀಶರ ನೇತೃತ್ವದಲ್ಲಿ ನಿಷ್ಪಕ್ಷಪಾತ ತನಿಖೆಯನ್ನು ನಡೆಸಬೇಕು, ಇದರಲ್ಲಿ ಕೇಂದ್ರ ಗೃಹ ಮಂತ್ರಾಲಯದ ಮತ್ತು ದಿಲ್ಲಿ ಪೊಲೀಸ್‌ನ ಪಾತ್ರದ ಬಗ್ಗೆಯೂ ತನಿಖೆಯಿರಬೇಕು ಎಂದಿರುವ ಈ ಸಿಪಿಐ(ಎಂ) ವರದಿಯ ಒತ್ತಾಯವನ್ನು ಅವರು ಬೆಂಬಲಿಸಿದರು.

ಭಾರತದ ನಿವೃತ್ತ ಮುಖ್ಯ ಮಾಹಿತಿ ಆಯುಕ್ತ ವಜಾಹತ್ ಹಬಿಬುಲ್ಲ ಈ ಘಟನೆಯ ಬಗ್ಗೆ ತನ್ನ ದುಃಖ ಈಗಲೂ ಕಡಿಮೆಯಾಗಿಲ್ಲ ಎನ್ನುತ್ತ ಇಂತಹ ಗಲಭೆಗಳು ಈಗಲೂ ಏಕೆ ನಡೆಯುತ್ತವೆ ಎಂದು ಆತಂಕ ವ್ಯಕ್ತಪಡಿಸಿದರು. "ಕೆಲವು ಮಂದಿ 'ಭಕ್ತಿ'ಯ ಮುಸುಕು ಹೊದ್ದು ಜನಗಳು ತಮ್ಮಲ್ಲೇ ಬಡಿದಾಡುವಂತೆ ಮಾಡುತ್ತಿದ್ದರೆ. ಸರಕಾರ ಇದಕ್ಕೆ ಹೊಣೆ ವಹಿಸಬೇಕು. ಅದು ತನ್ನ ಕರ್ತವ್ಯವನ್ನು ಪಾಲಿಸಲು ವಿಫಲವಾದರೆ ಸರಕಾರಕ್ಕೆ ಅದರ ಕೆಲಸ ಮಾಡುವಂತೆ ನೆನಪಿಸುವುದು ನಮ್ಮ ಜವಾಬ್ದಾರಿ" ಎಂದು ಅವರು ಹೇಳಿದರು.

ದಿಲ್ಲಿ ಪೊಲಿಸ್ ಈ ಹಿಂಸಾಚಾರಗಳಿಗೆ ಸಂಬಂಧಪಟ್ಟಂತೆ ಹುಟ್ಟಿಸಿರುವ 'ಪಿತೂರಿ' ಸಿದ್ಧಾಂತದ ಹಿಂದೆಯೇ ಒಂದು ಪಿತೂರಿ ಇದೆ ಎನ್ನುತ್ತ, ಇದರ ರೂಪುರೇಷೆ ಈ ಹಿಂಸಾಚಾರದ ಬಗ್ಗೆ ತನಿಖೆ ಆರಂಭವಾಗುವ ಮೊದಲೇ ಮೂಡಿಬಂದಿತ್ತು, ಸ್ವತಃ ಗೃಹಮಂತ್ರಿಗಳೇ ಈ ಅನ್ಯಾಯದ ಚಕ್ರಕ್ಕೆ ಚಾಲನೆ ನೀಡಿದವರು ಎಂದು ಹೇಳಿರುವ ಈ ಸಿಪಿಐ(ಎಂ) ತನಿಖೆಯ ಅಭಿಪ್ರಾಯಕ್ಕೆ ದನಿಗೂಡಿಸುತ್ತ "ಈ ಹಿಂಸಾಚಾರದ ಹಿಂದೆ 'ಪಿತೂರಿ' ಇದೆ ಎಂಬುದನ್ನು ನಾನೂ ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೆ ಅದು ಸರಕಾರ ಅಥವ ಪೋಲಿಸ್ ಹೇಳುವುದಕ್ಕೆ ತದ್ವಿರುದ್ಧವಾದದ್ದು" ಎಂದು ಹರ್ಷ ಮಂದರ್ ಹೇಳಿದರು.

ಒಬ್ಬ ಐಎಎಸ್ ಅಧಿಕಾರಿಯಾಗಿ ಇಂತಹ ಘಟನೆಗಳನ್ನು ನಿರ್ವಹಿಸಿದ ಅನುಭವಗಳು ಮತ್ತು ಐಎಎಸ್ ಬಿಟ್ಟ ನಂತರದ ಅಧ್ಯಯನಗಳ ಆಧಾರದಲ್ಲಿ ಹೇಳುವುದಾದರೆ ಯಾವುದೇ ಗಲಭೆ ತನ್ನಷ್ಟಕ್ಕೇ ನಡೆಯುವುದಿಲ್ಲ, ನಡೆದರೂ ಕೆಲವು ಗಂಟೆಗಳ ನಂತರವೂ ಮುಂದುವರೆಯುವುದಿಲ್ಲ ಎಂದು ಅವರು ಮುಂದುವರೆದು ಹೇಳಿದರು. **ಮೊದಲನೆಯದಾಗಿ, ಗಲಭೆಗಳನ್ನು ಉತ್ಪಾದಿಸಲಾಗುತ್ತದೆ, ಎರಡನೆಯದಾಗಿ ಅದಕ್ಕೆ ಸಿದ್ಧತೆ ನಡೆಯುತ್ತದೆ, ಮತ್ತು ಮೂರನೆಯದಾಗಿ ಅದು ಸರಕಾರ ತಾನಾಗಿಯೇ ಬಯಸದಿದ್ದರೆ ಬಹಳ ಸಮಯ ಮುಂದುವರೆಯುವದಿಲ್ಲ** ಎಂದು ಅವರು ಹೇಳಿದರು. ಈ ಹಿಂಸಾಚಾರದ ಮೊದಲು ದಿಲ್ಲಿ ವಿಧಾನಸಭಾ ಚುನಾವಣೆಗಳ ಸಂದರ್ಭದಲ್ಲಿ ಕಪಿಲ್ ಮಿಶ್ರ ಮಾತ್ರವೇ ಅಲ್ಲ, ಪ್ರಧಾನಿಗಳು, ಗೃಹ ಮಂತ್ರಿಗಳಿಂದ ಹಿಡಿದು ಕೇಂದ್ರ ಸರಕಾರದ ಹಿರಿಯ ಮುಖಂಡರುಗಳೇ, "ದ್ವೇಷದ ಉತ್ಪಾದನೆ" ಮಾಡಿದ್ದರು ಎಂದು ಹರ್ಷ ಮಂದರ್ ಹೇಳಿದರು.

ಈ ತನಿಖಾ ವರದಿಯ ಬಗ್ಗೆ ಸಿಪಿಐ(ಎಂ)ನ್ನು ಶ್ಲಾಘಿಸುತ್ತ ಅವರು ಈ ಹಿಂದೆ ಇಂತಹ ಘಟನೆಗಳು ನಡೆದಾಗ ಸಾಮಾನ್ಯವಾಗಿ ರಾಜಕೀಯ ಪಕ್ಷಗಳು ಇಂತಹ ಸತ್ಯಶೋಧಕ ವರದಿಗಳನ್ನು ತಯಾರಿಸುತ್ತಿದ್ದವು. ಆದರೆ ಇತ್ತೀಚಿನ ವರ್ಷಗಳಲ್ಲಿ ಈ ಪರಂಪರೆ ಲುಪ್ತವಾದಂತೆ ಕಾಣುತ್ತಿದೆ. 2002 ರ ಗುಜರಾತ್ ಹಿಂಸಾಚಾರದ ವೇಳೆ ಹಾಕಿದ್ದ ಪರಿಹಾರ ಶಿಬಿರಗಳಲ್ಲಿ ಕಾಂಗ್ರೆಸಿನ ಕಾರ್ಯಕರ್ತರು ಯಾರೂ ಕಂಡು ಬರಲಿಲ್ಲ ಎಂದು ನೆನಪಿಸಿಕೊಡ ಅವರು, ಕಮುನಿಸ್ಟರು ಮತ್ತು ಎಡಪಂಥೀಯರು ಮಾತ್ರವೇ ಈ ಪರಿಹಾರ ಮತ್ತು ಸತ್ಯಶೋಧನೆಯ ಪರಂಪರೆಯನ್ನು ಮುಂದುವರೆಸುತ್ತಿದ್ದಾರೆ ಎಂದು ಅವರು ಸಂತಸ ವ್ಯಕ್ತಪಡಿಸಿದರು. ವಿಶೇಷವಾಗಿ ಬೃಂದಾ ಕಾರಟ್ ಅವರ ಶ್ರಮವನ್ನು ಪ್ರಶಂಸಿಸುತ್ತ, ಕೊವಿಡ್ ಸೋಂಕು ತಗಲಿ ಆರೋಗ್ಯ ಕೆಟ್ಟಿದ್ದರೂ ತಾನು ಈ ಸಭೆಯಲ್ಲಿ ಭಾಗವಹಿಸಲೇ ಬೇಕು ಎಂದು ಬಂದಿರುವುದಕ್ಕೆ ಇದು ಒಂದು ಕಾರಣ ಎಂದು ಹರ್ಷ ಮಂದರ್ ಹೇಳಿದರು.

'ನಮಗೆ ನ್ಯಾಯ ಬೇಕು"

ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ಏರ್ಪಡಿಸಿದ್ದ ಈ ಸಭೆಯಲ್ಲಿ, ಈ ಹಿಂಸಾಚಾರಗಳಿಗೆ ಬಲಿಯಾದವರ ಮೂರು ಕುಟುಂಬಗಳ ಸದಸ್ಯರು ಭಾಗವಹಿಸಿ ತಮಗಾಗಿರುವ ಅನ್ಯಾಯವನ್ನು ಹೇಳುತ್ತ ತಮಗೆ ನ್ಯಾಯ ಬೇಕು ಎಂದರು.



ಪೊಲೀಸರೇ ಲಾಠಿಯೇಟು ಬಾರಿಸುತ್ತ ರಾಷ್ಟ್ರಗೀತೆ ಹಾಡು ಎಂದು ಹಿಂಸಿಸಿದ, ನಂತರ ಪ್ರಾಣ ಕಳಕೊಂಡ 'ಯುವಕ ಫೈಝಾನ್‌ನ ತಾಯಿ ಕಿಸ್ಮತೂನ್ "ಅವನು ಮುಸಲ್ಮಾನನೆಂಬ ಏಕೈಕ ಕಾರಣಕ್ಕೆ ಸಾಯಿಸಲಾಯಿತು, ನನ್ನ ಮಗುವನ್ನು ನೋಡಲೂ ಅವರು ಬಿಡಲಿಲ್ಲ" ಎಂದರು.



ಫೆಬ್ರುವರಿ 26ರಂದು ಅಸು ನೀಗಿದ 15 ವರ್ಷದ ಬಾಲಕ ನಿತಿನ್ ಪಾಸ್ವಾನ್‌ನ ತಂದೆ ರಾಮ್ ಸುಭಗ್ "ನನ್ನ ಮಗನನ್ನು ಪೋಲೀಸರು ಕೊಂದರು. ಗಲಭೆ ಇಲ್ಲದಿದ್ದರೂ ಅಶ್ರುವಾಯು ಸಿಡಿಸಿದ್ದೇಕೆ ತಿಳಿಯಲಿಲ್ಲ, ಅವನು ನಿಜವಾಗಿ ಹೇಗೆ ಸತ್ತ ಎಂಬದು ನನಗಿನ್ನೂ ತಿಳಿದಿಲ್ಲ. ಅವನು ಮೈನರ್ ಎಂದು ದಿಲ್ಲಿ ಸರಕಾರ ಪ್ರಕಟಿಸಿದ ಪರಿಹಾರದ ಪೂರ್ಣ ಮೊತ್ತವೂ ನನಗೆ ಇನ್ನೂ ಸಿಕ್ಕಿಲ್ಲ" ಎಂದು ಹೇಳಿದರು.



ಫೆಬ್ರುವರಿ 15 ರಂದು ಪ್ರಾಣ ಕಳಕೊಂಡ 22 ವರ್ಷದ ಅಷ್ಫಾಖ್ ಹುಸೇನ್‌ನ ತಂದೆ ಅಗಾಜ್ ಹುಸೆನ್, ನಮ್ಮ ಈ ಎಲ್ಲ ಮಕ್ಕಳಿಗೆ ದೇಶದ ನ್ಯಾಯ ವ್ಯವಸ್ಥೆಯಿಂದ ನ್ಯಾಯ ಬೇಕಾಗಿದೆ ಎಂದರು. "ಅದು ಕೋಮು ಗಲಭೆಯಲ್ಲ, ದೇಶದ ಶತ್ರುಗಳು ಆರಂಭಿಸಿದ ಗಲಭೆ, ನಾವು ಎಷ್ಟೋ ವರ್ಷಗಳಿಂದ ಇಲ್ಲಿ ಸಾಮರಸ್ಯದಿಂದ ಬದುಕಿದ್ದೇವೆ, ಈಗಲೂ ಬದುಕುತ್ತಿದ್ದೇವೆ" ಎಂದು ಹುಸೆನ್ ಹೇಳಿದರು.

ಸಿಪಿಐ(ಎಂ) ಈ ತನಿಖಾ ವರದಿಯು ಕೊನೆಯಲ್ಲಿ ನಿಷ್ಪಕ್ಷಪಾತ ನ್ಯಾಯಾಂಗ ತನಿಖೆಗೆ ಆಗ್ರಹಿಸುವುದರೊಂದಿಗೇ ಸಂತ್ರಸ್ತರಿಗೆ ನ್ಯಾಯ ಒದಗಿಸಬೇಕು, ದಿಲ್ಲಿ ಸರಕಾರ ಸೂಚಿಸಿರುವಂತೆ ತಪ್ಪಿತಸ್ಥರನ್ನು ಶಿಕ್ಷಿಸಲು ವಕೀಲರ ಒಂದು ನಿಷ್ಪಕ್ಷಪಾತ ಸಮಿತಿಯನ್ನು ರಚಿಸಬೇಕು ಮತ್ತು ಹಿಂಸಾಚಾರದ ಸಂತ್ರಸ್ತರಿಗೆ ಪೂರ್ಣ ಪರಿಹಾರ ಮತ್ತು ನೆರವನ್ನು ಒದಗಿಸಬೇಕು ಎಂದೂ ಆಗ್ರಹಿಸಿದೆ.

ಈ ವರದಿಯ ಉದ್ದೇಶ ಈ ಭೀಕರ ಘಟನೆ ಸಾರ್ವಜನಕರ ನೆನಪಿನಿಂದ ಮಾಸದಂತೆ ಜೀವಂತವಾಗಿಡುವುದು ಮತ್ತು ಭಾರತದ ನಾಗರಿಕರ ಪ್ರಶ್ನೆಗಳಿಗೆ ಉತ್ತರ ಪಡೆಯಲು ಒಂದು ಸ್ವತಂತ್ರ ತನಿಖೆ ನಡೆಸುವಂತೆ ಸರಕಾರದ ಮೇಲೆ ಒತ್ತಡ ಹಾಕುವುದು ಎಂದು ವರದಿಯನ್ನು ಬಿಡುಗಡೆಗೆ ಸಿದ್ಧಪಡಿಸಿದ ತಂಡದ ಸದಸ್ಯರು ಹೇಳುತ್ತಾರೆ. ■

ಸಾಮಾಜಿಕ ಭದ್ರತೆ ಖಾತ್ರಿ ಇಲ್ಲ, ಕೇವಲ ಭರವಸೆ ಮಾತ್ರ........

ಪುಟ 8 ರಿಂದ

ಸಲಹೆ ನೀಡಬಹುದು

ವ್ಯಾಖ್ಯಾನಗಳಲ್ಲಿನ ಬದಲಾವಣೆ

ಮೇಲ್ಮನವಿ, ಮೌಲ್ಯಮಾಪನ ಮತ್ತು ಅಪರಾಧ ಹಾಗೂ ಡಂಡಗಳ ಕುರಿತ ನಿಬಂಧನೆಗಳಲ್ಲಿ ಸಾಕಷ್ಟು ಬದಲಾವಣೆ ಮಾಡಲಾಗಿದೆ

ಇದರಲ್ಲಿ ಮುಖ್ಯವಾಗಿ ಕಾರ್ಮಿಕ ಕಾನೂನು ಜಾರಿಯಲ್ಲಾಗುವ ಉಲ್ಲಂಘನೆಯ ಅಪರಾಧ, ಅದಕ್ಕಾಗಿ ವಿಧಿಸಲಾಗುವ ದಂಡಗಳ ಮೊತ್ತ ನಿರ್ಣಯ, ಅಸಂಘಟಿತ ಕಾರ್ಮಿಕ ಮಂಡಳಿಗಳ ಸಂಯೋಜನೆಯಲ್ಲಿ ಬದಲಾವಣೆ ಮತ್ತು ಕೊವೀಡ್ ಸೇರಿ ಪ್ರಕೃತಿ ವಿಕೋಪ, ಸಾಂಕ್ರಾಮಿಕ ಸಮಯದಲ್ಲಿ ಸರಕಾರಕ್ಕೆ ಹೆಚ್ಚುವರಿ ಅಧಿಕಾರಗಳು, ಕೇಂದ್ರ ರಾಜ್ಯ ಸರಕಾರಗಳಿ ವ್ಯಾಪ್ತಿ – ಇವು ಸೇರಿವೆ.

ಸಂಹಿತೆಯಲ್ಲಿನ ಪ್ರಮುಖ ನ್ಯೂನ್ಯತೆಗಳು

ಸಂಸದೀಯ ಸ್ಥಾಯೀ ಸಮಿತಿ ಶಿಫಾರಸ್ಸುಗಳ ನಿರ್ಲಕ್ಷ್ಯ

ಗ್ರಾಚುಯಿಟಿ ಅವಧಿ ಕಡಿತ, ಉದ್ಯೋಗ ವಿನಿಮಯ ಕೇಂದ್ರಗಳ ಪುನಶ್ಚೇತನ, ಐದು ಎಕ್ರೇರ್ ವ್ಯಾಪ್ತಿಯ ತೋಟ ಕಾರ್ಮಿಕರಿಗೂ ಸಾಮಾಜಿಕ ಭದ್ರತೆ, ಹಿಂದೆ ರದ್ದುಪಡಿಸಲಾದ ಬೀಡಿ, ಸಿನಿಮಾ ಮತ್ತು ಗಣಿ ಕಾರ್ಮಿಕ ಕಲ್ಯಾಣ ನಿಧಿ ಪುನರ್ ಸ್ಥಾಪಿಸಬೇಕೆಂದು ನೀಡಿದ್ದ ಸಂಸತ್ತಿನ ಸ್ಥಾಯಿ ಸಮಿತಿ ಮುಖ್ಯ ಶಿಫಾರಸ್ಸುಗಳನ್ನು ಸಂಹಿತೆ 2020 ಒಳಗೊಂಡಿಲ್ಲ.

ದಂಡಗಳ ಮೂಲಕ ಸಾಮಾಜಿಕ ನಿಧಿಗೆ ಹಣ?:

ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ 'ಸಾಮಾಜಿಕ ಭದ್ರತಾನಿಧಿ' ಸ್ಥಾಪಿಸಲು 2020ರ ಸಾಮಾಜಿಕ ಭದ್ರತಾ ಸಂಹಿತೆ ಪ್ರಸ್ತಾಪಿಸಿದೆ. ನಾಲ್ಕು ಸಂಹಿತೆಯ ಅಡಿಯಲ್ಲಿ ಮಾಲಿಕರಿಗೆ ವಿಧಿಸಲಾದ ದಂಡಗಳಿಂದ ಸಂಗ್ರಹಿಸಲಾದ ಮೊತ್ತವನ್ನು ಈ ನಿಧಿಗೆ ಜಮಾ ಮಾಡಲಾಗುವುದು ಎಂದು ಮಾತ್ರ ಹೇಳಲಾಗಿದೆ. ಮಾಲಿಕರು ಕಾನೂನು ಉಲ್ಲಂಘಿಸಿದ್ದಾರೋ ಇಲ್ಲವೋ ಎಂದು ಇದುವರೆಗೂ ತಪಾಸಣೆ ಮಾಡಿ ದಂಡ ವಿಧಿಸುವ ಅಧಿಕಾರ "ಕಾರ್ಮಿಕ ನಿರೀಕ್ಷಕರಿಗೆ" ಇತ್ತು. ಈಗ ಆ ಹುದ್ದೆಯನ್ನು "ಫೆಸಿಲಿಟೇಟರ್" ಎಂದು ಬದಲಾಯಿಸಲಾಗಿದೆ ಮತ್ತು ಅವರಿಗೆ ಈಗಿರುವಂತೆ ತನಿಖೆ ಮಾಡುವ ದಂಡವಿಧಿಸುವ ಯಾವ ಅಧಿಕಾರವು ಇಲ್ಲ. ಹೀಗಿರುವಾಗ ದಂಡ ವಿಧಿಸುವುದು, ಆ ದಂಡ ಸಾಮಾಜಿಕ ಭದ್ರತಾ ನಿಧಿಗೆ ಬರುವುದು, ಅದರಿಂದ ಅಸಂಘಟಿತ ಕಾರ್ಮಿಕರಿಗೆ ಸೌಲಭ್ಯಗಳನ್ನು ನೀಡುವ ಪ್ರಶ್ನೆ ಎಲ್ಲಿಂದ ಬರುತ್ತದೆ?

ಇ.ಎಸ್.ಐ. ಕುಟುಂಬ ಸದಸ್ಯರ ಚಿಕಿತ್ಸೆಗೆ ಸೇವಾಶುಲ್ಕ

ಸಂಹಿತೆಯಲ್ಲಿ ಇ.ಎಸ್.ಐ ಆಸ್ಪತ್ರೆಗಳಲ್ಲಿ ವಿಮೆದಾತರ ಕುಟುಂಬದ ಸದಸ್ಯರ ಚಿಕಿತ್ಸೆಗೆ ಸೇವಾ ಶುಲ್ಕ ವಿಧಿಸಲಾಗುವುದು ಮತ್ತು ಇದುವರೆಗೂ ಸಿಗುತ್ತಿರುವ ಎಲ್ಲಾ ಸೌಲಭ್ಯಗಳು ಕಾಲಕಾಲಕ್ಕೆ ಬದಲಾಯಿಸುವ ಅಧಿಕಾರ ಇ.ಎಸ್.ಐ ಮಂಡಳಿಗ ಕೊಡಲಾಗಿದೆ. ಖಾಸಗೀ ಆಸ್ಪತ್ರೆಗಳಿಗೂ ಅವಕಾಶ ಅಲ್ಲದೆ ವಿಮೆ ಹಣ ಇತರೆ ಉದ್ದೇಶಗಳಿಗೂ ಬಳಸಲು ಕೇಂದ್ರ ಸರಕಾರಕ್ಕೆ ಅಧಿಕಾರ ಸಹ ಕೊಡಲಾಗಿದೆ.

10 ಕ್ಕಿಂತ ಕಡಿಮೆ ಕಾರ್ಮಿಕರಿರುವ ಉದ್ಯಮಕ್ಕೆ ಸೌಲಭ್ಯಗಳಿಂದ ವಂಚಿತ

ಸಾಮಾಜಿಕ ಭದ್ರತೆಯನ್ನು 10 ಅಥವಾ ಅದಕ್ಕಿಂತ ಕಡಿಮೆ ಸಂಖ್ಯೆ ಕಾರ್ಮಿಕರನ್ನು ಹೊಂದಿರುವ ಉದ್ಯಮಗಳನ್ನು ಇ.ಪಿ.ಎಫ್, ಇಪಿಎಸ್, ಮತ್ತು ಇಡಿ.ಎಲ್.ಐ ಮತ್ತು ಇ.ಎಸ್.ಐ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಇದರಿಂದ ಕೊಟ್ಯಾಂತರ ಕಾರ್ಮಿಕರು ಭವಿಷ್ಯನಿಧಿ, ವಿಮಾ ಮೊದಲಾದ ಸಾಮಾಜಿಕ ಭದ್ತತಾ ಕ್ರಮಗಳಿಂದ ವಂಚಿತರಾಗುತ್ತಾರೆ.

ಭವಿಷ್ಯನಿಧಿ, ವಿಮೆ ಮಾಲೀಕರ ವಂತಿಗೆ ಕಡಿತ ಹಾಗೂ ಸೆಸ್ ಸಂಗ್ರಹದಲ್ಲಿ ವಿನಾಯ್ತಿಗಳು

ಭವಿಷ್ಯನಿಧಿ ಕಾನೂನಿನಲ್ಲಿ ಈಗಾಗಲೇ ಮಾಲೀಕರ ಪಾಲನ್ನು ಶೇ12 ರಿಂದ 10 ಕ್ಕೆ ಇಳಿಸಲಾಗಿದೆ. ಅದೇ ರೀತಿ ಇ.ಎಸ್.ಐ ಮಾಲಿಕರ ವಂತಿಗೆ ಪಾಲನ್ನು ಶೇ 4.75 ರಿಂದ 3.25 ಕ್ಕೆ ಇಳಿಸಲಾಗಿದೆ. ಅಲ್ಲದೆ ಇನ್ನು ಕಡಿತ ಮಾಡುವ ಅಧಿಕಾರ ಕೇಂದ್ರ ಸರಕಾರ ಕೈಯಲ್ಲಿ ಉಳಿಸಿಕೊಂಡಿದೆ. ಇ.ಎಸ್.ಐ ಪಿಎಫ್ ಯೋಜನೆಯಿಂದ ಹೊರ ಹೋಗುವ ಅವಕಾಶ ನೀಡಿದೆ. ಇದುವರೆಗೂ ವ್ಯಕ್ತಿಗತವಾಗಿ 10 ಲಕ್ಷ ಮೇಲ್ಪಟ್ಟ ನಿರ್ಮಾಣ ಕಾಮಗಾರಿಗೆ ಶೇ. 1 ರಷ್ಟು ಇದ್ದ ಸೆಸ್ ನ್ನು 50 ಲಕ್ಷದ ವರೆಗೂ ವಿನಾಯ್ತಿ ನೀಡಿದೆ. ಕಟ್ಟಡ ಕಾರ್ಮಿಕ ಮಂಡಳಿಗೆ ಸೆಸ್ ವಿನಾಯ್ತಿ ಕೋರಿಕೆಗೆ ಮಾಲಿಕರಿಗೆ ಅವಕಾಶ ಕಲ್ಪಿಸಿದೆ ಮತ್ತು ಈ ಮೂರು ಮಂಡಳಿಗಳ ನಿಧಿ ಹಾಗೂ ಸಾಮಾಜಿಕ ಭದ್ರತಾನಿಧಿ ನಿಯಂತ್ರಣ ಅಧಿಕಾರವನ್ನುತನ್ನ ಕೈಯಲ್ಲಿ ಕೇಂದ್ರ ಸರಕಾರ ಉಳಿಸಿಕೊಂಡಿದೆ.


ಕೇಂದ್ರ ಸರಕಾರದ ಕೈಯಲ್ಲಿ ಅಧಿಕಾರ ಕೇಂದ್ರೀಕರಣ

ಕಾನೂನಿನಲ್ಲಿ ಯಾವುದೂ ಸ್ಪಷ್ಟವಾಗಿಲ್ಲ. ಸಾಮಾಜಿಕ ಭದ್ರತೆಗಳನ್ನು 'ಜಾರಿಮಾಡಬಹುದು, ನೀಡಬಹುದು, ಸೂಚಿಸಬಹುದು, ಕೊಡಬಹುದು ಎನ್ನುವ ಭವಿಷ್ಯಕ ವಾಕ್ಯಗಳೇ ತುಂಬಿವೆ. ಮಾತ್ರವಲ್ಲ, ಸಂಹಿತೆಯ ಮತ್ತೊಂದು ಪ್ರಮುಖ ಆತಂಕದ ಸಂಗತಿಯೆಂದರೆ 'ಕಾರ್ಮಿಕ' ವಿಷಯವು ಸಂವಿಧಾನದ 'ಸಮವರ್ತಿ' ಪಟ್ಟಿಯಲ್ಲಿದೆ. ಆದರೂ ಕೇಂಧ್ರ ಸರಕಾರವೇ 98 ವಿಷಯಗಳಲ್ಲಿ ಕಾಯ್ದೆಯನ್ನು ಬದಲಾಯಿಸುವ ಕಾರ್ಯನಿರ್ವಾಹಕ ಅಧಿಕಾರವನ್ನು ತನ್ನ ಕೈಯಲ್ಲಿ ಕೇಂದ್ರೀಕರಿಸಿಕೊಂಡಿದೆ. ಅಲ್ಲದೆ 30 ವಿಷಯಗಳಲ್ಲಿ ಏಕಪಕ್ಷೀಯವಾಗಿ ಅಧಿಕಾರ ಚಲಾಯಿಸಿ ಬದಲಾಯಿಸುವ ಅಧಿಕಾರ ಉಳಿಸಿಕೊಂಡಿದೆ. ಈ ರೀತಿಯ ಮೂಲಕ ಕೇಂದ್ರ ಸರಕಾರ ರಾಜ್ಯ ಸರಕಾರಗಳು ಹಾಗೂ ಸಂಸತ್ತಿನ ಸಾರ್ವಭೌಮ ಅಧಿಕಾರವನ್ನು ಕಸಿದುಕೊಂಡಿದೆ. ಅಸಂಘಟಿತ ಕಾರ್ಮಿಕ ಮಂಡಳಿಗಳ ಸಂಯೋಜನೆಯಲ್ಲಿ ಬದಲಾವಣೆ ಮತ್ತು ಕೊವೀಡ್ ಸೇರಿ ಪ್ರಕೃತಿವಿಕೋಪ, ಸಾಂಕ್ರಾಮಿಕ ಸಮಯದಲ್ಲಿ ಸರಕಾರಕ್ಕೆ ಹೆಚ್ಚುವರಿ ಅಧಿಕಾರಗಳನ್ನು ರಾಜ್ಯಗಳ ಜೊತೆ ಕೇಂದ್ರ ಉಳಿಸಿಕೊಂಡಿದೆ.

ಕೇಂದ್ರ ಕಾರ್ಮಿಕ ಸಂಘಗಳ ಆಗ್ರಹಗಳು

* ಇ.ಎಸ್.ಐ, ಇಪಿಎಫ್ ಹಾಗೂ ಕಟ್ಟಡ ಕಾರ್ಮಿಕ ಮತ್ತು ಅಸಂಘಟಿತ ಕಾರ್ಮಿಕ ಕಲ್ಯಾಣ ಮಂಡಳಿಗಳು ಸ್ವತಂತ್ರವಾಗಿ ಮೊದಲಿನಂತೆ ಸ್ವಾಯತ್ತ ಮಂಡಳಿಗಳ ರೀತಿಯಲ್ಲಿ ಕಾರ್ಯನಿರ್ವಹಿಸಲು ಅವಕಾಶ ನೀಡಬೇಕು.
* ಅಸಂಘಟಿತ ಕಾರ್ಮಿಕರಿಗೆ ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐ.ಎಲ್.ಓ) ಸಮಾವೇಶದಂತೆ ಸಾರ್ವತ್ರಿಕವಾಗಿ 9 ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಒದಗಿಸಬೇಕು ಅದಕ್ಕಾಗಿ ವಾರ್ಷಿಕ ಶೇ 3 ರಷ್ಟಾದರೂ ಬಜೆಟ್ ನಲ್ಲಿ ಹಣ ಒದಗಿಸಬೇಕು.
* ಯೋಜನಾ ಕಾರ್ಮಿಕರನ್ನು ಇ.ಎಸ್.ಐ, ಪಿ.ಎಫ್ ಹಾಗೂ ಕನಿಷ್ಠ ವೇತನ ವ್ಯಾಪ್ತಿಗೆ ಒಳಪಡಿಸಬೇಕು.
* ಸಂಘಟಿತ ವಲಯದ ಕಾರ್ಮಿಕರು ಗ್ರಾಚುಯಿಟಿ, ಬೋನಸ್ ಮೊದಲಾದ ಸಾಮಾಜಿಕ ಭದ್ರತಾ ಯೋಜನೆಗಳ ಪ್ರಯೋಜನ ಪಡೆಯಬೇಕಾದರೆ ಎಲ್ಲಾ ವೇತನ ಮಿತಿಗಳನ್ನು ತೆಗೆದು ಹಾಕಬೇಕು ಮತ್ತು 10ಕ್ಕಿಂತ ಕಡಿಮೆ ಕಾರ್ಮಿಕರಿರುವ ಉದ್ಯಮಗಳನ್ನು ಸಾಮಾಜಿಕ ಭದ್ರತಾ ಸಂಹಿತೆ ವ್ಯಾಪ್ತಿಗೆ ಸೇರಿಸಬೇಕು.
* ಸಾಮಾಜಿಕ ಸುರಕ್ಷತಾ ಸಂಹಿತೆ ಅಡಿಯಲ್ಲಿ ಕೇಂದ್ರ ಸರಕಾರ ರೂಪಿಸಿಕೊಂಡಿರುವ ಅಧಿಕಾರಗಳನ್ನು ರಾಜ್ಯಗಳಿಗೆ ಮತ್ತು ಸಾಮಾಜಿಕ ಭದ್ರತಾ ಮಂಡಳಿಗೆ ವರ್ಗಾಯಿಸಬೇಕು.
* ರದ್ದುಪಡಿಸಿರುವ ಗಣಿ, ಬೀಡಿ ಹಾಗೂ ಗಣಿ ಕಾರ್ಮಿಕ ಕಲ್ಯಾಣ ನಿಧಿಗಳನ್ನು ಪುನರ್ ಸ್ಥಾಪಿಸಬೇಕು. ■

ಭಾರತದಿಂದ ಸಾಗಿಸಿದ ವಲಸೆ ಕಾರ್ಮಿಕರು



ವಿದೇಶಗಳಿಗೆ ಭಾರತದ ಕಾರ್ಮಿಕರ ವಲಸೆಯ ಹರಿವನ್ನು ಭೂಮಿಯಿಂದ ಸಂಘಟಿತ ಕೈಗಾರಿಕೆಗಳಿಗೆ ಭಾರತದ ಕಾರ್ಮಿಕರ ಮೊದಲ ಹೊರಹರಿವು ಎಂದು ಪರಿಗಣಿಸಬಹುದು. ಈ ವಲಸೆ ಕಾರ್ಮಿಕರನ್ನು ಸ್ವತಂತ್ರ ಕಾರ್ಮಿಕರೆಂದು ಕರೆಯಲಾಗುವುದಿಲ್ಲ. ಅವರು ಗುತ್ತಿಗೆ ಕಾರ್ಮಿಕರಾಗಿದ್ದರು. ಈ ಗುತ್ತಿಗೆ ಗುಲಾಮಗಿರಿ ಮತ್ತು ಸ್ವಾತಂತ್ರ್ಯದ ನಡುವೆ ಇದ್ದೊಂದು ವ್ಯವಸ್ಥೆ. 1838ರ ಬಾಂಬೆ ಗಜೆಟ್ ಹೇಳಿರುವಂತೆ 'ಅವರನ್ನು ಗುಲಾಮಗಿರಿಯನ್ನು ರದ್ದುಪಡಿಸಲಾದ ವಸಾಹತು ಪ್ರದೇಶಕ್ಕೆ ಕೊಂಡೊಯ್ಯಲಾಗುತ್ತದೆ, ಗುಲಾಮಗಿರಿಯನ್ನು ರದ್ದುಪಡಿಸಲಾಗಿದೆ, ಆದರೆ ಅಲ್ಲಿ ಅವರು ಗುಲಾಮರಾಗುತ್ತಾರೆ'! ಭಾರತದಿಂದ ವಲಸೆ ಹೋದ ಕಾರ್ಮಿಕರ ಈ ಶೋಳಣೆ ಮತ್ತು ತುಳಿತಕ್ಕೊಳಗಾದ ಜೀವನ ಮತ್ತು ಹೋರಾಟವು ಭಾರತದ ಕಾರ್ಮಿಕ ಇತಿಹಾಸದ ಒಂದು ಬೇರ್ಪಡಿಸಲಾಗದ ಅಂಶವಾಗಿದೆ ಎಂಬುದರಲ್ಲಿ ಸಂಶಯವಿಲ್ಲ.

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ–ಅನುವಾದ: ಸಿ.ಆರ್. ಶಾನಭಾಗ

ಹತ್ತೊಂಬತ್ತನೇ ಶತಮಾನದ ಮೂವತ್ತರ ದಶಕದಿಂದ ಇಪ್ಪತ್ತನೇ ಶತಮಾನದ ಆರಂಭದವರೆಗೆ ಆಫ್ರಿಕಾ ಮತ್ತು ವೆಸ್ಟ್ ಇಂಡೀಸ್‌ನ ಸಕ್ಕರೆ ವಸಾಹತುಗಳಿಗೆ ಭಾರತದ ಕಾರ್ಮಿಕರ ವಲಸೆ ಭಾರತದ ಕಾರ್ಮಿಕ ಇತಿಹಾಸದಲ್ಲಿ ಅತ್ಯಂತ ಕಟುವಾದ ಪ್ರಸಂಗವಾಗಿದೆ. ಸಾಂಪ್ರದಾಯಿಕ ಆರ್ಥಿಕತೆಯ ನಿರಂತರ ಕುಸಿತ ಮತ್ತು ನಾಶ ಮತ್ತು ಏಕಕಾಲದಲ್ಲಿ 1757 ರಲ್ಲಿ ಪ್ಲಾಸ್ಸಿ ಕದನದ ಸಮಯದಲ್ಲಿದ್ದ ಸುಮಾರು 130 ದಶಲಕ್ಷದಿಂದ 1881 ರಲ್ಲಿ 254 ದಶಲಕ್ಷಕ್ಕೆ ಜನಸಂಖ್ಯೆಯ ಹೆಚ್ಚಳದೊಂದಿಗೆ, ದೇಶವು ಭೂರಹಿತ ಬಡ ಜನಸಮೂಹದ ಶ್ರೇಣಿಯಲ್ಲಿ ಅಸಾಧಾರಣವಾಗಿ ಬೆಳೆಯುತ್ತಿದ್ದ ನಿರುದ್ಯೋಗಕ್ಕೆ ಸಾಕ್ಷಿಯಾಯಿತು . ಈ ನಿರ್ಗತಿಕ ಜನಸಮೂಹ ಭಾರತದಿಂದ ವಿದೇಶಿ ಬ್ರಿಟಿಷ್ ವಸಾಹತುಗಳಿಗೆ ಗುತ್ತಿಗೆ ಕಾರ್ಮಿಕರಾಗಿ ವಲಸೆ ಹೋದರು.

ಸೀಮಿತ ಪ್ರಮಾಣದಲ್ಲಿ ಈ ವಲಸೆ 1830 ರ ಹಿಂದೆಯೇ ಪ್ರಾರಂಭವಾಗಿತ್ತು, ಭಾರತದ ಕಾರ್ಮಿಕರ ಒಂದು ಗುಂಪನ್ನು ಫ್ರೆಂಚ್ ವಸಾಹತಾದ ಐಲ್ ಡಿ ಬೌರ್ಬನ್‌ಗೆ ಕೊಂಡೊಯ್ಯಲಾಯಿತು. 1834 ರ ವರ್ಷದಲ್ಲಿ ಬ್ರಿಟಿಷ್ ವಸಾಹತುಗಳಲ್ಲಿನ ಗುಲಾಮಗಿರಿಯನ್ನು ರದ್ದುಗೊಳಿಸಿದ್ದು ಮಾನವಕುಲದ ಇತಿಹಾಸದಲ್ಲಿ ವಿಜಯೋತ್ಸವದ ವರ್ಷವಾಗಿತ್ತು. ಆದರೆ ಅದು ಈ ಮಹಾನ್ ವಲಸೆಯ ಪ್ರವಾಹವನ್ನು ತೆರೆಯಿತು. 1834 ಮತ್ತು 1837 ರ ನಡುವೆ 17,000 ಕ್ಕೂ ಹೆಚ್ಚು ಭಾರತದ ಕಾರ್ಮಿಕರನ್ನು ದೇಶದಿಂದ ಹೊರಗೆ ಸಾಗಿಸಲಾಯಿತು.

'ವಿದೇಶಗಳಿಗೆ ಭಾರತದ ಕಾರ್ಮಿಕರ ವಲಸೆಯ ಹರಿವನ್ನು ಭೂಮಿಯಿಂದ ಸಂಘಟಿತ ಕೈಗಾರಿಕೆಗಳಿಗೆ ಭಾರತದ ಕಾರ್ಮಿಕರ ಮೊದಲ ಹೊರಹರಿವು ಎಂದು ಪರಿಗಣಿಸಬಹುದು.'

ಮಾರಿಷಸ್, ಬ್ರಿಟಿಷ್ ಗಯಾನಾ, ಟ್ರಿನಿಡಾಡ್ ಮತ್ತು ಜಮೈಕಾ ದ್ವೀಪಗಳು ಸಕ್ಕರೆ ಉತ್ಪಾದನೆಗೆ ಪ್ರಸಿದ್ಧವಾಗಿದ್ದವು. ಈ ದ್ವೀಪಗಳ ಸಕ್ಕರೆ ತೋಟಗಳು ಮತ್ತು ಗಿರಣಿಗಳು ಗುಲಾಮ ಕಾರ್ಮಿಕರನ್ನು ನೇಮಿಸಿಕೊಂಡಿದ್ದವು. ಗುಲಾಮರ ವ್ಯಾಪಾರವನ್ನು ರದ್ದುಗೊಳಿಸಿದ ನಂತರ ಸ್ವತಂತ್ರರಾದ ಗುಲಾಮರು ಈ ತೋಟಗಳು ಮತ್ತು ಗಿರಣಿಗಳಲ್ಲಿ ಕೆಲಸ ಮಾಡಲು ನಿರಾಕರಿಸಿದರು. ಇದು ಕಾರ್ಮಿಕರ ತೀವ್ರ ಕೊರತೆಗೆ ಮತ್ತು ಆ ದ್ವೀಪಗಳ ಸಕ್ಕರೆ ಕೈಗಾರಿಕೆಗಳ ಗಂಭೀರ ಬಿಕ್ಕಟ್ಟಿಗೆ ಕಾರಣವಾಯಿತು. ಸಾಮ್ರಾಜ್ಯಶಾಹಿ ಸರ್ಕಾರದ ನೆರವಿನೊಂದಿಗೆ, ಸಕ್ಕರೆ ಕುಳಗಳು ಭಾರತದಿಂದ ಭೂಹೀನ ಮತ್ತು ನಿರ್ಗತಿಕ ರೈತರನ್ನು ಈ ವಸಾಹತುಗಳಲ್ಲಿ ಕಾರ್ಮಿಕರಾಗಿ ಕೆಲಸ ಮಾಡಲು ಸಾಗಿಸಲು ಪ್ರಾರಂಭಿಸಿದರು.

ಆದಾಗ್ಯೂ, ಈ ವಲಸೆ ಕಾರ್ಮಿಕರನ್ನು ತಮ್ಮ ಕಾರ್ಮಿಕ-ಶಕ್ತಿಯುನ್ನು ಮಾರಾಟ ಮಾಡುವ ಪ್ರಶ್ನೆಯ ಮೇಲೆ ಇಲ್ಲಿಯವರೆಗೆ ಸಂಪೂರ್ಣವಾಗಿ ಸ್ವತಂತ್ರವಾಗಿರದ ಕಾರಣ ಸ್ವತಂತ್ರ ಕಾರ್ಮಿಕರೆಂದು ಕರೆಯ ಲಾಗುವುದಿಲ್ಲ. ಅವರು ಗುತ್ತಿಗೆ ಕಾರ್ಮಿಕರಾಗಿದ್ದರು. ಈ ಗುತ್ತಿಗೆ ವ್ಯವಸ್ಥೆಯುನ್ನು ಗುಲಾಮಗಿರಿ ಯೊಂದಿಗೆ ಅಥವಾ ಸ್ವಾತಂತ್ರ್ಯದೊಂದಿಗೆ ಗುರುತಿಸ 'ಲಾಗುವುದಿಲ್ಲ. ಬದಲಿಗೆ, ವಾಸ್ತವವಾಗಿ, ಅದು ಎರಡರ ನಡುವೆ ಇತ್ತು. ಈ ಕಾರ್ಮಿಕರೊಂದಿಗೆ ಸಾಮಾನ್ಯವಾಗಿ ಐದು ವರ್ಷಗಳ ಅವಧಿಗೆ ಒಪ್ಪಂದ ಮಾಡಿಕೊಳ್ಳಲಾಗುತ್ತಿತ್ತು ಮತ್ತು ಅವರಿಗೆ ಆಹಾರ, ಬಟ್ಟೆ, ವಸತಿ, ವೈದ್ಯಕೀಯ ಚಿಕಿತ್ಸೆ ಮತ್ತು ಮಾಸಿಕ ವೇತನವನ್ನು ನೀಡಲಾಗುತ್ತಿತ್ತು.

ಈ ಕಾರ್ಮಿಕರ ನೇಮಕಾತಿ ವಿಧಾನದ ಭಯಾನಕತೆ ವರ್ಣನಾತೀತ. ಯುರೋಪಿಯನ್ ಮಾಲೀಕರು ಗ್ರಾಮೀಣ ಪ್ರದೇಶದ ಕಾರ್ಮಿಕರನ್ನು ಒಟ್ಟುಗೂಡಿಸಲು ಭಾರತದ ಭೂಗತ ಜಗತ್ತಿನ ಕೈದಿಗಳ ನಡುವಿನಿಂದ ಕೆಲವು ವಿಶೇಷ ರೀತಿಯ ವ್ಯಕ್ತಿಗಳನ್ನು ನೇಮಿಸಿಕೊಂಡರು. ಇವರನ್ನು ಅರ್ಕಾಥಿಗಳು (ಕಾಂಟ್ರಾಕ್ಟರ್ಸ್) ಎಂದು ಜನಪ್ರಿಯವಾಗಿ ಕರೆಯಲಾಗುತ್ತಿತ್ತು. ಯಾವುದೇ ಭೀತಿಯಿಲ್ಲದೇ ವಂಚನೆಯ ಕ್ರಮಗಳು ಮತ್ತು ಮೋಸದಿಂದ ಈ ಅರ್ಕಾಥಿಗಳು ಭಾರತದಿಂದ ವಲಸೆ ಹೋಗುವುದಕ್ಕಾಗಿ ನಿರುದ್ಯೋಗಿಗಳು, ಭೂಹೀನರು, ಅರೆ-ಹೊಟ್ಟೆಯ ಮತ್ತು ಅರೆಬೆತ್ತಲೆ ಗ್ರಾಮೀಣ ಜನರನ್ನು ಆಕರ್ಷಿಸಿದರು. ಸಹಿ ಮಾಡಿದ ಮುಚ್ಚಳಿಕೆಯನ್ನು ಪಡೆದುಕೊಂಡ ನಂತರ, ಈ ಅದೃಷ್ಟಹೀನ ಪುರುಷರು ಮತ್ತು ಮಹಿಳೆಯರನ್ನು ಮುಖ್ಯವಾಗಿ ಕಲ್ಕತ್ತಾಗೆ ಮತ್ತು ಬಾಂಬೆ, ಮದ್ರಾಸ್ ಮತ್ತು ಫ್ರೆಂಚ್ ವಶದಲ್ಲಿದ್ದ ಭಾರತದ ಇತರ ಕೆಲವು ಬಂದರು ಪ್ರದೇಶಗಳಿಗೆ ಸಾಗಿಸಲಾಗುತ್ತಿತ್ತು.. ಭಾರತದಿಂದ ಹೊರಹೋಗುವ ಮೊದಲು ಸಶಸ್ತ್ರ ಕಾವಲಿನಲ್ಲಿ ಅವರನ್ನು ಈ ಬಂದರುಗಳ ಗೋಡೌನ್‌ಗಳಲ್ಲಿ ಕೂಡಿಹಾಕಲಾಗುತ್ತಿತ್ತು. ನಂತರದ ದಿನಗಳಲ್ಲಿ, ಅವರನ್ನು ಸಕ್ಕರೆ ವಸಾಹತುಗಳಿಗೆ ಮಾತ್ರವಲ್ಲದೆ ಇತರ ಸ್ಥಳಗಳಿಗೂ ಸಾಗಿಸಲಾಗುತ್ತಿತ್ತು.

ಲಭ್ಯವಿರುವ ಅಂಕಿಅಂಶಗಳು 1870 ರ ಹೊತ್ತಿಗೆ ದೇಶದ ವಿವಿಧ ಭಾಗಗಳಿಂದ ಕೂಡಿಹಾಕಿದ ಪುರುಷರು ಮತ್ತು ಮಹಿಳೆಯರು ಮತ್ತು ಮಕ್ಕಳನ್ನು ಒಳಗೊಂಡು ಐದು ಲಕ್ಷಕ್ಕಿಂತಲೂ ಹೆಚ್ಚು ಕಾರ್ಮಿಕರನ್ನು-ಹೀಗೆ ಭಾರತದಿಂದ ಹೊರಗೆ ಸಾಗಿಸಲಾಯಿತು.

ಹತ್ತೊಂಬತ್ತನೇ ಶತಮಾನದ ಅಂತ್ಯದ ವೇಳೆಗೆ, ವಲಸೆಹೋದ ಭಾರತದ ಕಾರ್ಮಿಕರ ಸಂಖ್ಯೆ ಏಳು ದಶಲಕ್ಷಕ್ಕೆ ಏರಿತು. ಮಂದಗತಿಯಲ್ಲಿ, ಈ ಪ್ರಕ್ರಿಯೆಯು 1917 ರ ವರೆಗೆ ಮುಂದುವರೆಯಿತು.

ಹತ್ತೊಂಬತ್ತನೇ ಶತಮಾನದ ಎಪ್ಪತ್ತರ ಮತ್ತು ಎಂಭತ್ತರ ದಶಕದಲ್ಲಿ ಅಂತಹ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲು ಹಲವಾರು ಏಜೆನ್ಸಿಗಳು ಭಾರತದಾದ್ಯಂತ ಮೊಳಕೆಯೊಡೆದವು. ನೇಮಕಾತಿಗಾಗಿ ಒಂದು ಕೇಂದ್ರ ಮತ್ತು ಇನ್ನೊಂದರ ನಡುವೆ ಕಠಿಣ ಸ್ಪರ್ಧೆ ಇದ್ದು, ಹೆಚ್ಚು ಹೆಚ್ಚು ಅದೃಷ್ಟಹೀನ ಪುರುಷರು ಮತ್ತು ಮಹಿಳೆಯರು ನಿರ್ಲಜ್ಜ ಅರ್ಕಾಥಿಗಳ ಸಂಪೂರ್ಣ ಸುಳ್ಳು ಮತ್ತು ಮೋಸದ ಕೃತಿಗಳಿಗೆ ಬಲಿಯಾದರು. ಈ ಅರ್ಕಾಥಿಗಳು ಮತ್ತು ಈ 'ಕೂಲಿ ವ್ಯಾಪಾರ'ದೊಂದಿಗೆ ಸಂಪರ್ಕ ಹೊಂದಿದ ಇತರ ವ್ಯಕ್ತಿಗಳು ದೊಡ್ಡ ಸಂಪತ್ತನ್ನು ಗಳಿಸುತ್ತಿದ್ದರು.

ಹೆಚ್ಚು, ಸುದೀರ್ಘ ಸಮುದ್ರಯಾನದಲ್ಲಿ ಈ ಮುಗ್ಧ ಬಲಿಪಶುಗಳನ್ನು ಹಡಗಿನಲ್ಲಿ ಹೇಗೆ ನಡೆಸಿಕೊಳ್ಳಲಾಯಿತು ಎಂಬುದು ಮತ್ತೊಂದು ಕರುಣಾಜನಕ ಕಥೆ. 'ಗುಡ್ಡಗಾಡಿನ-ಕೂಲಿಗಳ ರಫ್ತಿನಲ್ಲಿ ಅಸ್ತಿತ್ವದಲ್ಲಿದೆ ಎಂದು ಹೇಳಲಾದ ದುರುಪಯೋಗ' ಕುರಿತು ವಿಚಾರಿಸಲು 1838 ರಲ್ಲಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ವಿಚಾರಣಾ ಸಮಿತಿಯ ಮುಂದೆ ನೀಡಿದ ಈ ಕೆಳಗೆ ಉಲ್ಲೇಖಿಸಿರುವ ಕೆಲವು ಸಾಕ್ಷ್ಯಗಳು ದುರಾಚಾರಗಳನ್ನು ಬಹಿರಂಗಪಡಿಸಿದವು.


ಈ ಕ್ರೂರ ಶೋಷಣೆ ಮತ್ತು ಅವರ ಮೇಲೆ ನಡೆದ ಕ್ರೂರತೆಯ ಮತ್ತು ಅನಾಗರಿಕತೆಯು ಮಾಹಿತಿಯು ಭಾರತದ ಪ್ರಜ್ಞಾವಂತ ಜನರಲ್ಲಿ ತೀವ್ರ ಅಸಮಾಧಾನವನ್ನು ಉಂಟುಮಾಡಿತು. ಇಂಗ್ಲೆಂಡ್‌ನ ಹಲವರು ಜನ ಸಹ ಅಸಮಾಧಾನ ವ್ಯಕ್ತಪಡಿಸಿದರು.


15 ಜೂನ್ 1838 ರ ಬಾಂಬೆ ಗೆಜೆಟ್ ನೋವಿನಿಂದ ಹೀಗೆ ಬರೆದಿದೆ: "...ಉದ್ಯೋಗ ಕೊಡಿಸುವ ನೆಪದಲ್ಲಿ ಮೋಸಗೊಳಿಸಿ ಈ ಬಡ ಪುರುಷರನ್ನು ತಮ್ಮ ಮನೆಗಳಿಂದ ಹೊರಗೆ ಎಳೆದು ತರಲಾಗುತ್ತದೆ ಮತ್ತು ಅವರನ್ನು ಗಮ್ಯಸ್ಥಾನಕ್ಕೆ ರವಾನಿಸಲಾಗುತ್ತದೆ, ಆ ಕ್ಷಣದಿಂದ ಅವರು ಗುಲಾಮಗಿರಿಯಲ್ಲಿ ಜನಿಸಿದ್ದಕ್ಕಿಂತ ಹೆಚ್ಚಾಗಿ ಟಾಸ್ಕ್-ಮಾಸ್ಟರ್ ಪ್ರಾಬಲ್ಯಕ್ಕೆ ಒಳಗಾಗುತ್ತಾರೆ. ಅವರನ್ನು ಗುಲಾಮಗಿರಿಯನ್ನು ರದ್ದುಪಡಿಸಲಾದ ವಸಾಹತು ಪ್ರದೇಶಕ್ಕೆ ಕೊಂಡೊಯ್ಯಲಾಗುತ್ತದೆ, ಗುಲಾಮಗಿರಿಯನ್ನು ರದ್ದುಪಡಿಸಲಾಗಿದೆ, ಆದರೆ ಅಲ್ಲಿ ಅವರು ಗುಲಾಮರಾಗುತ್ತಾರೆ."

ಕಲ್ಕತ್ತಾದ ಸುತ್ತಮುತ್ತಲಿಂದ ಪ್ರಕಟವಾಗುತ್ತಿದ್ದ ಸಮಕಾಲೀನ ಬಂಗಾಳಿ ವಾರಪತ್ರಿಕೆ 'ಸೊಂಪ್ರಕಾಶ್' ಈ ವ್ಯವಸ್ಥೆಯ ವಿರುದ್ಧ ಸರಣಿ ಬರಹಗಳನ್ನು ಪ್ರಕಟಿಸಿತು. ಕಾರ್ಮಿಕರ ವಲಸೆಯ ಮೇಲೆ ನಿಯಂತ್ರಣ ಸಾಧಿಸಲು ಸರ್ಕಾರವು ಮಸೂದೆಯನ್ನು ಮಂಡಿಸಿದಾಗ, 'ಪ್ರತಿ ವರ್ಷ 20,000 ಪುರುಷರು ಭಾರತದಿಂದ ವಲಸೆ ಹೋಗುತ್ತಿದ್ದಾರೆ. ಅವರಲ್ಲಿ ಹಲವರು ದಾರಿಯಲ್ಲಿ ಸಾಯುತ್ತಾರೆ. ಪ್ರಯಾಣದ ಸಮಯದಲ್ಲಿ ಅಪಾರ ಯಾತನೆ ಅನುಭವಿಸಿದ ನಂತರ ಅಂತಿಮವಾಗಿ ತಮ್ಮ ಗಮ್ಯಸ್ಥಾನವನ್ನು ತಲುಪುವವರು, ಅನೇಕ ವಿಷಯಗಳಲ್ಲಿ ಅವರು ಗುಲಾಮರಾಗಿ ಉಳಿಯಬೇಕಾಗುತ್ತದೆ. ಅವರ ಸಂಕಟವನ್ನು ಕೇಳಿದ ನಂತರವೂ ಅಸಡ್ಡೆಮಾಡುವುದು ಕ್ರೌರ್ಯವನ್ನು ಮಾತ್ರ ಅರ್ಥೈಸುತ್ತದೆ. ಎಂದು ಬರೆಯಿತು.

ನಿಯತಕಾಲಿಕಗಳಲ್ಲಿನ ವಿಮರ್ಶಾತ್ಮಕ ಬರಹಗಳಲ್ಲದೆ, ಕಲ್ಕತ್ತಾದ ನಾಗರಿಕರು 10 ಜುಲೈ 1838 ರಂದು ನಡೆದ ಸಭೆಯಲ್ಲಿ ಈ ಒಪ್ಪಂದದ ವ್ಯವಸ್ಥೆಯನ್ನು ತೀವ್ರವಾಗಿ ಖಂಡಿಸಿದರು.

ದಕ್ಷಿಣ ಆಫ್ರಿಕಾದಲ್ಲಿ ಭಾರತದಿಂದ ಸಾಗಿಸಲ್ಪಟ್ಟ ವಲಸೆ ಕಾರ್ಮಿಕರು





ಬೃಹತ ಸರಕು ಸಾಗಾಣಿಕೆ ಹಡಗುಗಳಲ್ಲಿ ದಿನಗಳಂತೆ ಕೂಡಿಹಾಕುವುದು, ಕಿರುಕುಳ ನೀಡುವುದು, ಕಡಿಮೆ ಆಹಾರ ನೀಡುವುದು ಮತ್ತು ಯಾವುದೇ ವೈದ್ಯಕೀಯ ಚಿಕಿತ್ಸೆ ನೀಡದಿರುವುದರ ಪರಿಣಾಮವೆಂದರೆ, ಈ ಅದೃಷ್ಟಹೀನ ಕಾರ್ಮಿಕರಲ್ಲಿ ಒಂದು ಭಾಗ ದಾರಿಯಲ್ಲಿ ಸಾಯುತ್ತಾರೆ, ತಮ್ಮ ಗಮ್ಯಸ್ಥಾನವನ್ನು ತಲುಪಿದಾಗ ಸಂಪೂರ್ಣವಾಗಿ ದಣಿದು ಚೂರುಚೂರಾಗಿರುತ್ತಾರೆ.. ಈ ವಸಾಹತುಗಳ ವಿಚಿತ್ರ ಪರಿಸರಕ್ಕೆ ತಮ್ಮನ್ನು ಹೊಂದಿಸಿಕೊಳ್ಳುವುದು ಸಹ ಅವರಿಗೆ ಅಗ್ನಿಪರೀಕ್ಷೆಯಾಗಿತ್ತು

ವಸಾಹತುಗಳಲ್ಲಿನ ಈ ಕಾರ್ಮಿಕರ ಸೇವೆಯ ಸ್ಥಿತಿ ಸ್ವಾಭಾವಿಕವಾಗಿ ದರಿದ್ರವಾಗಿತ್ತು. ದೈನಂದಿನ ಕೆಲಸದ ಅವಧಿ ಸಾಮಾನ್ಯವಾಗಿ 12 ರಿಂದ 13 ಗಂಟೆಗಳ ನಡುವೆಯಿತ್ತು.. ಆದರೆ ಸಕ್ಕರೆ ತೋಟಗಳು ಮತ್ತು ಗಿರಣಿಗಳಲ್ಲಿ ಶ್ರಮವು ತುಂಬಾ ಪ್ರಯಾಸಕರವಾಗಿರುತ್ತದೆ, ಆದ್ದರಿಂದ ಅವರು ತಮ್ಮ ಕೆಲಸವನ್ನು ಪೂರ್ಣಗೊಳಿಸಲು ಹೆಚ್ಚಾಗಿ ರಾತ್ರಿಯಲ್ಲೂ ಕೆಲಸ ಮಾಡಬೇಕಾಗಿತ್ತು. ಸಂವೇದನೆ ಕಳೆದುಕೊಂಡು ಸಂಪೂರ್ಣವಾಗಿ ಆಯಾಸ ಗೊಂಡ ಅವರು ತಡರಾತ್ರಿ ಮನೆಗೆ ಮರಳುತ್ತಿದ್ದರು. ಗುಲಾಮಗಿರಿಯಂತೆಯೇ, ಹೊಲಗಳಲ್ಲಿ ಅಥವಾ ಗಿರಣಿಗಳಲ್ಲಿ ಕೆಲಸ ಮಾಡುವಾಗ ಅವರ ಮೇಲೆ ಮೇಲ್ವಿಚಾರಕನು ನಿರಂತರ ನಿಗಾ ಇಡುತ್ತಿದ್ದನು. ಭಾನುವಾರದಂದು ಸಹ ಅವರು ಅದೇ ಕೆಲಸವನ್ನು ಮಾಡಬೇಕಾಗುತ್ತಿತ್ತು.. ಕೆಲವು ಕಾಲನಿಗಳಲ್ಲಿ ಅವರು ದಿನಕ್ಕೆ 18 ಗಂಟೆಗಳವರೆಗೆ ಕೆಲಸ ಮಾಡಬೇಕಾಗಿತ್ತು. ಈ ಅತಿಯಾದ ಕಠಿಣ ಪರಿಶ್ರಮವು ಅವರಲ್ಲಿ ಸಾವಿನ ಪ್ರಮಾಣ ಹೆಚ್ಚಲು ಕಾರಣವಾಯಿತು..

ಕಾರ್ಮಿಕರನ್ನು ಸಂಘಟಿಸಲು ಸಾಧ್ಯವಾಗ ಬಾರದೆಂದು ಅವರನ್ನು ಹೊರಗೆ ಹೋಗಲು ಬಿಡುತ್ತಿರಲಿಲ್ಲ. ಅಸಹಕಾರ ಮಾಡಿದವರನ್ನು ಡಬ್ಬಿಯಲ್ಲಿ ಕೂಡಿಹಾಕಲಾಗಿತಿತ್ತು.. ರೋಗಪೀಡಿತರು ಮತ್ತು ದೈಹಿಕವಾಗಿ ಅಂಗವಿಕರಿಂದ ಸಹ ಬಲವಂತವಾಗಿ ಕೆಲಸ ಮಾಡಿಸಲಾಗುತ್ತಿತ್ತು.. ಆದ್ದರಿಂದ ಯುರೋಪಿಯನ್ ಮಾಲೀಕರು ಅವರನ್ನು ನಡೆಸಿಕೊಳ್ಳುತ್ತಿದ್ದ ರೀತಿ ಗುಲಾಮ-ಕಾರ್ಮಿಕರನ್ನು ನಡೆಸಿಕೊಂಡ ರೀತಿಗಿಂತ ಭಿನ್ನವಾಗಿರಲಿಲ್ಲ.

ಆದಾಗ್ಯೂ, ಈ ಕ್ರೂರ ಕ್ರಮಗಳನ್ನು ವಲಸೆ ಬಂದ ಭಾರತದ ಕಾರ್ಮಿಕರಿಂದ ನಿರಂತರವಾಗಿ ಸಹಿಸಿಕೊಳ್ಳಲಾಗಲಿಲ್ಲ. ಅವರು ತಮ್ಮನ್ನು ತಾವು ಸಂಘಟಿಸಿಕೊಂಡು ಪ್ರತಿಭಟಿಸಿದ ಉದಾಹರಣೆಗಳಿವೆ. ಡೆವನ್‌ಶೈರ್ ಕೋಟೆಯ ಬ್ರಿಟಿಷ್ ಗಯಾನಾದ ತೋಟಗಳಲ್ಲಿ ಸಂಘಟನೆಯಾದ ಕಾರ್ಮಿಕರು ತಮ್ಮ ದೂರನ್ನು ಉನ್ನತ ಅಧಿಕಾರಿಗಳ ಮುಂದೆ ಇಡಲು ಜಾರ್ಜ್‌ಟೌನ್‌ಗೆ ಮೆರವಣಿಗೆ ನಡೆಸಿದರು. ಆದರೆ ಕಾರ್ಮಿಕರ ಮೇಲೆ ಪೊಲೀಸರು ಕ್ರೂರ ದಾಳಿಯನ್ನು ನಡೆಸಿದರು, ಐದು ಮಂದಿ ಪೊಲೀಸ್ ಗುಂಡಿನ ದಾಳಿಯಲ್ಲಿ ಸಾವನ್ನಪ್ಪಿದರು, ಒಂಬತ್ತು ಮಂದಿ ಗಾಯಗೊಂಡರು ಮತ್ತು ಅನೇಕರನ್ನು ಬಂಧಿಸಲಾಯಿತು.

ಭಾರತದಿಂದ ವಲಸೆ ಹೋದ ಕಾರ್ಮಿಕರ ಈ ಶೋಷಣೆ ಮತ್ತು ತುಳಿತಕ್ಕೊಳಗಾದ ಜೀವನ ಮತ್ತು ಹೋರಾಟವು ಭಾರತದ ಕಾರ್ಮಿಕ ಇತಿಹಾಸದ ಒಂದು ಬೇರ್ಪಡಿಸಲಾಗದ ಅಂಶವಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ■

ಕೃಷಿ ಕಾಯ್ದೆಗಳ ಸಮರ್ಥನೆಗೆ ಎರಡು ಪ್ರಕಟಣೆಗಳು–ಎರಡು ಕೋಟಿ ಇ–ಮೇಲ್‌ಗಳು

ತನ್ನ ಕಾರ್ಪೊರೇಟ್–ಪರ ನೀತಿಯನ್ನು ಬದಲಿಸಲೊಲ್ಲದ ಕೇಂದ್ರ ಸರಕಾರ ಈಗ ತನ್ನ ಮೊಂಡುತನವನ್ನು ಮರೆಮಾಚುವ ಶತಪ್ರಯತ್ನ ನಡೆಸುತ್ತಿದೆ. ಅದಕ್ಕಾಗಿ ರೈತ ಆಂದೋಲನದ ಹೆಸರುಗೆಡಿಸುವ, ಅದನ್ನು ವಿಭಜಿಸುವ ಹೊಸ–ಹೊಸ ಪ್ರಯತ್ನಗಳನ್ನು ನಡೆಸುತ್ತಿದೆ ಎಂದು ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ ಸರಕಾರವನ್ನು ತರಾಟೆಗೆ ತಗೊಂಡಿದೆ.

ಪಂಜಾಬಿನ ರೈತರು ಸರಕಾರದ ದಮನ ಚಕ್ರವನ್ನೆಲ್ಲ ಬೇಧಿಸಿಕೊಂಡು ದಿಲ್ಲಿಯ ಗಡಿಯಲ್ಲಿ ಸವಾಲು ಹಾಕುತ್ತಿದ್ದಾಗ ನವಂಬರ್ 30ರಂದು ಭಾರತ ಸರಕಾರದ 47 ಪುಟಗಳ ಪ್ರಕಟಣೆ "ಪ್ರಧಾನ ಮಂತ್ರಿ ಮೋದಿ ಮತ್ತು ಸಿಖ್‌ರೊಂದಿಗೆ ಅವರ ಸರಕಾರದ ವಿಶೇಷ ಸಂಬಂಧ" ಬಿಡುಗಡೆಗೊಂಡಿತು. ಡಿಸೆಂಬರ್ 8ರಿಂದ 12 ರ ನಡುವೆ ಭಾರತೀಯ ರೈಲ್ವೆಯ ಅಡಿಯಲ್ಲಿರುವ ಐ.ಆರ್.ಸಿ.ಟಿ.ಸಿ. ಇದನ್ನು ತನ್ನ 1.9 ಕೋಟಿ ಗ್ರಾಹಕರಿಗೆ ಇ–ಮೆಲ್ ಮೂಲಕ ಕಳಿಸಿದೆ ಎಂದು ಈಗ ಬೆಳಕಿಗೆ ಬಂದಿದೆ.

ಇದೇ ವೇಳೆಗೆ ಭಾರತ ಸರಕಾರದ ಇನ್ನೊಂದು ಹೊಸ 106 ಪುಟಗಳ ವರ್ಣರಂಜಿತ ಪ್ರಕಟಣೆ "ಮೊದಲಿಗೆ ರೈತರು"(ಪುಟ್ಟಿಂಗ್ ಫಾರ್ಮರ್ಸ್ ಫಸ್ಟ್) ಪ್ರಕಟವಾಗಿರುವ ಸುದ್ದಿಯೂ ಬಂದಿದೆ.

'ಮೊದಲಿಗೆ ರೈತರು' ಎನ್ನುವ ಈ ಪುಸ್ತಕದ ಪುಟ 16 ರಲ್ಲಿ "ಈ ಸುಧಾರಣೆಗಳು ಕೃಷಿ–ವ್ಯಾಪಾರಕ್ಕೆ ಎಂತಹ ಹೊಸ ಮಾರ್ಗಗಳನ್ನು ತೆರೆಯಲಿದೆ ಎಂಬುದನ್ನು ಕಲ್ಪಿಸಿಕೊಳ್ಳಿ" ಎಂದು ಹೇಳುತ್ತದೆ–**ಅಂದರೆ ಈ ಹೊಸ ಕಾಯ್ದೆಗಳು 'ಮೊದಲಿಗೆ ಕಾರ್ಪೊರೇಟ್ ಕೃಷಿ ವ್ಯಾಪಾರ' ಎಂದೇ ಹೇಳುತ್ತದಲ್ಲವೇ ಎಂದು ಎಐಕೆಎಸ್‌ಸಿಸಿ ಟಿಪ್ಪಣಿ ಮಾಡಿದೆ.**

ಇದು ಕೊವಿಡ್–19ರ ಅಟಾಟೋಪದ ನಡುವೆಯೇ ಸುಗ್ರೀವಾಜ್ಞೆಗಳನ್ನು ಹೊರಡಿಸಿದಾಗ ಬಂಡವಳಿಗರ ಸಂಘಟನೆ ಸಿ.ಐ.ಐ. ನ ವಾರ್ಷಿಕ ಅಧಿವೇಶನವನ್ನು ಉದ್ದೇಶಿಸಿ ಪ್ರಧಾನ ಮಂತ್ರಿಗಳು ಮಾಡಿದ ಭಾಷಣದಲ್ಲಿನ ಒಂದು ಸಾಲು ಎಂಬುದು ಗಮನಾರ್ಹ.


ರೈತರ ಪ್ರತಿನಿಧಿಗಳು ಸರಕಾರದೊಂದಿಗೆ ಮಾತುಕತೆಗಳಲ್ಲಿ ಇದನ್ನೇ ಹೇಳಿದ್ದು. ಈ ಹೊಸ ಕಾಯ್ದೆಗಳು ಹೇಗೆ ಭಾರತೀಯ ಕೃಷಿ ಮಾರುಕಟ್ಟೆಗಳಲ್ಲಿ ದೇಶಿ–ವಿದೇಶಿ ಕಾರ್ಪೊರೇಟ್‌ಗಳಿಗೆ ಉತ್ತೇಜನೆ ಕೊಡಲಿಕ್ಕಾಗಿ ಅವರಿಗೆ ಖಾಸಗಿ ಮಂಡಿಗಳನ್ನು ತೆರೆಯುವ ಹಕ್ಕು ಕೊಡುತ್ತದೆ, ರೈತರನ್ನು ಕಾಂಟ್ರಾಕ್ಟ್ ಕೃಷಿಯಲ್ಲಿ ತೊಡಗಿಸುತ್ತದೆ, ಇದು ಹೇಗೆ ಸರಕಾರೀ ಮಂಡಿಗಳನ್ನು ಧ್ವಂಸ ಮಾಡುತ್ತದೆ, ಲಾಗುವಾಡುಗಳ ಬೆಲೆಗಳನ್ನು ಹೆಚ್ಚಿಸುತ್ತದೆ, ರೈತರನ್ನು ಸಾಲಗಾರರನ್ನಾಗಿ ಮಾಡಿ ಹೇಗೆ ಕೊನೆಗೆ ಅವರನ್ನು ಅವರ ಜಮೀನುಗಳಿಂದಲೇ ಎತ್ತಂಗಡಿ ಮಾಡುತ್ತದೆ ಎಂಬುದನ್ನು ಇನ್ನಿಲ್ಲದಂತೆ ಬಿಡಿಬಿಡಿಯಾಗಿ ವಿವರಿಸಿದ್ದಾರೆ.

ರೈತರನ್ನು ಇನ್ನಷ್ಟು ಸಾಲಗಾರರಾಗಿ ಮಾಡುವುದಿಲ್ಲ, ಲಾಗುವಾಡುಗಳ ಬೆಲೆಗಳು ಏರುವುದಿಲ್ಲ, ಸಿ2+50% ಸೂತ್ರದಂತೆ ಎಲ್ಲ ಬೆಳೆಗಳಿಗೆ ಕನಿಷ್ಟ ಬೆಂಬಲ ವ್ಯವಸ್ಥೆ ಇರುತ್ತದೆ ಎಂಬ ಖಾತ್ರಿಯನ್ನು ಕಾನೂನು ಪ್ರಕಾರ ಕೊಡಲು ಹಿಂಜರಿಯುವ ಸರಕಾರ ರೈತರು ಮಾತುಕತೆಗಳಿಗೆ ಬರುತ್ತಿಲ್ಲ, ತನ್ನ ಪ್ರಸ್ತಾವಗಳನ್ನು ಸ್ವೀಕರಿಸುತ್ತಿಲ್ಲ ಎಂದು ದೂರುತ್ತ ರೈತ ಆಂದೋಲನದ ಹೆಸರುಗೆಡಿಸಲು ಪ್ರಯತ್ನಿಸುತ್ತಿದೆ ಎಂದು ಎಐಕೆಎಸ್‌ಸಿಸಿ ಕೇಂದ್ರ ಸರಕಾರದ ನಡೆಯನ್ನು ಖಂಡಿಸಿದೆ.

ರೈತರನ್ನು ತಮ್ಮದೇ ರಾಜಧಾನಿಗೆ ಬಂದು ತಮ್ಮ ಬೇಡಿಕೆಗಳನ್ನು ಮುಂದಿಡದಂತೆ ತಡೆಯಲು ಆಶ್ರುವಾಯು ಪ್ರಯೋಗಿಸುತ್ತದೆ, ಲಾಠಿ ಪ್ರಹಾರ ಮಾಡುತ್ತದೆ, ಕೊರೆಯುವ ಚಳಿಯಲ್ಲಿ ಜಲಫಿರಂಗಿಗಳಿಗೆ ಗುರಿ ಮಾಡುತ್ತದೆ, ರಾಷ್ಟ್ರೀಯ ಹೆದ್ದಾರಿಗಳನ್ನೂ ಅಗೆದು ಹಾಕುತ್ತದೆ, ನಂತರ ರೈತರು ಮಾತುಕತೆ ನಡೆಸುವ ಬದಲು ತಮ್ಮ ಹೋರಾಟವನ್ನು ತೀವ್ರಗೊಳಿಸುತ್ತಿದ್ದಾರೆ ಎಂದು ದೂರುತ್ತದೆ. ಈ ರೀತಿ ತನ್ನದೇ ನಾಗರಿಕರನ್ನು ದೂಷಿಸುವ ಮೂಲಕ ಈ ಸರಕಾರ ಏನನ್ನು ಸಾಧಿಸ ಬಯಸುತ್ತದೆ? ಇದು ವಿದೇಶಿ ಮತ್ತು ದೇಶಿ ಕಾರ್ಪೊರೇಟ್‌ಗಳನ್ನು ಪ್ರೋತ್ಸಾಹಿಸುವ ಈ ಸರಕಾರದ ಯೋಜನೆಯ ಭಾಗವಾಗಿದೆಯೇಎಂದು ರೈತರು ತಿಳಿಯ ಬಯಸುತ್ತಾರೆ ಎಂದು ಎಐಕೆಎಸ್‌ಸಿಸಿ ಹೇಳಿದೆ.

ಸಿಖ್ ಸಮುದಾಯದೊಂದಿಗೆ ವಿಶೇಷ ಸಂಬಂಧ!

"ಪ್ರಧಾನ ಮಂತ್ರಿ ಮೋದಿ ಮತ್ತು ಸಿಖ್‌ರೊಂದಿಗೆ ಅವರ ಸರಕಾರದ ವಿಶೇಷ ಸಂಬಂಧ"ದಲ್ಲಿ ಸಿಖ್ ಸಮುದಾಯದ ಒಳಿತಿಗಾಗಿ ಮೋದಿ ಸರಕಾರ ಕೈಗೊಂಡ 13 ಕ್ರಮಗಳ ವಿವರಗಳಿವೆಯಂತೆ. ಅದನ್ನು




ಭಾರತೀಯ ರೈಲ್ವೆಯ ಟಿಕೆಟುಗಳ ಬುಕಿಂಗ್ ಮಾಡುವ, ಪ್ರಯಾಣಿಕರಿಗೆ ಆಹಾರ ಪೂರೈಕೆ ಮಾಡುವ ಐ.ಆರ್.ಸಿ.ಟಿ.ಸಿ. ತನ್ನ ದತ್ತಾಂಶ ಕೋಶದಲ್ಲಿ ಇರುವ 1.9 ಕೋಟಿ ಗ್ರಾಹಕರಿಗೆ, **ರೈತರು ಭಾರತ ಬಂದ್‌ನ್ನು ದೇಶಾದ್ಯಂತ ನಡೆಸಿದ ಡಿಸೆಂಬರ್ 8ರಿಂದ** 12ರ ನಡುವೆ ಕಳಿಸಿತಂತೆ. ಇದನ್ನು ಐ.ಆರ್.ಸಿ.ಟಿ.ಸಿ. ಏಕೆ ಕಳಿಸಬೇಕು ಎಂಬ ಪ್ರಶ್ನೆ ಸಹಜವೇ. ಹೌದು, ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಮಾತ್ರವಲ್ಲ ಪಂಜಾಬಿ ಭಾಷೆಯಲ್ಲೂ ಪ್ರಕಟವಾಗಿರುವ ಇದು ಕೃಷಿ ಕಾಯ್ದೆಗಳ ಬಗ್ಗೆ ಜನಗಳಲ್ಲಿ, ಅದೂ ಸಿಖ್ ಸಮುದಾಯದವರಲ್ಲಿ ಹೆಚ್ಚುತ್ತಿರುವ ಅವಿಶ್ವಾಸವನ್ನು ನಿವಾರಿಸುವ ಪರೋಕ್ಷ ಪ್ರಯತ್ನವಾಗಿದ್ದರೆ, "ಮೊದಲಿಗೆ ರೈತರು"(ಪುಟ್ಟಿಂಗ್ ಫಾರ್ಮರ್ಸ್ ಫಸ್ಟ್) ನೇರ ಪ್ರಯತ್ನ.

ಬಹಳ ಜಾಸ್ತಿಯಾಗಿತ್ತು ಪ್ರಜಾಪ್ರಭುತ್ವ ! .....ಆದರೆ ಈಗ ಒ.ಕೆ.!

'ನೀತಿ ಆಯೋಗ'ದ ಸಿ.ಇ.ಒ. ಅಮಿತಾಭ್ ಕಾಂತ್ 'ಟೂ ಮಚ್ ಆಫ್ ಎ ಡೆಮಾಕ್ರಸಿ' (ಬಹಳ ಜಾಸ್ತಿಯಾಗಿದೆ ಪ್ರಜಾಪ್ರಭುತ್ವ?) ಟಿಪ್ಪಣಿ ಎಲ್ಲ ಪ್ರಜಾಪ್ರಭುತ್ವವಾದಿಗಳ ಗಮನ ಸೆಳೆದಿದೆ, ಅವರು ಡಿಸೆಂಬರ್ 8ರಂದು "ಆತ್ಮನಿರ್ಭರ ಭಾರತದತ್ತ ದಾರಿ" ಎಂಬ ವಿಷಯದ ಮೇಲೆ ಮಾತಾಡುತ್ತ ಕೊವಿಡ್–19 ಮಹಾಸೋಂಕಿನ ಸನ್ನಿವೇಶ ಭಾರತಕ್ಕೆ ತಯಾರಿಕಾ ವಲಯದಲ್ಲಿ ನೇತೃತ್ವ ವಹಿಸಲು ಅವಕಾಶ ನೀಡಿದೆಯೇ ಎಂಬ ಪ್ರಶ್ನೆಗೆ ಉತ್ತರಿಸುತ್ತ " ಕಠಿಣ ಸುಧಾರಣೆಗಳು ಭಾರತದ ಸಂದರ್ಭದಲ್ಲಿ ಬಹಳ ಕಷ್ಟದಾಯಕ, ನಮ್ಮಲ್ಲಿ ಬಹಳ ಜಾಸ್ತಿ ಪ್ರಜಾಪ್ರಭುತ್ವ .. .. ಮೊದಲ ಬಾರಿಗೆ ಸರಕಾರ ಹಲವು ವಲಯಗಳಲ್ಲಿ.. ..ಗಣಿಗಾರಿಕೆ, ಕಲ್ಲಿದ್ದಲು, ಶ್ರಮ ಮತ್ತು ಕೃಷಿ...ಮುಂತಾದವುಗಳಲ್ಲಿ ಗಟ್ಟಿ ತಲೆಯ ಸುಧಾರಣೆಗಳನ್ನು ಮಾಡುವ ಧೈರ್ಯ ಮತ್ತು ದೃಢ ನಿರ್ಧಾರ ತೋರಿದೆ... ಇವು ಬಹಳ, ಬಹಳ ಕಷ್ಟದ ಸುಧಾರಣೆಗಳು.. ಇವನ್ನು ಮಾಡಲು ಭಾರೀ ಪ್ರಮಾಣದ ರಾಜಕೀಯ ಮತ್ತು ಆಡಳಿತ ಇಚ್ಛಾಶಕ್ತಿ ಬೇಕು" ಎಂದು ಹೇಳಿದರೆಂದು ವರದಿಯಾಯಿತು. ಅದು ರೈತರ ಹೋರಾಟಕ್ಕೆ ಬೆಂಬಲವಾಗಿ 'ಭಾರತ ಬಂದ್'ನಡೆದ ದಿನ.

ಕೊವಿಡ್–19 ಸೋಂಕು ರಭಸದಿಂದ ಹರಡುತ್ತಿದ್ದ ಸಮಯದಲ್ಲೇ ಮೋದಿ ಸರಕಾರ "ಧೈರ್ಯ ಮತ್ತು ದೃಢನಿರ್ಧಾರದಿಂದ" ಪಾಸು ಮಾಡಿಸಿಕೊಂಡ ಮೂರು ಕೃಷಿ ಕಾಯ್ದೆಗಳ ವಿರುದ್ಧ ದಿಲ್ಲಿ ವರೆಗೆ ಬಂದಿದ್ದ ರೈತರನ್ನು ದಿಲ್ಲಿ ಪ್ರವೇಶಿಸದಂತೆ ಮಾಡಿ, ಅವರ ಅಹವಾಲುಗಳನ್ನು ಕೇಳಲೂ ನಿರಾಕರಿಸಿದ "ಆಡಳಿತಾತ್ಮಕ ಇಚ್ಛಾಶಕ್ತಿಗೇ ರೈತರು ಸವಾಲು ಹಾಕಿದ್ದ ಸಂದರ್ಭ. ಅಮಿತಾಭ್ ಕಾಂತ್ ಅವರು ನಂತರ ಒಂದು ಲೇಖನ ಬರೆದು 'ನಾನು ಆ ಅರ್ಥದಲ್ಲಿ ಹೇಳಿದ್ದಲ್ಲ' ಎಂದು 'ಸ್ಪಷ್ಟೀಕರಣ' ನೀಡಿದರು. ಇದನ್ನು ಜನಗಳು ಗಮನಿಸುವಷ್ಟರಲ್ಲಿ ಸಂಸತ್ತಿನ ಚಳಿಗಾಲದ ಅಧಿವೇಶನ ನಡೆಯುವುದಿಲ್ಲ ಎಂಬ ಸುದ್ದಿ ಬಂದಿದೆ– ಕಾರಣ ಕೊವಿಡ್!

ಇದು ದೇಶದ ಸರ್ವೋಚ್ಚ ಮುಖಂಡರಿಂದ ಅವರ ಹೇಳಿಕೆಗೆ ಸಿಕ್ಕ 'ಗಟ್ಟಿತಲೆಯ' ಅನುಮೋದನೆಯೇ?



ವ್ಯಂಗ್ಯಚಿತ್ರ: ಅಲೋಕ್ ನಿರಂತರ್

35 ಲಕ್ಷ ಉದ್ಯೋಗ ನಷ್ಟ, 95ಶೇ. ಕುಟುಂಬಗಳ ಆದಾಯ ಕುಸಿತ, ಆದರೂ ದೇಶದ ಅರ್ಥವ್ಯವಸ್ಥೆ ವೇಗವಾಗಿ ಚೇತರಿಸಿಕೊಳ್ಳುತ್ತಿದೆಯಂತೆ!

ಭಾರತದ ಆರ್ಥಿಕ ಸೂಚಕಗಳು ಈಗ ಬಹಳಷ್ಟು ಉತ್ತೇಜನಕಾರಿಯಾಗಿವೆ, ಅರ್ಥವ್ಯವಸ್ಥೆ ನಿರೀಕ್ಷಿತ ದರಕ್ಕಿಂತ ವೇಗವಾಗಿ ಚೇತರಿಸಿಕೊಳ್ಳುತ್ತಿದೆ ಎಂದು ದೊಡ್ಡ ಉದ್ಯಮಿಗಳ ಸಂಘಟನೆ ಎಫ್.ಐ.ಸಿ.ಸಿ.ಐ. (ಫಿಕಿ)ಯ ವಾರ್ಷಿಕ ಅಧಿವೇಶನವನ್ನು ಉದ್ದೇಶಿಸಿ ಮಾತಾಡುತ್ತ ಪ್ರಧಾನ ಮಂತ್ರಿಗಳು ಹೇಳಿದ್ದಾರೆ.

ಆದರೆ ಇದುವರೆಗೆ ಪ್ರಕಟವಾಗಿರುವ ಅಂಕಿ–ಅಂಶಗಳು ಬೇರೆಯ ಚಿತ್ರವನ್ನೇ ಕೊಡುತ್ತಿವೆ. ಪ್ರಸಕ್ತ ಎರಡನೇ ತ್ರೈಮಾಸಿಕದ ಜಿಡಿಪಿ ಯಲ್ಲಿ ಚೇತರಿಕೆಯ ಸಂಕೇತ ನಿಜವಾಗಿಯ ಚೇತರಿಕೆಯನ್ನೇನೂ ಸೂಚಿಸುತ್ತಿಲ್ಲ ಎಂಬುದನ್ನು ಈ ಹಿಂದೆ ನೋಡಿದ್ದೇವೆ. ಈಗ ಸಿಎಂಐಇ ತನ್ನ ಸರ್ವೆಯ ಆಧಾರದಲ್ಲಿ ಪ್ರಕಟಿಸಿರುವ ಉದ್ಯೋಗ/ನಿರುದ್ಯೋಗಅಂಕಿ–ಅಂಶಗಳು ಇದನ್ನು ಸಮರ್ಥಿಸುವಂತೆ ಕಾಣುತ್ತದೆ.

ಅಕ್ಟೋಬರ್‌ನಲ್ಲಿ ಉದ್ಯೋಗದಲ್ಲಿದ್ದವರ ಸಂಖ್ಯೆಯಲ್ಲಿ 0.1ಶೇ. ಇಳಿಕೆಯಾಗಿದ್ದರೆ, ನವಂಬರ್‌ನಲ್ಲಿ 0.3ಶೇ. ಇಳಿಕೆಯಾಗಿದೆ, ಅಂದರೆ 35ಲಕ್ಷದಷ್ಟು ಇಳಿದಿದೆ ಎಂದು ಡಿಸೆಂಬರ್ 10ರಂದು ಸಿಎಂಐಇ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳುತ್ತವೆ. ಉದ್ಯೋಗಗಳ ಸಂಖ್ಯೆ ಇನ್ನೂ ಕೊವಿಡ್–ಪೂರ್ವ ಸ್ಥಿತಿಗೆ ಮರಳಿಲ್ಲ. ಮಾರ್ಚ್ 2020ರಲ್ಲಿ ಲಾಕ್ಡೌನಿನಿಂದ ಇಳಿಯಲಾರಂಭಿಸಿದ್ದ ಇದು ನಂತರ ಸ್ವಲ್ಪ ಚೇತರಿಕೆ ಕಂಡರೂ ಜುಲೈನಿಂದ ಮೂರು ತಿಂಗಳು ಸತತ ಇಳಿಕೆ ತೋರಿಸಿತ್ತು. ಅಕ್ಟೋಬರ್‌ನಲ್ಲಿ ತುಸು ಚೇತರಿಕೆ ಕಂಡಿತ್ತು, ಈಗ ಈ ಚೇತರಿಕೆಯ ಘಟ್ಟ ಮುಗಿದಿರುವಂತೆ ಕಾಣುತ್ತದೆ ಎಂದು ಸಿಎಂಐಇ ನ ಸಿಇಒ ಮಹೇಶ ವ್ಯಾಸ್ ಹೇಳಿದ್ದಾರೆ.

ವಿಶಿಷ್ಟ ಸಂಗತಿಯೆಂದರೆ ನಿರುದ್ಯೋಗಿಗಳ ಸಂಖ್ಯೆಯೂ ಇಳಿಯುತ್ತಿದೆ. ಎಪ್ರಿಲ್–ಮೇನಲ್ಲಿ ಇದು 8.7 ಕೋಟಿಗೇರಿತ್ತು. ನಂತರ ಆಗಸ್ಟ್, ಸಪ್ಟಂಬರ್ ಮತ್ತು ನವಂಬರ್‌ನಲ್ಲಿ ಅನುಕ್ರಮವಾಗಿ 3.57 ಕೋಟಿ, 2.84 ಕೋಟಿ ಮತ್ತು 2.74 ಕೋಟಿಗೆ ಇಳಿಯಿತು.

ಈ ವೈಪರೀತ್ಯಕ್ಕೆ ಕಾರಣ ಉದ್ಯೋಗಗಳು ಸತತವಾಗಿ ಕಡಿಮೆಯಾಗುತ್ತಿರುವುದರಿಂದ, ಜತೆಗೆ ಸಂಬಳಗಳೂ ಕಡಿಮೆಯಗುತ್ತಿರುವುದರಿಂದ ಉದ್ಯೋಗದ ಹುಡುಕಾಟವನ್ನೇ ನಿಲ್ಲಿಸಿ ಬಿಟ್ಟಿರುವವರ ಸಂಖ್ಯೆ ಏರಿರುವುದನ್ನು ಇದನ್ನು ತೋರಿಸುತ್ತದೆ ಎಂದು ಪರಿಣಿತರು ಹೇಳುತ್ತಾರೆ. ಇದು ದೇಶದ ಅರ್ಥವ್ಯವಸ್ಥೆಗೆ ಉತ್ತೇಜನಕಾರಿ ಅಂಶವೇನೂ ಅಲ್ಲ.

95ಶೇ. ಕುಟುಂಬಗಳ ನಿಜವಾದ ಆದಾಯ ಇಳಿದಿದೆಯೆಂದು ಮತ್ತೊಂದು ಅಂಕಿ–ಅಂಶ ಹೇಳುತ್ತದೆ.

ಡಿಸೆಂಬರ್ 13 ರಂದು ಸಿಎಂಐಇ ಪ್ರಕಟಿಸಿದ ಮತ್ತೊಂದು ಸರ್ವೆಯಿಂದ ಪಡೆದ ದತ್ತಾಂಶದ ಪ್ರಕಾರ, ಮೇ ತಿಂಗಳ ನಂತರ ಮೊದಲ ಬಾರಿಗೆ ಬಳಕೆದಾರರ ಭಾವನೆಗಳ ಸೂಚ್ಯಂಕ ಇಳಿದಿದೆ. ಅಕ್ಟೋಬರ್‌ನಲ್ಲಿ ಅದು 52.5 ಇತ್ತು, ನವಂಬರ್‌ನಲ್ಲಿ 51.8ಕ್ಕೆ ಇಳಿದಿದೆ. ಬಳಕೆದಾರರು ಖರೀದಿಗೆ ಹಿಂಜರಿಯುತ್ತಿದ್ದಾರೆ, ಅಂದರೆ ಮಾರುಕಟ್ಟೆಯಲ್ಲಿ ಹಬ್ಬಗಳ ಸಮಯದಲ್ಲಿ ತುಸು ಚೇತರಿಸಿಕೊಂಡ ಬೇಡಿಕೆಯ ಪ್ರಮಾಣ ಈಗ ಮತ್ತೆ ಕುಸಿಯುತ್ತಿದೆ.

ನವಂಬರ್ ತಿಂಗಳಲ್ಲಿ ಕುಟುಂಬಗಳ ಆದಾಯಗಳಲ್ಲಿಯೂ, ಮೇಲೆ ಹೇಳಿದಂತೆ, ಉದ್ಯೋಗಗಳ ಸಂಖ್ಯೆಯಲ್ಲೂ ಇಳಿಕೆಯಾಗಿದೆ. ಇದು ಹೊಸ ಖರೀದಿಗಳಿಗೆ ಜನಗಳು ಹಿಂಜರಿಯುವಂತೆ ಮಾಡಿದೆ. ಒಟ್ಟಿನಲ್ಲಿ ಸರಾಸರಿ ಕುಟುಂಬಗಳ ಪರಿಸ್ಥಿತಿ ಹದಗೆಟ್ಟಿದೆ ಎಂದು ಮಹೇಶ ವ್ಯಾಸ್ ಹೇಳುತ್ತಾರೆ.

ಲಾಕ್‌ಡೌನಿನ ಮೊದಲು ಫೆಬ್ರುವರಿ 2020ರಲ್ಲಿ ಸಿಎಂಐಇ ಸರ್ವೆ ಮಾಡಿದ ಕುಟುಂಬಗಳಲ್ಲಿ 27.2ಶೇ. ಮಂದಿ ಇದೀಗ ಬಾಳಿಕೆಯ ವಸ್ತುಗಳನ್ನು ಕೊಳ್ಳುವ ಒಳ್ಳೆಯ ಸಮಯ ಎಂದಿದ್ದರು. ಇದು ಲಾಕ್‌ಡೌನ್ ಹಾಕಿದ ಸ್ವಲ್ಪ ಸಮಯದಲ್ಲೇ ಮಾರ್ಚ್‌ನಲ್ಲಿ 22.3ಶೇ. ಕ್ಕೆ ಇಳಿಯಿತು. ಎಪ್ರಿಲ್‌ನಲ್ಲಿ ಒಮ್ಮೆಲೇ 21.ಶೇ.ಕ್ಕೆ, ಮೇನಲ್ಲಿ 1.3ಶೇ.ಕ್ಕೆ ಕುಸಿಯಿತು. ನಂತರ ಕ್ರಮೇಣ ಏರುತ್ತ ಬಂದು ಅಕ್ಟೋಬರ್‌ನಲ್ಲಿ ಇದು 7.4ಶೇ. ತಲುಪಿತು. ಈಗ ನವಂಬರಿನಲ್ಲಿ 6.5ಶೇ.ಕ್ಕೆ ಇಳಿದಿದೆ.

ಇಂತಹ ಸಮಯದಲ್ಲೇ ಪೆಟ್ರೋಲ್–ಡೀಸೆಲ್ ಬೆಲೆಗಳು ಒಂದು ವಾರ ಸತತವಾಗಿ ಏರಿವೆ. ಅಡುಗೆ ಅನಿಲದ ಬೆಲೆ ಕಳೆದ ಒಂದು ವರ್ಷದಲ್ಲಿ 100ರೂ.ಗಳಷ್ಟು ಏರಿದೆ!



ವ್ಯಂಗ್ಯಚಿತ್ರ: ಪಿ.ಮಹಮ್ಮದ್

ಕೃಷಿಯನ್ನು ಮುಕ್ತ ಮಾರುಕಟ್ಟೆಯ ಆಟಕ್ಕೆ ಬಿಡುವಂತಿಲ್ಲ



ಭಾರತದಂತಹ ಒಂದು ದೊಡ್ಡ ದೇಶವು ತನ್ನ ಆಹಾರಭದ್ರತೆಯನ್ನು ಖಚಿತಪಡಿಸಿಕೊಳ್ಳಬೇಕೆಂದರೆ, ತನ್ನ ಆಹಾರವನ್ನು ತಾನೇ ಬೆಳೆಯಬೇಕಾಗುತ್ತದೆ. ಯಾವ ಬೆಳೆಯನ್ನು ಬೆಳೆಯಬೇಕು ಎಂಬುದನ್ನು, ಭೂಮಿಯನನು ಯಾವುದಕ್ಕೆ ಬಳಸಬೇಕು ಎಂಬುದನ್ನು ಮುಕ್ತ ಮಾರುಕಟ್ಟೆಯ ನಿರ್ಧಾರಕ್ಕೆ ಬಿಡಲಾಗದು. ಇದನ್ನು ನಿರ್ಧರಿಸುವಲ್ಲಿ ಸರ್ಕಾರದ ಮಧ್ಯಸ್ಥಿಕೆ ಇರಬೇಕೆಂದು ಸಾಮಾಜಿಕ ವಿವೇಚನೆ ಬಯಸುತ್ತದೆ. ಜನರಿಗೆ ಅನ್ನ ದೊರಕಿಸುವ ಸಾಮಾಜಿಕ ಜವಾಬ್ದಾರಿಗೆ ಹತ್ತಿರವಾದ ಮತ್ತು ಮಾರುಕಟ್ಟೆಯ ಏರಿಳಿತದ ಬೆಲೆಗಳಿಗಿಂತ ಒಂದು ಭಿನ್ನವಾದ ಫಲಿತಾಂಶವನ್ನು ಸಾಧಿಸಲು, ಅನೇಕ ಪ್ರಯತ್ನಗಳ ನಂತರ, ಭಾರತದಲ್ಲಿ ರೈತರ ಫಸಲಿಗೆ ಕನಿಷ್ಠ ಬೆಂಬಲ ಬೆಲೆ, ಆ ಧಾನ್ಯಗಳನ್ನು ಸರ್ಕಾರವು ಖರೀದಿಸುವ ಬೆಲೆ ಮತ್ತು ಖರೀದಿಸಿದ ಧಾನ್ಯಗಳನ್ನು ಸಬ್ಸಿಡಿ ದರದಲ್ಲಿ ವಿತರಿಸುವ ಪಡಿತರ ವ್ಯವಸ್ಥೆ– ಈ ಏರ್ಪಾಟು ಮೂಡಿ ಬಂದಿತ್ತು. ಈಗ ಈ ಏರ್ಪಾಟನ್ನು ಮೋದಿ ಸರಕಾರದ ಕೃಷಿ ಕಾಯ್ದೆಗಳು ನಾಶ ಪಡಿಸಲು ಹೊರಟಿವೆ–ಕಾರ್ಪೊರೇಟ್‌ಗಳು ಮತ್ತು ಸಾಮ್ರಾಜ್ಯಶಾಹಿಗಳ ಆಣತಿಯಂತೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು:ಕೆ.ಎಂ.ನಾಗರಾಜ್

ಮೋದಿ ಸರ್ಕಾರವು ಇತ್ತೀಚೆಗೆ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳನ್ನು ರದ್ದು ಮಾಡುವಂತೆ ಆಗ್ರಹಿಸಿ ದೇಶಾದ್ಯಂತ ನಡೆಯುತ್ತಿರುವ ರೈತ ಚಳುವಳಿಯ ಸಂದರ್ಭದಲ್ಲಿ, ಕೆಲವು ವ್ಯಾಖ್ಯಾನಕಾರರು ಒಂದು ಪ್ರಶ್ನೆಯನ್ನು ಕೇಳುತ್ತಾರೆ: ಕೃಷಿಯು ಮುಕ್ತ ಮಾರುಕಟ್ಟೆಯ ಚೌಕಟ್ಟಿನೊಳಗೆ ಏಕೆ ಕಾರ್ಯನಿರ್ವಹಿಸಬಾರದು? ಈ ಪ್ರಶ್ನೆಗೆ ಉತ್ತರವಾಗಿ ಎಲ್ಲರೂ ಬಲ್ಲ ಉತ್ತರವನ್ನೇ ಇಲ್ಲಿ ಪುನರಾವಲೋಕಿಸುವುದೇ ಸೂಕ್ತವೆನಿಸುತ್ತದೆ.

ಅರ್ಥವ್ಯವಸ್ಥೆಯ ಒಟ್ಟು ಹಿತ–ದೃಷ್ಟಿಯಿಂದ ನೋಡಿದಾಗ, ಮುಕ್ತ ಮಾರುಕಟ್ಟೆಯ ರೀತಿ–ನೀತಿಗಳನ್ನು ಅನುಸರಿಸಿದಾಗ ದೊರೆಯುವ ಫಲಿತಾಂಶಗಳು ಅಷ್ಟೇನೂ ತೃಪ್ತಿಕರವಾಗಿರುವುದಿಲ್ಲ ಎಂಬ ಅಂಶವನ್ನು ಅರ್ಥಶಾಸ್ತ್ರಜ್ಞ ಕೀನ್ಸ್ ಅದಾಗಲೇ ಹೇಳಿಯಾಗಿದೆ. ಸದ್ಯಕ್ಕೆ ಕೀನ್ಸ್ ವಾದವನ್ನು ಪಕ್ಕಕ್ಕೆ ಇಟ್ಟು, ಕೃಷಿ ವಲಯಕ್ಕೆ ಸಂಬಂಧಿಸಿದಂತೆ ಮುಕ್ತ ಮಾರುಕಟ್ಟೆಯ ಬಗ್ಗೆ ಹೇಳುವುದಾದರೆ, ಎರಡು ವಿಭಿನ್ನ ಕಾರಣಗಳಿಗಾಗಿ, ಮುಕ್ತ ಮಾರುಕಟ್ಟೆಯಿಂದ ದೊರೆಯುವ ಫಲಿತಾಂಶಗಳು ಅಷ್ಟೇನೂ ತೃಪ್ತಿಕರವಾಗಿರುವುದಿಲ್ಲ. ಮುಕ್ತ ಮಾರುಕಟ್ಟೆಯಲ್ಲಿ ಕೃಷಿ ಉತ್ಪಾದನೆಗಳಿಗೆ ದೊರೆಯುವ ಬೆಲೆಗಳು, ಸಾಮಾಜಿಕವಾಗಿ ತೃಪ್ತಿಕರವಾಗಿರುವುದರ ಬದಲು, ಸಾಮಾಜಿಕವಾಗಿ ಹಾನಿಕಾರಕವಾಗುತ್ತವೆ. ಮತ್ತು, ಕೃಷಿ ವಲಯವು ಒಂದು ವೇಳೆ ಮುಕ್ತ ಮಾರುಕಟ್ಟೆಯ ರೀತಿ–ನೀತಿಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸಿದಲ್ಲಿ, ವಿವಿಧ ಕೃಷಿ ವಸ್ತುಗಳ ಪ್ರಮಾಣಗಳು, ಸಾಮಾಜಿಕವಾಗಿ ಹಾನಿಕಾರಕವಾಗುತ್ತವೆ. ಇದೇ ಅಂಶವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅದರ ಫಲಿತಾಂಶವಾಗಿ ಆಗುವ ಭೂಮಿಯ ಬಳಕೆಯು ಕೂಡ ಸಾಮಾಜಿಕವಾಗಿ ಹಾನಿಕಾರಕವಾಗಬಹುದು.

ಕೃಷಿ ಉತ್ಪನ್ನಗಳ ಬೆಲೆಗಳು ಮತ್ತು ಕೃಷಿ ಉತ್ಪಾದನೆಯ ಒಟ್ಟು ಪ್ರಮಾಣ (ಭೂ–ಬಳಕೆ), ಈ ಎರಡು ವಿಷಯಗಳನ್ನು ಸ್ಪಷ್ಟತೆಯ ಸಲುವಾಗಿ ಪ್ರತ್ಯೇಕವಾಗಿ ವಿಶ್ಲೇಷಿಸಿ ನೋಡೋಣ. ಮೊದಲಿಗೆ, ಬೆಲೆಗಳ ವಿಷಯ ನೋಡೋಣ. ಲಭ್ಯವಿರುವ ಭೂಮಿಯಲ್ಲಿ ಬರೀ ಆಹಾರ ಧಾನ್ಯಗಳನ್ನಷ್ಟೇ ಉತ್ಪಾದಿಸಲಾಗುತ್ತದೆ ಎಂದು ಭಾವಿಸೋಣ. ಈಗ, ಆಹಾರ ಧಾನ್ಯಗಳ ಮೇಲಿನ ಬೇಡಿಕೆಯು ಧಾನ್ಯಗಳ ಬೆಲೆಗೆ ಹೊಂದಿಕೊಂಡಿಲ್ಲ (price-inelastic). ಆದರೆ, ಧಾನ್ಯಗಳ ಉತ್ಪಾದನೆಯ ಪ್ರಮಾಣವು ಹವಾಮಾನದ ವೈಪರೀತ್ಯಗಳ ಕಾರಣದಿಂದಾಗಿ ಭಾರೀ ಏರಿಳಿತಗಳಿಗೆ ಒಳಗಾಗುತ್ತದೆ. ಈ ಏರಿಳಿತಗಳ ಅಂಶವು ಎಲ್ಲಾ ಕೃಷಿ ಉತ್ಪನ್ನಗಳಿಗೂ ಅನ್ವಯಿಸುತ್ತದೆ. ಆದ್ದರಿಂದ, ಧಾನ್ಯಗಳ ಬೆಲೆಗಳು ಭಾರೀ ಏರಿಳಿತಗಳಿಗೆ ಒಳಗಾಗುತ್ತವೆ. ಧಾನ್ಯಗಳ ಬೆಲೆಗಳು ತೀರಾ ಕೆಳಮಟ್ಟಕ್ಕೆ ಇಳಿದರೆ ರೈತರು ಸಾಲಕ್ಕೆ ಸಿಲುಕಿಕೊಳ್ಳುತ್ತಾರೆ. ಬೆಲೆಗಳು ವಿಪರೀತವಾಗಿ ಏರಿದರೆ ಅನೇಕ ಮಂದಿ ಬಡಪಾಯಿಗಳು ಧಾನ್ಯಗಳನ್ನು ಕೊಳ್ಳಲಾಗುವುದಿಲ್ಲ. ಹಾಗಾಗಿ, ಆಹಾರ ಧಾನ್ಯಗಳಂತಹ ಸರಕುಗಳ ವಿಷಯದಲ್ಲಿ ಬೆಲೆಗಳ ಮಟ್ಟವು ವಿನಾಶಕಾರಿಯಾಗಿ ಪರಿಣಮಿಸಬಹುದು.

ಬೆಲೆ ಏರಿಳಿತಗಳ ಎರಡು ಅತಿರೇಕದ ಉದಾಹರಣೆಗಳೆಂದರೆ, ಅಪಾರ ಸಾಲಗಳಿಂದ ರೈತರನ್ನು ತತ್ತರಿಸುವಂತೆ ಮಾಡಿದ 1930ರ ಮಹಾ ಕುಸಿತದ ಅವಧಿಯ ಬೆಲೆ ಕುಸಿತ ಮತ್ತು ಮೂವತ್ತು ಲಕ್ಷ ಜನರನ್ನು ಬಲಿ ತೆಗೆದುಕೊಂಡ 1943ರ ಬಂಗಾಳದ ಭೀಕರ ಬರಗಾಲ. ಈ ಎರಡೂ ಘಟನೆಗಳು, ಬಂಪರ್ ಫಸಲು ಅಥವಾ ಬೆಳೆ ವೈಫಲ್ಯದಿಂದ (ಪೂರೈಕೆ–ಬದಿಯ ಆಘಾತದಿಂದ) ಉಂಟಾಗಲಿಲ್ಲ. ಅವುಗಳನ್ನು ನೆನಪಿಗೆ ತಂದ ಉದ್ದೇಶವೆಂದರೆ, ಆಹಾರ ಧಾನ್ಯಗಳ ಬೆಲೆ ಏರಿಳಿತಗಳು ಎಂತಹ ಅನಾಹುತಗಳನ್ನು ಉಂಟುಮಾಡಬಲ್ಲವು ಎಂಬುದಷ್ಟೇ. ಪ್ರಾಸಂಗಿಕವಾಗಿ ಹೇಳುವುದಾದರೆ, 1930ರ ದಶಕದ ಬೆಲೆ ಇಳಿಕೆಯ ಅವಧಿಯಲ್ಲಿ ಆಹಾರ ಧಾನ್ಯಗಳ ಬಳಕೆದಾರರಿಗೂ ಲಾಭವಾಗಲಿಲ್ಲ ಮತ್ತು ಬಂಗಾಳದ ಬರಗಾಲದ ಸಂದರ್ಭದ ಬೆಲೆಗಳು ಏರಿದ ಕಾರಣದಿಂದ ಆಹಾರ ಉತ್ಪಾದಕರಿಗೂ ಲಾಭವಾಗಲಿಲ್ಲ. ಸರಳವಾಗಿ ಹೇಳುವುದಾದರೆ, ಅವು ನಿಸ್ಸಂದಿಗ್ಧ ಸಾಮಾಜಿಕ ದುರಂತಗಳೇ.


ಇಂತಹ ದುರಂತಗಳು ಉಂಟಾಗುವ ಸಾಧ್ಯತೆಗಳೂ ಇರುತ್ತವೆ ಎಂಬುದನ್ನು ಮುಕ್ತ ಮಾರುಕಟ್ಟೆಯ ಕಾರ್ಯವಿಧಾನದ ಬಗ್ಗೆ ಪ್ರತಿಪಾದಿಸುವ ಮುಖ್ಯಧಾರೆಯ ಸಿದ್ಧಾಂತವು ಮುಂಗಾಣಲಿಲ್ಲ. ಒಂದು ಅರ್ಥಪೂರ್ಣ ಮುಕ್ತ ಮಾರುಕಟ್ಟೆಯ ಸಮತೋಲನದಲ್ಲಿ ಎಲ್ಲಾ ಸರಕುಗಳೂ "ಪರ್ಯಾಯ"ವಾಗಿರುತ್ತವೆ ಎಂದು ಈ ಸಿದ್ಧಾಂತವು ಭಾವಿಸುತ್ತದೆ. ಅಂದರೆ, ಎಲ್ಲಾ ಸರಕುಗಳ ಬೆಲೆಗಳಲ್ಲಿ ಯಾವುದೇ ಬದಲಾವಣೆ ಇಲ್ಲದಿದ್ದಾಗ ಯಾವುದೇ ಒಂದು ಸರಕಿನ ಬೆಲೆಯು ಏರಿದಾಗ, ಉಳಿದ ಎಲ್ಲಾ ಸರಕುಗಳಿಗೆ ಬೇಡಿಕೆ ಏರುತ್ತದೆ ಅಥವಾ ಬದಲಾಗದೆ ಉಳಿಯುತ್ತದೆ ಎಂಬುದಾಗಿ ಈ ಸಿದ್ಧಾಂತವು ಭಾವಿಸುತ್ತದೆ. ಈ ಊಹೆಯು, ಆಹಾರ ಧಾನ್ಯಗಳಂತಹ ಸರಕುಗಳೂ ಇವೆ ಎಂಬುದನ್ನೇ ತಳ್ಳಿಹಾಕುತ್ತದೆ. ಆಹಾರ ಧಾನ್ಯಗಳ ಬೆಲೆ ಏರಿಕೆಯು ಇತರ ಸರಕುಗಳ ಮೇಲಿನ ಬೇಡಿಕೆಯನ್ನು ಕಡಿಮೆ ಮಾಡುತ್ತದೆ, ಏಕೆಂದರೆ, ಜನರು ಆಹಾರ ಧಾನ್ಯಗಳನ್ನು ಖರೀದಿಸಲು ತಮ್ಮ ಇತರ ಖರೀದಿಗಳನ್ನು ಕಡಿಮೆ ಮಾಡಿಕೊಳ್ಳುತ್ತಾರೆ. ಅದು ಅನಿವಾರ್ಯವೂ ಆಗುತ್ತದೆ. ಆದ್ದರಿಂದ, ಬೇರೆ ಸರಕುಗಳು ಆಹಾರ ಧಾನ್ಯಗಳಿಗೆ ಪರ್ಯಾಯವಾಗುವುದಿಲ್ಲ ಎಂಬುದು ವಾಸ್ತವ. ಆದರೂ ಸಹ, ಒಂದು ಅರ್ಥಪೂರ್ಣ ಮುಕ್ತ ಮಾರುಕಟ್ಟೆಯ ಸಮತೋಲನದಲ್ಲಿ ಎಲ್ಲಾ ಸರಕುಗಳೂ "ಪರ್ಯಾಯ"ವಾಗಿರುತ್ತವೆ ಎಂಬುದಾಗಿ ಮುಖ್ಯಧಾರೆಯ ಸಿದ್ಧಾಂತವು ಭಾವಿಸುತ್ತದೆ.

ಆದ್ದರಿಂದ, ಆಹಾರ ಧಾನ್ಯಗಳ ಬೆಲೆಗಳು ಅತಿಯಾಗಿ ಏರದಂತೆ ಅಥವಾ ಇಳಿಯದಂತೆ ನೋಡಿಕೊಳ್ಳುವುದು ಅವಶ್ಯವಾಗುತ್ತದೆ. ಅಂದರೆ, ಸರ್ಕಾರದ ಮಧ್ಯಸ್ಥಿಕೆಯು ಮುಕ್ತ ಮಾರುಕಟ್ಟೆಯು ತನ್ನ ಸಮತೋಲನವನ್ನು ಕಾಪಾಡಿಕೊಳ್ಳಲು ಅವಕಾಶ ನೀಡುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಅಗತ್ಯವಾಗುತ್ತದೆ. ಆದ್ದರಿಂದ, ಮಧ್ಯಸ್ಥಿಕೆಯ ಆಳ್ವಿಕೆಗಿಂತ ಮುಕ್ತ ಮಾರುಕಟ್ಟೆಗಳು ಮೇಲುಗೈ ಸಾಧಿಸಬೇಕೆಂಬ ಕೆಲವು ವ್ಯಾಖ್ಯಾನಕಾರರ ವಾದವು ಸಂಪೂರ್ಣವಾಗಿ ಅಸಿಂಧುವಾಗುತ್ತದೆ.

ಈಗ ನಾವು ಮುಕ್ತ ಮಾರುಕಟ್ಟೆಯ ಕೃಷಿ ಉತ್ಪಾದನೆಗಳ ಒಟ್ಟು ಪ್ರಮಾಣ, ಅಂದರೆ, ಭೂ–ಬಳಕೆಯ ಪ್ರಮಾಣದ ಕಡೆಗೆ ಹೋಗೋಣ. ಒಂದು ಮುಕ್ತ ಮಾರುಕಟ್ಟೆ ವ್ಯವಸ್ಥೆಯಲ್ಲಿ ಯಾವುದೇ ಒಂದು ದುರ್ಲಭ ಸಂಪನ್ಮೂಲವನ್ನು ಬಳಸುವ ವಿಧಾನವು ಅದರ ಬಳಕೆದಾರರ ಕೊಳ್ಳುವ ಶಕ್ತಿಯನ್ನು ಅವಲಂಬಿಸಿರುತ್ತದೆ. ಕೃಷಿಯನ್ನು ಮುಕ್ತ ಮಾರುಕಟ್ಟೆಯ ಕಾರ್ಯಾಚರಣೆಗೆ ತೆರೆದಿಟ್ಟಾಗ ಉಂಟಾಗುವ ಒಂದು ಅನಿವಾರ್ಯ ಪರಿಣಾಮವೆಂದರೆ, ಆಹಾರ ಧಾನ್ಯಗಳ ಉತ್ಪಾದನೆಯಿಂದ ದೂರಸರಿದು, ಪಶ್ಚಿಮ ದೇಶಗಳು ಬಯಸುವ ಬೆಳೆ–ಪೈರು–ಪದಾರ್ಥಗಳ ಉತ್ಪಾದನೆಯತ್ತ ಹೊರಳುವುದು ಅಥವಾ ಶ್ರೀಮಂತರ ಖುಶಿಗಾಗಿ ಅವರು ಬಯಸುವ ಉದ್ದೇಶಗಳಿಗೆ ಭೂಮಿಯ ಬಳಕೆ. ಈ ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ವಿದೇಶಗಳ ಮತ್ತು ದೇಶದ ಶ್ರೀಮಂತ ವ್ಯಕ್ತಿಗಳ ಉನ್ನತ ಖರೀದಿ ಸಾಮರ್ಥ್ಯವು ಭೂಮಿಯನ್ನು ಆಹಾರಧಾನ್ಯ ಉತ್ಪಾದನೆಯಿಂದ ಕಸಿದುಕೊಳ್ಳುತ್ತದೆ. ಕೃಷಿ ಉತ್ಪನ್ನಗಳನ್ನು ಮುಂದುವರಿದ ದೇಶಗಳು ಆಮದು ಮಾಡಿಕೊಳ್ಳುವುದರಿಂದಾಗಿ ಆಹಾರ ಧಾನ್ಯಗಳ ಬೆಲೆಗಳು ಏರದಿದ್ದರೂ ಸಹ, ಅದು ಎರಡು ಕೆಲಸಗಳನ್ನು ಖಂಡಿತವಾಗಿಯೂ ಮಾಡುತ್ತದೆ: ಒಂದು, ದೇಶವು ಹಲವು ವರ್ಷಗಳಿಂದ ಸಾಧಿಸಿದ ಆಹಾರ ಧಾನ್ಯಗಳ ಸ್ವಾವಲಂಬನೆಯನ್ನು ನಾಶಪಡಿಸುವುದು ಮತ್ತು ಆ ಮೂಲಕ ದೇಶವನ್ನು ಆಹಾರ–ಆಮದು ಅವಲಂಬಿತವನ್ನಾಗಿ ಮಾಡುವುದು. ಎರಡನೆಯದು, ಬಹು ದೊಡ್ಡ ಸಂಖ್ಯೆಯ ಜನರ ಹಸಿವು ಹೆಚ್ಚಿಸುವುದು. ಇವೆರಡೂ ಬಹು ದೊಡ್ಡ ಸಮಸ್ಯೆಗಳೇ.

ಎರಡನೆಯ ಸಮಸ್ಯೆಯನ್ನು ಮೊದಲು ತೆಗೆದುಕೊಳ್ಳೋಣ. ಆಹಾರ ಧಾನ್ಯಗಳ ಉತ್ಪಾದನೆಗೆ ಬಳಕೆಯಾದ ಒಂದು ಜಮೀನಿನಲ್ಲಿ ಈ ಹಿಂದೆ 10 ಮಂದಿ ಕೆಲಸದಲ್ಲಿ ತೊಡಗಿದ್ದರೆ, ಈಗ ಅದೇ ಜಮೀನಿನಲ್ಲಿ ಹಣ್ಣು–ಹಂಪಲು ಇತ್ಯಾದಿಗಳನ್ನು ಬೆಳೆದರೆ ಅದು ಐದು ಮಂದಿಗೆ ಮಾತ್ರ ಉದ್ಯೋಗ ಒದಗಿಸಬಲ್ಲದು. ಅಂದರೆ, ಜಮೀನನ್ನು ಆಹಾರ ಧಾನ್ಯಗಳ ಬದಲಾಗಿ ಹಣ್ಣು–ಹಂಪಲು ಬೆಳೆಯಲು ಬಳಕೆ ಮಾಡಿದಾಗ ಐದು ಮಂದಿ ಕೆಲಸಗಾರರನ್ನು ನಿರುದ್ಯೋಗಿಗಳನ್ನಾಗಿ ಮಾಡಿದಂತಾಗುತ್ತದೆ. ಈ ಐದು ಮಂದಿಗೆ ಆಹಾರ ಧಾನ್ಯಗಳನ್ನು ಕೊಳ್ಳುವ ಶಕ್ತಿ ಇಲ್ಲವಾಗುತ್ತದೆ. ಹಾಗಾಗಿ, ಅಂತಾರಾಷ್ಟ್ರೀಯ ಬೆಲೆಯಲ್ಲಿ ಅಪಾರ ಪ್ರಮಾಣದ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಂಡರೂ ಸಹ, ಅಷ್ಟು ಆಮದಿಗೆ ಬೇಕಾಗುವಷ್ಟು ವಿದೇಶಿ ವಿನಿಮಯದ ಸಂಗ್ರಹವಿದ್ದರೂ ಸಹ, ಜನರ ಬಳಿ ಆಹಾರ ಧಾನ್ಯಗಳನ್ನು ಕೊಳ್ಳುವ ಶಕ್ತಿ ಇಲ್ಲದ ಕಾರಣದಿಂದ ರಾಶಿ ರಾಶಿ ಜನರ ಹಸಿವು (mass hunger) ಹೆಚ್ಚುತ್ತದೆ.

ಆಹಾರ ಧಾನ್ಯಗಳನ್ನು ಬೆಳೆಯುತ್ತಿದ್ದ ಒಟ್ಟು ಜಮೀನಿನ ಒಂದಷ್ಟು ಭಾಗವನ್ನು ಕಡಿಮೆ ಸಂಖ್ಯೆಯ ಜನರು ಕೆಲಸ ಮಾಡಿದರೆ ಸಾಕಾಗುವಂಥಹ ಬೇರೆ ಬೇರೆ ಬೆಳೆ ತೆಗೆಯಲು ವರ್ಗಾಯಿಸಲಾಗಿದೆ ಎಂಬ ಅಂಶವನ್ನು ಮುಕ್ತ ಮಾರುಕಟ್ಟೆ ವಾದವು ಒಪ್ಪುತ್ತದೆ, ನಿಜ. ಆದರೆ, ಮಹಾನಗರಗಳಲ್ಲಿ ಬೇಡಿಕೆ ಇರುವ ಬೆಳೆಗಳನ್ನು ಬೆಳೆಯಲು ಅಥವಾ ದೇಶದೊಳಗಿನ



ಪುಟ 15 ನೋಡಿ



ಕೋವಿಡ್-19 ಲಸಿಕೆಯ ಸುತ್ತ ಪ್ರಶ್ನೆಗಳ ಹುತ್ತ
ಏಕೆ? ಏನು? ಎಷ್ಟು? ಯಾವಾಗ? ಹೇಗೆ?

ಕೋವಿದ್-19 ಲಸಿಕೆ ಮುಂದಿನ ತಿಂಗಳೇ ಲಭ್ಯವಾಗುತ್ತದೆ ಎಂಬುದು ಸುದ್ದಿಚುಲ್ಲಿದೆ. ಕೋವಿದ್-19 ಕುರಿತು ವಾಸ್ತವಕ್ಕೆ ದೂರವಾದ ಅತಿರಂಜಿತ ನಿಲುವುಗಳನ್ನು ತಾಳಿರುವ ಸರಕಾರ ಮತ್ತು ಮಾಧ್ಯಮಗಳು ಲಸಿಕೆ ಕುರಿತು ಸಹ ಎಲ್ಲ ಸಮಸ್ಯೆಗಳು ಪರಿಹಾರವಾದವು ಎಂಬಂತೆ ವರ್ತಿಸುತ್ತಿವೆ. ಆದರೆ ಲಸಿಕೆಯ ಸುತ್ತ ಪ್ರಶ್ನೆಗಳ ಹುತ್ತವೇ ಇದೆ. ಈ ಕುರಿತು ವಾಸ್ತವವನ್ನು ವಿಶ್ಲೇಷಿಸುವ ಲೇಖನ ಸರಣಿ ಇದು. ಲಸಿಕೆ ಎಂದರೆ ಏನು? ಅದು ಹೇಗೆ ಕೆಲಸ ಮಾಡುತ್ತದೆ? ಕೋವಿದ್ ಲಸಿಕಾ ಕಾರ್ಯಕ್ರಮದ ಸಮಸ್ಯೆಗಳೇನು? ಲಸಿಕೆ ಅಭಿವೃದ್ಧಿಯ ಈಗಿನ ಪರಿಸ್ಥಿತಿ ಏನು? ಭಾರತಕ್ಕೆ ಲಸಿಕೆಯ ಒಟ್ಟು ಅಗತ್ಯ ಎಷ್ಟು? ಲಸಿಕೆಯ ವೆಚ್ಚ ಎಷ್ಟು, ಸಾಗಾಣಿಕೆ ಹೇಗೆ? ಲಸಿಕೆ ಆದ್ಯತೆಯ ಸರಣಿ ಹೇಗಿರಬೇಕು? ಲಸಿಕೆಯನ್ನು ಆದ್ಯತೆಯ ಪ್ರಕಾರ ಹೇಗೆ ತಲುಪಿಸುವುದು? ಲಸಿಕೆ ಕಾರ್ಯಕ್ರಮಕ್ಕೆ ಎಷ್ಟು ಸಿಬ್ಬಂದಿ, ಮೂಲಸೌಕರ್ಯ ಬೇಕು? ಅದನ್ನು ಹೊಂದಿಸುವುದು ಹೇಗೆ? ಈ ಪ್ರಶ್ನೆಗಳಿಗೆ ವಾಸ್ತವ ನೆಲೆಯಲ್ಲಿ ಉತ್ತರ ಕೊಡುವ ಪ್ರಯತ್ನವಿದು. ಹಿಂದಿನ ಹಲವಾರು ರಾಷ್ಟ್ರೀಯ ಲಸಿಕಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅನುಭವವಿರುವ, ಆ ದೃಷ್ಟಿಯಿಂದ ಕೋವಿದ್-19 ಲಸಿಕಾ ಕಾರ್ಯಕ್ರಮದ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ- ಡಾ। ಕೆ. ಸುಶೀಲಾ ಅವರು ಇದನ್ನು ಬರೆದಿದ್ದಾರೆ.


ಭಾಗ-1 ರಲ್ಲಿ ದೇಹ ರಕ್ಷಣಾ ವ್ಯವಸ್ಥೆಯ ಕುರಿತು ತಿಳಿಸಿ, ಅದರ ಆಧಾರದ ಮೇಲೆ ಲಸಿಕೆಯ ವಿಜ್ಞಾನವನ್ನು ಈಗಾಗಲೇ ವಿವರಿಸಿದ್ದಾರೆ.
ಈ ಭಾಗ 2 ರಲ್ಲಿ ಲಸಿಕೆಯ ಅಭಿವೃದ್ಧಿಯ ಪ್ರಸಕ್ತ ಸ್ಥಿತಿ, ಲಸಿಕೆಯ ಒಟ್ಟು ಅಗತ್ಯ ಎಷ್ಟು?, ಸದ್ಯಕ್ಕೆ ಲಭ್ಯವಾಗಬಹುದಾದ ಲಸಿಕೆ ಎಷ್ಟು - ಎಂಬುದರ ಬಗ್ಗೆ ವಿವರಿಸಿದ್ದಾರೆ.
ಈ ಭಾಗ -3 ರಲ್ಲಿ ಲಸಿಕೆಯ ವೆಚ್ಚ, ಸಾಗಾಣಿಕೆ ಹಾಗೂ ಲಸಿಕೆ ಯಾರಿಗೆ, ಯಾವಾಗ, ಹೇಗೆ? ಎಂಬ ಪ್ರಶ್ನೆಗಳಿಗೆ ಉತ್ತರಿಸಲಾಗಿದೆ.

ಡಾ। ಕೆ. ಸುಶೀಲಾ

ಲಸಿಕೆಯ ವೆಚ್ಚ, ಸಾಗಾಣಿಕೆ

ಲಸಿಕಾ ತಯಾರಿಕೆಯ ಹಂತದಲ್ಲಿ ಬರುವ ಎಲ್ಲಾ ಸಮಸ್ಯೆಗಳು ಬಗೆಹರಿದು ಇವರೆಲ್ಲರ ಆಶ್ವಾಸನೆಯ ಮಟ್ಟದಲ್ಲಿ ಲಸಿಕೆ ತಯಾರಾದರೆ ನಮಗೆ 2021 ನೇ ವರ್ಷದ ಕೊನೆಯೊಳಗೆ 135 ಕೋಟಿ ಲಸಿಕೆ ದೊರೆಯಬಹುದು. ಆದರೆ ಇದರಲ್ಲಿ ನಮ್ಮ ದೇಶದ ಪಾಲೆಷ್ಟು? ಆರ್ಧಾಂಶವೆಂದೂ ಭಾವಿಸಿದರೂ 70 ಕೋಟಿ ಲಸಿಕೆ ಲಭ್ಯವಿರಬಹುದು. ಅಂದರೆ 30-35 ಕೋಟಿ ಜನರಿಗೆ ನೀಡಲು ಸಾಧ್ಯವಾಗುವಷ್ಟು. ಇದರಲ್ಲಿ ಸರ್ಕಾರದ ಪಾಲೆಷ್ಟು? ಭಾರತ್ ಬಯೋಟೆಕ್ ಹಾಗೂ ಕ್ಯಾಡಿಲಾಗಳ, ಕೊವಿಶೀಲ್ಡ್‌ನಂತೆ ಅತ್ಯಂತ ಕಡಿಮೆ ಬೆಲೆಗೆ ತಮ್ಮ ಲಸಿಕೆ ಸರ್ಕಾರಕ್ಕೆ ನೀಡುತ್ತದೆಂದು ಭಾವಿಸಿದರೂ, ಇತರ ಸ್ಪುಟ್ನಿಕ್ ವಿ ಯ ಲಸಿಕೆಯೂ ಸೇರಿದರೆ ಲಭ್ಯವಿರುವ ಈ ಲಸಿಕೆಯ ಬೆಲೆ ಹಲವಾರು ಸಾವಿರ ಕೋಟಿಯ ತನಕ ಹೋಗಬಹುದು.

ಈಗ ಲಭ್ಯವಾದ ಲಸಿಕೆಯನ್ನು ದೇಶದ ಎಲ್ಲಾ ರಾಜ್ಯಗಳಿಗೂ ಅಲ್ಲಿಂದ ವಿವಿಧ ಪ್ರದೇಶಗಳಿಗೂ ಹಾಳಾಗದಂತೆ ಸಾಗಿಸುವ ಹಾಗೂ ಸಂಗ್ರಹಿಸಿಡುವ ಕಾರ್ಯಕ್ಕೆ ನಮ್ಮ ದೇಶದ ಸಾಮರ್ಥ್ಯ ಎಷ್ಟಿದೆ? ಪ್ರಸಕ್ತ ಭಾರತ ಸರ್ಕಾರ 6 ಕೋಟಿ ವಿವಿಧ ಜಾತಿಯ ಲಸಿಕೆಯ ಫಲಾನುಭವಿಗಳನ್ನು ತಲುಪಲು ಬೇಕಾದ ಅತ್ಯಂತ ಪ್ರಬಲ ಲಸಿಕಾ 'ವಿತರಣಾ ಜಾಲ' ವನ್ನು ಹೊಂದಿದೆ. ದೇಶದ 'ಸಾರ್ವತ್ರಿಕ ರೋಗನಿರೋಧಕ ಯೋಜನೆ'ಯಲ್ಲಿ (ಯುನಿವರ್ಸಲ್ ಇಮ್ಯುನೈಸೇಶನ್ ಪ್ರೋಗ್ರಾಂ - ಯು.ಐ.ಪಿ) 27 ಸಾವಿರ ಕಾರ್ಯನಿರತ 'ಶೀತ ಸರಪಳಿ' (cold chain) ಸಂಗ್ರಹಣಾ ವ್ಯವಸ್ಥೆ ಹಾಗೂ 76 ಸಾವಿರ 'ಶೀತ ಸರಪಳಿಯ' ಇತರ ಸಲಕರಣೆಗಳನ್ನು ಹೊಂದಿದೆ. ಆದರೆ ವರ್ಷದಲ್ಲಿ 30-35 ಕೋಟಿ ಜನರನ್ನು ತಲಪುವ ಗುರಿ ಪೂರೈಸಲು ಈ ಸೌಲಭ್ಯದಲ್ಲಿ 5 ರಿಂದ 6 ಪಟ್ಟಾದರೂ ಹೆಚ್ಚಳವಾಗುವ ಅವಶ್ಯಕತೆ ಇದೆ.



ಲಸಿಕೆ ಯಾರಿಗೆ, ಯಾವಾಗ, ಹೇಗೆ ?


ಲಸಿಕೆ ಲಭ್ಯವಿರಬಹುದು. ದೇಶದ ವಿವಿಧೆಡೆಗೆ ತಲಪಿರಬಹುದು. ಆದರೆ ಫಲಾನುಭವಿಗಳಿಗೆ ಸಿಗುವುದು ಹೇಗೆ?

ಇನ್ನು 'ಯು.ಐ.ಪಿ.'ಯಲ್ಲಿ ನವಜಾತ ಶಿಶುಗಳಿಂದ ಹಿಡಿದು ವಿವಿಧ ವಯಸ್ಸಿನ ಮಕ್ಕಳು ಹಾಗೂ ಗರ್ಭಿಣಿಯರು ಮಾತ್ರ ಲಸಿಕೆಗೆ ಯೋಗ್ಯರಾಗಿದ್ದರು. ಆದರೆ ಕೋವಿಡ್-19 ತಡೆಗಟ್ಟುವ ಲಸಿಕೆ ಸರ್ವರಿಗೂ ನೀಡಬೇಕಾದ ಲಸಿಕೆ. ಬೇಕಾದಷ್ಟು ಲಸಿಕೆ ಲಭ್ಯವಿಲ್ಲದಾಗ, ಲಭ್ಯವಿದ್ದ ಲಸಿಕೆಯನ್ನು ನೀಡಲು ಸಮಯವಕಾಶ ಬೇಕಾದಾಗ 130 ಕೋಟಿ ಜನರಲ್ಲಿ ಯಾರಿಗೆ ಪ್ರಥಮ ಆದ್ಯತೆ? ಯಾವ ಕಾಯಿಲೆ ಇದೆ ಎನ್ನುವ ಮಾಹಿತಿ ಸಿಗುವುದು ಹೇಗೆ? ಕಾಯಿಲೆಯಿಂದ ಬಳಲಿದವರನ್ನು ಗುರುತಿಸುವುದು ಹೇಗೆ?

ಕೋವಿಡ್-19 ರ ವಿರುದ್ಧ ನಡೆಯುತ್ತಿರುವ ಸಮರದಲ್ಲಿ ಮುಂಚೂಣಿಯಲ್ಲಿರುವ ವೈದ್ಯಕೀಯ ಸೇವೆ ಸಲ್ಲಿಸುವ ಸಿಬ್ಬಂದಿಗಳಿಗೆ, ಕಾನೂನು ಪಾಲಕರಿಗೆ, ಜನಸಾಮಾನ್ಯರ ನಡುವೆ ಕಾರ್ಯ ನಿರ್ವಹಿಸುವ ಇತರ ವೃತ್ತಿ ನಿರತ ಸಿಬ್ಬಂದಿಗಳಿಗೆ ಪ್ರಥಮ ಆದ್ಯತೆ ನೀಡಬೇಕಾದದ್ದು ಅವಶ್ಯಕ. ಆದರೆ ಇಡೀ ದೇಶದಲ್ಲಿ ಇವರ ಸಂಖ್ಯೆ ಬಹಳಷ್ಟು ಇರುವಾದ ಎಲ್ಲರಿಗೂ ಕ್ಷಿಪ್ರವಾಗಿ ಲಸಿಕೆ ನೀಡುವುದು ಅಸಾಧ್ಯ. ಆಗ ಕೋವಿಡ್-19 ರ ನೇರ ಸಂಪರ್ಕಕ್ಕೆ ಬರುವ ಸಿಬ್ಬಂದಿಗಳಿಗೆ, 50 ವರ್ಷ ಮೇಲ್ಪಟ್ಟವರಿಗೆ ದೀರ್ಘಕಾಲಾವಧಿಯ ಇತರ ಕಾಯಿಲೆಯಿಂದ ಬಳಲುವ ಸಿಬ್ಬಂದಿಗಳಿಗೆ ಅವರು ಕಾಯಂ ನೌಕರರಿರಲಿ, ಗುತ್ತಿಗೆಯ ಆಧಾರದಲ್ಲಿ ಕಾರ್ಯ ನಿರ್ವಹಿಸುವವರಿರಲಿ ಆದ್ಯತೆ ನೀಡುವುದು ಅವಶ್ಯಕ. ಆದರೆ ಇದು ನಮ್ಮ ಸಮಾಜದಲ್ಲಿ ಕಾರ್ಯಗತಗೊಳಿಸಲು ಸಾಧ್ಯವೇ?

ಎರಡನೇ ಆದ್ಯತೆ ಜನಸಾಮಾನ್ಯರಲ್ಲಿ ಹಿರಿಯ ನಾಗರಿಕರಿಗೆ. ಅದರಲ್ಲೂ 80 ವರ್ಷ ಮೇಲ್ಪಟ್ಟವರಿಗೆ, ಇತರ ಧೀರ್ಘಕಾಲಿಕ ಕಾಯಿಲೆಯಿಂದ ಬಳಲುವವರಿಗೆ, ನಂತರದ ಆದ್ಯತೆ ಜನಸಾಮಾನ್ಯರಲ್ಲಿ ಧೀರ್ಘಕಾಲಿಕ ಕಾಯಿಲೆಯಿಂದ ಬಳಲುವ ಇತರರಿಗೆ. ದೇಶದ ಸರ್ವನಾಗರಿಕರ ವೈಯುಕ್ತಿಕ ವಿಷಯಗಳಾದ ಲಿಂಗ, ವಯಸ್ಸು, ವೃತ್ತಿ, ಆರ್ಥಿಕ ಸ್ಥಿತಿಗಳ ಮಾಹಿತಿ ಸರ್ಕಾರದ ಹತ್ತಿರವಿದ್ದರೂ ಇವರನ್ನೆಲ್ಲ ಗುರುತಿಸಿ, ವಿಂಗಡಿಸಿ ಆದ್ಯರನ್ನು ಗುರುತಿಸುವ ಕೆಲಸಕ್ಕೆ ಕಾಲಾವಧಿ ಬೇಕು. ಸರ್ಕಾರ ಇದರ ಬಗ್ಗೆ ಯೋಚಿಸುತ್ತಿದೆಯೆ?

ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಚಿಂತಾಜನಕ ಸ್ಥಿತಿಯಲ್ಲಿರುವ ನಮ್ಮ ದೇಶದಲ್ಲಿ ಯಾರು ಧೀರ್ಘಕಾಲಿಕ ಕಾಯಿಲೆಯಿಂದ ಬಳಲುತ್ತಿದ್ದಾರೆಂಬ ಮಾಹಿತಿ ದೊರೆಯಲು ಸಾಧ್ಯವೆ? ಹೀಗಾದರೆ ಈ ಕಾಯಿಲೆಗಳಿಂದ ಬಳಲುತ್ತಿದ್ದಾರೆಂಬ ಗುರುತಿಸುವುದು ಹೇಗೆ? ಹಾಗು ಇವುಗಳಲ್ಲಿ ಯಾವ ಕಾಯಿಲೆಯಿಂದ ಬಳಲುವವರಿಗೆ ಹೆಚ್ಚಿನ ಆದ್ಯತೆ?



ಅದಾಗಲೇ ಕೆಲವು ದಿನಗಳ ಹಿಂದೆ - 'ಬಡವರಿಗೆ ಈ ಲಸಿಕೆ ಉಚಿತವಾಗಿ ನೀಡಲು ಸಾಧ್ಯವಾಗಬಹುದು'- ಎಂದೂ, ಮತ್ತೆರಡು ದಿನದಲ್ಲಿ 'ಸರ್ವರಿಗೂ ಈ ಲಸಿಕೆ ಕಡಿಮೆ ಬೆಲೆಯಲ್ಲಿ ಸಿಗುವಂತೆ ನೋಡಿಕೊಳ್ಳಲಾಗುವುದು' ಎಂದೂ ನಮ್ಮ ಪ್ರಧಾನ ಮಂತ್ರಿಗಳು ಹೇಳಿಕೆ ನೀಡಿದರು.

ಅಂದರೆ ಬಡತನ ರೇಖೆಗಿಂತ ಕೆಳಗಿರುವವರು ಮಾತ್ರ ಈ ಲಸಿಕೆ ಉಚಿತವಾಗಿ ಪಡೆಯುವವರೆ? ಅಥವಾ ಸರ್ವರೂ ಇದನ್ನು ಹಣಕೊಟ್ಟು ಪಡೆಯಬೇಕೆ? ಆದರೇ ಆರ್ಥಿಕವಾಗಿ ಕಂಗೆಟ್ಟಿರುವ ಜನತೆಯಲ್ಲಿ ಎಷ್ಟು ಪ್ರಮಾಣದವರು ಈ ಲಸಿಕೆ ಪಡೆಯಲು ಆಗ ಮುಂಬರುವರು?

ಈಗಿನ ಅನುಭವದಂತೆ ಯಾವುದೇ ರಾಷ್ಟ್ರೀಯ ಯೋಜನೆಯ ಅನುಷ್ಟಾನ ಫಲಪ್ರದವಾಗ ಬೇಕಾದರೆ ಅದನ್ನು ಬಡವ ಬಲ್ಲಿದ ಭೇಧವಿಲ್ಲದೆ ಸರ್ವರಿಗೂ ಉಚಿತವಾಗಿ ನೀಡುವುದು ಅಗತ್ಯ. ಇಲ್ಲವಾದರೆ ಲಸಿಕೆ ಪಡೆಯುವ ಜನರ ಪ್ರಮಾಣ ಈ ಕಾಯಿಲೆಯ ಹತೋಟಿ ಕಾರ್ಯಕ್ರಮಕ್ಕೆ ಬೇಕಾದ ಮಟ್ಟ ತಲಪುವುದು ಸಂಶಯ.

ಯಾವುದೇ ಲಸಿಕೆಯು ಇದರ ಫಲಾನುಭವಿಗಳಿಗೆ ನೀಡುವ ರೋಗನಿರೋಧಕ ಶಕ್ತಿಯ ಕಾಲಾವಧಿಯನ್ನು ನಿಖರವಾಗಿ ಹಲವಾರು ವರ್ಷಗಳೇ ಬೇಕು. ಈಗಿನ ಅಂದಾಜಿನಂತೆ ಕೋವಿಡ್-19 ರ ಲಸಿಕೆ ಈ ಶಕ್ತಿ ಸಾಧಾರಣ 9 ರಿಂದ 12 ತಿಂಗಳು. ಅಂದರೆ ಈ ಕಾಲಾವಧಿಯ ಒಳಗೆ ನಾವು ಈ ಕಾಯಿಲೆಯ ಹತೋಟಿ ಕಾರ್ಯಕ್ಕೆ ಅಗತ್ಯವಾದ ಸಾಧಾರಣ 80-85 ಕೋಟಿ ಜನರಿಗೆ ಲಸಿಕೆಯನ್ನು ನೀಡಲು ಸಾಧ್ಯವೆ? ಈಗಿನ ಅಂದಾಜಿನಂತೆ ಇಷ್ಟು ಜನರಿಗೆ ಲಸಿಕೆ ನೀಡಲು 2 ರಿಂದ 3 ವರ್ಷಗಳಾದರೂ ಬೇಕು. ಆದರೆ ಅದಾಗಲೇ ಲಸಿಕೆ ಪಡೆದ ಬಹಳಷ್ಟು ಜನ ತಮ್ಮಲ್ಲಿ ಈ ಕಾಯಿಲೆಯನ್ನು ತಡೆಗಟ್ಟುವ ಶಕ್ತಿ ಕಳೆದುಕೊಂಡಿರುತ್ತಾರೆ. ಇವರಿಗೆಲ್ಲಾ ಪ್ರತೀ ವರ್ಷ ಲಸಿಕೆ ನೀಡಬೇಕೆ? ಹೌದಾದರೆ ನಮಗೆ ಬೇಕಾಗುವ ಲಸಿಕೆಗಳ ಸಂಖ್ಯೆ ಎಷ್ಟು. ಕಾಯಿಲೆಯ ಹತೋಟಿಗೆ ಬೇಕಾದ ಪ್ರಮಾಣದಲ್ಲಿ ಜನರಿಗೆ ಲಸಿಕೆ ನೀಡುವ ಗುರಿ ಮುಟ್ಟುವುದು ಯಾವಾಗ?

ಮೂರು ಹಂತಗಳ ಲಸಿಕಾ ಪ್ರಯೋಗದಲ್ಲಿ ಇದರಿಂದ ಬರಬಹುದಾದ ತೊಂದರೆಗಳನ್ನು ➚

ಅದಾಗಲೇ ಗುರುತಿಸಲಾಗಿದೆ.

ಇವುಗಳಲ್ಲಿ ಹೆಚ್ಚಿನವುಗಳು ಚಿಕ್ಕ ಪುಟ್ಟ ತೊಂದರೆಗಳು – ಇವುಗಳು ಇಂಜಕ್ಷನ್ ನೀಡಿದ ಜಾಗದಲ್ಲಿ ಸ್ವಲ್ಪ ಊತ, ನೋವು, ಮೈಕೈ ನೋವು, ಸಣ್ಣಜ್ವರ, ನಿಶ್ಶಕ್ತಿ, ತಲೆನೋವು, ಚಳಿ, ಗಂಟುಗಳಲ್ಲಿ ನೋವು ಇವುಗಳಲ್ಲದೆ ಫೈಝರ್ ನ ಲಸಿಕೆ ನೀಡಿದಾಗ, ಒಟ್ಟು ಜನರಲ್ಲಿ ನಾಲ್ವರಿಗೆ ಮುಖದ ಒಂದು ಭಾಗದಲ್ಲಿ ಸ್ನಾಯುಗಳ ನಿಶ್ಶಕ್ತಿ (ಫೇಶಿಯಲ್ ಫಾಲ್ಸಿ) ಕಾಣಿಸಿಕೊಂಡಿತ್ತು. ಆದರೆ ಇದರ ಪ್ರಮಾಣ ಲಸಿಕೆ ಪಡೆಯದ ಇನ್ನೊಂದು ಗುಣವು ಇತರರಲ್ಲಿ ಇರುವ ಪ್ರಮಾಣದಲ್ಲೇ ಇದ್ದು, ಈ ಸಮಸ್ಯೆಗೂ ಲಸಿಕೆಗೂ ಸಂಬಂಧವಿಲ್ಲವೆನ್ನುವುದು ತಿಳಿಯಿತು. ಆದರೆ 24 ಜನರಲ್ಲಿ ದೇಹದ ದುಗ್ಧಗ್ರಂಥಿ (ಲಿಂಫ್ ನೋಡ್ಸ್)ಗಳಲ್ಲಿ ಊತಕಾಣಿಸಿಕೊಂಡಿತ್ತು. ಇದು ಲಸಿಕೆ ಪಡೆಯದ ಅದೇ ಸಂಖ್ಯೆಯ ಇನ್ನೊಂದು ಗುಂಪಿನಲ್ಲಿ ಬರೇ 6 ಜನರಲ್ಲಿ ಕಾಣಿಸಿಕೊಂಡಿತ್ತು. ಲಸಿಕೆ ಈ ತೊಂದರೆಗೆ ಕಾರಣವಾದರೂ ಇದು ಯಾವುದೇ ಗಂಭೀರ ತೊಂದರೆ ಆಗಿರಲಿಲ್ಲ.

ಭಾರತ್ ಬಯೋಟೆಕ್‌ನಲ್ಲಿ ಲಸಿಕಾ ಪ್ರಯೋಗಕ್ಕೊಳಗಾದ ಒಬ್ಬರಲ್ಲಿ ಲಸಿಕೆ ಪಡೆದ ಎರಡು ದಿನಗಳ ನಂತರ 'ನ್ಯೂಮೋನೈಟಿಸ್' ಕಾಣಿಸಿಕೊಂಡಿತ್ತು. ಹಾಗೂ ಆ ವ್ಯಕ್ತಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಬೇಕಾಯಿತು. ಆದರೆ ಲಸಿಕೆಗೂ ಈ ಕಾಯಿಲೆಗೂ ಸಂಬಂಧವಿರಲಿಲ್ಲ.

ಡಿಸೆಂಬರ್ ಒಂದರಂದು ಚೆನ್ನೈನಲ್ಲಿ ಸೀರಂ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯಾದ 'ಕೊವಿಶೀಲ್ಡ್' 40 ವಯಸ್ಸಿನ ವ್ಯಕ್ತಿಯಲ್ಲಿ ಲಸಿಕೆ ಪಡೆದ ಹತ್ತು ದಿನಗಳ ನಂತರ ಮಿದುಳಿನ ಉರಿಊತ ಕಾಣಿಸಿಕೊಂಡು ಅದರ ಆಲೋಚನಾ ಶಕ್ತಿಯಲ್ಲಿ ವ್ಯತ್ಯಾಸ ಕಾಣಿಸಿಕೊಂಡು ಆಸ್ಪತ್ರೆಗೆ ದಾಖಲಾಗುವ ಪರಿಸ್ಥಿತಿ ಉದ್ಭವಿಸಿತ್ತು. ಆದರೆ ಈ ಕಾಯಿಲೆಗೂ ಲಸಿಕೆಗೂ ಸಂಬಂಧವಿಲ್ಲವೆಂದು ಮುಂದಿನ ತನಿಖೆಯಿಂದ ತಿಳಿದು ಬಂದಿತ್ತು.

ಜನ ಸಾಮಾನ್ಯರಲ್ಲಿ 'ಫೈಝರ್' ಲಸಿಕೆಯ ಮೊತ್ತಮೊದಲ ಉಪಯೋಗ ಯು.ಕೆ. (ಯುನೈಟೆಡ್ ಕಿಂಗ್‌ಡಂ) ನಲ್ಲಿ ಡಿಸೆಂಬರ್ ತಿಂಗಳ 8 ನೇ ತಾರಿಖು ಪ್ರಾರಂಭವಾಗಿತ್ತು. ಆದರೆ ಈ ಲಸಿಕೆ ಪಡೆದ ಇಬ್ಬರಲ್ಲಿ ಗಂಭಿರ ಹಂತದ ಅಲರ್ಜಿ ಪ್ರಕ್ರಿಯೆಯನ್ನುಂಟು ಮಾಡಿತ್ತು. ಹಾಗಾಗಿ ಆಹಾರ, ಔಷಧ, ಮತ್ತಿತರ ಯಾವುದೇ, ಅಲರ್ಜಿಯಿಂದ ಬಳಲುವವರಲ್ಲಿ ಈ ಲಸಿಕಾ ಪ್ರಯೋಗ ಸೂಕ್ತವಲ್ಲ ವೆನ್ನುವುದು ತಿಳಿದು ಬಂದಿದೆ.

ಕೊವಿಡ್ ಲಸಿಕೆ ಪಡೆದ ಫಲಾನುಭವಿಗಳು ಈ ಕಾಯಿಲೆ ಹರಡದಂತೆ ತಡೆಗಟ್ಟುವ ಕ್ರಮಗಳನ್ನು ಕೈಗೊಳ್ಳಬೇಕೆ ಎನ್ನುವುದು ಹಲವರ ಪ್ರಶ್ನೆ.

2 ನೇ ಲಸಿಕೆ ಪಡೆದ 14 ದಿನಗಳ ತನಕ ಫಲಾನುಭವಿಯ ದೇಹದಲ್ಲಿ ರೋಗ ನಿರೋಧಕ ಶಕ್ತಿ ಪೂರ್ಣ ಪ್ರಮಾಣದಲ್ಲಿ ಬೆಳೆದಿರುವುದಿಲ್ಲ. ಹಾಗಾಗಿ ಮಾಸ್ಕ್, ದೈಹಿಕ ಅಂತರ, ಕೈ ಶುಚಿಗೊಳಿಸುವ ಕಾರ್ಯದ ಅನುಷ್ಠಾನ ಆ ಕಾಲದಲ್ಲಿ ಅತ್ಯವಶ್ಯಕ.

ಈ ಕಾಯಿಲೆ ಹಾಗೂ ಲಸಿಕೆಗಳ ಉಪಯುಕ್ತತೆಗಳ ಬಗ್ಗೆ ನಮಗಿನ್ನೂ ಪೂರ್ಣ ಪ್ರಮಾಣದ ಮಾಹಿತಿ ದೊರೆತಿಲ್ಲ. ಇಂದಿನ ಮಾಹಿತಿಯಂತೆ ಪೂರ್ಣ ಪ್ರಮಾಣದ ಲಸಿಕೆ ರೋಗಲಕ್ಷಣದಿಂದ ಕೂಡಿದ ಗಂಭೀರ ಕೊವಿಡ್–19 ನ್ನು ತಡೆಗಟ್ಟುತ್ತದೆ. ಆದರೆ ಕೆಲವರಲ್ಲಿ ರೋಗಲಕ್ಷಣ ರಹಿತ ಕೊವಿಡ್ ಲಸಿಕೆ ಪಡೆದ ನಂತರವೂ ಬರಬಹುದು. ಹಾಗೂ ಪರರಿಗೆ ಇವರಿಂದ ಸೋಂಕು ತಗಲುವ ಸಾಧ್ಯತೆ ಇರಬಹುದು. ಹಾಗಾಗಿ ಸಂಪೂರ್ಣ ಮಾಹಿತಿ ಸಿಗುವ ತನಕ ಜಾಗ್ರತೆ ವಹಿಸುವುದು ಉತ್ತಮ. ■

ಕೃಷಿಯನ್ನು ಮುಕ್ತ ಮಾರುಕಟ್ಟೆಯ ಆಟಕ್ಕೆ ಬಿಡುವಂತಿಲ್ಲ

ಪುಟ 13 ರಿಂದ

ಶ್ರೀಮಂತರು ಬಯಸುವ ಬೆಳೆಗಳನ್ನು ಬೆಳೆಯಲು ಕಡಿಮೆ ಸಂಖ್ಯೆಯ ಕೆಲಸಗಾರರು ಸಾಕಾಗುತ್ತಾರೆ (less employment-intensive). ವಾಸ, ಕೈಗಾರಿಕೆ ಇತ್ಯಾದಿ (ರಿಯಲ್ ಎಸ್ಟೇಟ್) ಅಥವಾ ಮನರಂಜನಾ (ಗಾಲ್ಫ್ ಕೋರ್ಸ್, ಇತ್ಯಾದಿ) ಉದ್ದೇಶಗಳಿಗೆ ಎಷ್ಟು ವಿಸ್ತೀರ್ಣದ ಭೂಮಿ ಬಳಕೆಯಾಗುತ್ತದೆಯೊ ಅಷ್ಟು ಜಮೀನಿನಲ್ಲಿ ವಿನಿಯೋಗವಾಗುತ್ತಿದ್ದ ಶ್ರಮ ಅಥವಾ ಬಳಕೆಯಾಗುತ್ತಿದ್ದ ಉದ್ಯೋಗವು ಇಲ್ಲವಾಗುತ್ತದೆ. ಅಂದರೆ, ಪ್ರತಿ ಯೂನಿಟ್ (ಅಥವಾ ಎಕರೆ) ಜಮೀನು ಒದಗಿಸುತ್ತಿದ್ದ ಉದ್ಯೋಗವು ಕಡಿಮೆಯಾಗುತ್ತಾ ಹೋಗುತ್ತದೆ. ಈ ವಿದ್ಯಮಾನವು ನಿರುದ್ಯೋಗ ಮತ್ತು ಸಾಮೂಹಿಕ ಹಸಿವನ್ನು (mass hunger) ಸೃಷ್ಟಿಸುತ್ತದೆ. ಮುಖ್ಯಧಾರೆಯ ಅರ್ಥಶಾಸ್ತ್ರವು ಈ ಸರಳ ಸತ್ಯವನ್ನು ಗುರುತಿಸುವುದಿಲ್ಲ ಏಕೆಂದರೆ ಅದು ಯಾವಾಗಲೂ ಪೂರ್ಣ ಉದ್ಯೋಗದ ಪರಿಸ್ಥಿತಿ ಇದೆ ಎಂದು ಭಾವಿಸುತ್ತದೆ ಮತ್ತು ಈ ಮುಕ್ತ ಮಾರುಕಟ್ಟೆಯ ಪೂರ್ಣ ಉದ್ಯೋಗ ಸಮತೋಲನದಲ್ಲಿ ಪ್ರತಿಯೊಬ್ಬರೂ ಬದುಕಬಹುದು ಎಂದು ಭಾವಿಸುತ್ತದೆ.

ಮೊದಲನೆಯ ಸಮಸ್ಯೆಗೆ (ಅಂದರೆ, ಆಹಾರ ಧಾನ್ಯಗಳ ಸ್ವಾವಲಂಬನೆಯ ನಾಶ) ಬರುವುದಾದರೆ, ದೇಶವು ತನಗೆ ಬೇಕಾಗುವಷ್ಟು ಆಹಾರ ಧಾನ್ಯಗಳನ್ನು ಉತ್ಪಾದಿಸುವುದರ ಬದಲು ಆಮದುಗಳನ್ನು ಅವಲಂಬಿಸಿದರೆ, ಅದು ಎರಡು ಸಮಸ್ಯೆಗಳನ್ನು ನಿಸ್ಸಂಶಯವಾಗಿ ಸೃಷ್ಟಿಸುತ್ತದೆ. ಮೊದಲನೆಯದು, ದೇಶಕ್ಕೆ ಸಾಕಾಗುವಷ್ಟು ಆಹಾರ ಧಾನ್ಯಗಳು ಅಗತ್ಯವಿರುವ ಸಮಯದಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಲಭ್ಯವಾಗದೆ ಇರಬಹುದು. ಭಾರತದಂತಹ ಒಂದು ದೊಡ್ಡ ದೇಶದ ಸಂದರ್ಭದಲ್ಲಿ, ಆಮದು ಅಗತ್ಯವು ಸಹ ಅಷ್ಟೇ ದೊಡ್ಡದಿರುತ್ತದೆ. ಹಾಗಾಗಿ, ಇದೊಂದು ಬೃಹದಾಕಾರದ ಸಮಸ್ಯೆಯಾಗುತ್ತದೆ. ಈ ಸಮಸ್ಯೆಯಲ್ಲಿರುವ ಒಂದು ವ್ಯತ್ಯಾಸವೆಂದರೆ, ಭಾರತದಂತಹ ಒಂದು ದೊಡ್ಡ ಗಾತ್ರದ ದೇಶವು ಬೃಹತ್ ಪ್ರಮಾಣದ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳಲು ಜಾಗತಿಕ ಮಾರುಕಟ್ಟೆಗೆ ಹೋದಾಗ, ಜಾಗತಿಕ ಬೆಲೆಗಳು ಗಗನಕ್ಕೇರುತ್ತವೆ.

ಎರಡನೆಯ ಸಮಸ್ಯೆಯೆಂದರೆ, ಪುಸ್ತಕದ ಬದನೆಕಾಯಿ ತಿನ್ನಲು ಬರುವುದಿಲ್ಲ ಎನ್ನುವ ಹಾಗೆ, ನಿಜ-ಜೀವನದ ಜಾಗತಿಕ ಮಾರುಕಟ್ಟೆಯು, ಪಠ್ಯ ಪುಸ್ತಕಗಳು ಮಾರುಕಟ್ಟೆಯ ಬಗ್ಗೆ ಕೊಡುವ ವರ್ಣನೆಗಿಂತ ಭಿನ್ನವಾಗಿರುತ್ತದೆ. ಪಠ್ಯ ಪುಸ್ತಕದ ಮಾರುಕಟ್ಟೆಯಲ್ಲಿ, ಬಹು ದೊಡ್ಡ ಸಂಖ್ಯೆಯ ಖರೀದಿದಾರರು ಮತ್ತು ಮಾರಾಟಗಾರರು ಇರುತ್ತಾರೆ ಮತ್ತು ಅವರ ನಡುವಿನ ಸಂಬಂಧಗಳು ಸಂಪೂರ್ಣವಾಗಿ ಅವ್ಯೆಯಕ್ತಿಕವಾಗಿರುತ್ತವೆ. ಆದರೆ, ಜಾಗತಿಕ ಆಹಾರ ಮಾರುಕಟ್ಟೆಯಲ್ಲಿ ಭಾರತದಂತಹ ಒಂದು ದೊಡ್ಡ ದೇಶಕ್ಕೆ ಬೇಕಾಗುವಷ್ಟು ಆಹಾರ ಧಾನ್ಯಗಳು ಪದಾರ್ಥಗಳು ಸಿಗುತ್ತವೆಯೇ ಎಂಬುದು ಅಮೆರಿಕ ಮತ್ತು ಐರೋಪ್ಯ ಸರಕಾರಗಳ ಅನುಗ್ರಹವನ್ನು ಅವಲಂಬಿಸುತ್ತದೆ. ಅವರು ಕೆಲವು ನಿರ್ಬಂಧಗಳನ್ನು ವಿಧಿಸಬಹುದು. ಅವರು ತಮ್ಮ ವಿದೇಶಾಂಗ ನೀತಿ-ನಿಲುವನ್ನು ಬೆಂಬಲಿಸುವಂತೆ ಆಮದು ಮಾಡಿಕೊಳ್ಳುವ ದೇಶದ ಕೈ ತಿರುಚಬಹುದು, ಅಥವಾ ತಮ್ಮ ಕಂಪನಿಗಳಿಗೆ ಕೆಲವು ತೆರಿಗೆ ರಿಯಾಯಿತಿಗಳನ್ನು ಒದಗಿಸುವಂತೆ ಒತ್ತಾಯಿಸಬಹುದು. ದೇಶವು ಆಹಾರ ಧಾನ್ಯಗಳನ್ನು ಕೊಳ್ಳಲು ಅಗತ್ಯವಾದ ವಿದೇಶಿ ವಿನಿಮಯವನ್ನು ಹೊಂದಿದ್ದರೂ ಸಹ, ಹೆಚ್ಚುವರಿಯಾಗಿ ಹಣದ ರೂಪದಲ್ಲದೆ ಬೇರೊಂದು ರೀತಿಯ ಬೆಲೆಯನ್ನು ತೆರಬೇಕಾಗುತ್ತದೆ.

ಈ ಎಲ್ಲಾ ಕಾರಣಗಳಿಂದಾಗಿ ಭಾರತದಂತಹ ಒಂದು ದೊಡ್ಡ ದೇಶವು ತಾನು ಆಹಾರ-ಸುರಕ್ಷಿತವೆಂದು ಖಚಿತಪಡಿಸಿಕೊಳ್ಳಬೇಕೆಂದರೆ, ಆಗ ಆ ದೇಶವು ತನ್ನ ಆಹಾರವನ್ನು ತಾನೇ ಬೆಳೆಯಬೇಕಾಗುತ್ತದೆ. ಯಾವ ಬೆಳೆಯನ್ನು ಬೆಳೆಯಬೇಕು ಎಂಬುದನ್ನು, ಅಂದರೆ ಭೂ-ಬಳಕೆಯ ಮಾದರಿಯನ್ನು ಮುಕ್ತ ಮಾರುಕಟ್ಟೆಯ ನಿರ್ಧಾರಕ್ಕೆ ಬಿಡಲಾಗದು. ಏನನ್ನು ಉತ್ಪಾದಿಸಬೇಕು ಎಂಬುದನ್ನು ನಿರ್ಧರಿಸುವಲ್ಲಿ ಸರ್ಕಾರದ ಮಧ್ಯಸ್ಥಿಕೆ ಇರಬೇಕೆಂದು ಸಾಮಾಜಿಕ ವಿವೇಚನೆ ಬಯಸುತ್ತದೆ. ಈ ಉದ್ದೇಶವನ್ನು ಸಾಧಿಸಲು ಇರುವ ಒಂದು ಸ್ಪಷ್ಟವಾದ ಮಾರ್ಗವೆಂದರೆ, ಬೆಲೆಗಳನ್ನು ಮಾರುಕಟ್ಟೆಯೇ ನಿರ್ಧರಿಸುವುದರ ವಿರುದ್ಧವಾಗಿ ಮಾರುಕಟ್ಟೆಯಲ್ಲಿ ಬೆಲೆಗಳು ಎಷ್ಟಿರಬೇಕೆಂಬುದನ್ನು ಸರ್ಕಾರವೇ ನಿರ್ಧರಿಸಬೇಕು.

ಜನರಿಗೆ ಅನ್ನ ದೊರಕಿಸುವ ಸಾಮಾಜಿಕ ಜವಾಬ್ದಾರಿಗೆ ಹತ್ತಿರವಾದ ಮತ್ತು ಮಾರುಕಟ್ಟೆಯ ಏರಿಳಿತದ ಬೆಲೆಗಳಿಗಿಂತ ಒಂದು ಭಿನ್ನವಾದ ಫಲಿತಾಂಶವನ್ನು ಸಾಧಿಸಲು, ಅನೇಕ ಪ್ರಯತ್ನಗಳ ನಂತರ, ಭಾರತದಲ್ಲಿ ರೈತರ ಫಸಲಿಗೆ ಕನಿಷ್ಠ ಬೆಂಬಲ ಬೆಲೆ, ಆ ಧಾನ್ಯಗಳನ್ನು ಸರ್ಕಾರವು ಖರೀದಿಸುವ ಬೆಲೆ ಮತ್ತು ಖರೀದಿಸಿದ ಧಾನ್ಯಗಳನ್ನು ಸಬ್ಸಿಡಿ ದರದಲ್ಲಿ ವಿತರಿಸುವ ಪಡಿತರ ವ್ಯವಸ್ಥೆ, ಇವುಗಳನ್ನು ಜಾರಿಗೆ ತರಲಾಗಿತ್ತು. ಭಾರತದಂತಹ ದೇಶಗಳಲ್ಲಿ ಅಕ್ಷರಶಃ ಊಟದ ಹೊತ್ತಿಗೆ ಅಂಗಡಿಯಿಂದ ತಂದು ಬೇಯಿಸಿ ತಿನ್ನುವಂಥಹ ಪರಿಸ್ಥಿತಿ ಇರಬೇಕೆಂದು ಬಯಸಿದ ಮುಂದುವರಿದ ದೇಶಗಳು ಭಾರತವು ಜಾರಿಗೆ ತಂದ ಈ ಏರ್ಪಾಟನ್ನು ತೀವ್ರವಾಗಿ ವಿರೋಧಿಸಿದವು. ವಿವೇಚನೆಯು ಸ್ವಹಿತಾಸಕ್ತಿಗೆ ಸೀಮಿತಗೊಂಡ ದೇಶೀಯ ಕಾರ್ಪೊರೇಟ್‌ಗಳೂ ಸಹ ಈ ಏರ್ಪಾಟನ್ನು ವಿರೋಧಿಸಿದವು ಮತ್ತು ಸರ್ಕಾರ ಅದನ್ನು ಈಡೇರಿಸಲು ತಡೆಯೊಡ್ಡಿದ್ದವು. ಮೋದಿ ಸರ್ಕಾರವು ಈಗ ತನ್ನ ಇತ್ತೀಚಿನ ಕಾನೂನುಗಳ ಮೂಲಕ ಮಾಡಲು ಪ್ರಯತ್ನಿಸುತ್ತಿರುವುದು, ಕಾರ್ಪೊರೇಟ್‌ಗಳು ಮತ್ತು ಸಾಮ್ರಾಜ್ಯಶಾಹಿಗಳ ಆಣತಿಯ ಮೇರೆಗೆ, ಈ ಏರ್ಪಾಟಿನ ನಾಶವನ್ನು.

ಕೃಷಿ ಮಸೂದೆ ವಿರೋಧಿಸಿ ಅನಿರ್ದಿಷ್ಟ ಧರಣಿ ಸತ್ಯಾಗ್ರಹ........

ಪುಟ 16 ರಿಂದ



ಮಾಜಿ ಜಿಪಂ ಸದಸ್ಯೆ ಸಾವಿತ್ರಮ್ಮ, ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಪ್ರಧಾನ ಕಾರ್ಯದರ್ಶಿ ಯು. ಬಸವರಾಜು, ರಾಜ್ಯ ಸಮಿತಿ ಸದಸ್ಯ ಟಿ. ಯಶವಂತ, ಕರ್ನಾಟಕ ರಾಜ್ಯ ರೈತ ಸಂಘ ರಾಜ್ಯ ಕಾರ್ಯಾಧ್ಯಕ್ಷ ಜಿ.ಎಂ. ವೀರ ಸಂಗಯ್ಯ, ರಾಜ್ಯ ಉಪಾಧ್ಯಕ್ಷ ಜಿ.ಟಿ. ರಾಮಸ್ವಾಮಿ, ಶಿರಸಿ ವಕೀಲ ರವೀಂದ್ರನಾಯಕ್, ಆರ್.ಕೆ.ಎಸ್. ರಾಜ್ಯ ಪ್ರಧಾನ ಕಾರ್ಯದರ್ಶಿ ಶಿವಪ್ರಕಾಶ್, ಕಬ್ಬು ಬೆಳೆಗಾರರ ಸಂಘ ರಾಜ್ಯ ಅದ್ಯಕ್ಷ ಕುರುಬೂರು ಶಾಂತಕುಮಾರ್ ಕರ್ನಾಟಕ ಜನಶಕ್ತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕುಮಾರ್ ಸಮತಲ ಮುಂತಾದವರು ವಹಿಸಿದ್ದಾರೆ.

ಇದುವರೆಗೆ ಹೋರಾಟದ ಕಣದಲ್ಲಿ ಚಳಿ ಮತ್ತಿತರ ಕಾರಣದಿಂದ ಹುತಾತ್ಮರಾದ ರೈತ ಹೋರಾಟಗಾರರಿಗೆ ಒಂದು ನಿಮಿಷ ಮೌನ ಆಚರಿಸಿ ಶ್ರದ್ಧಾಂಜಲಿ ಸಲ್ಲಿಸುವ ಮೂಲಕ ಧರಣಿ ಪ್ರಾರಂಭವಾಯಿತು.

ರೈತ ವಿರೋಧಿ ಕಾಯ್ದೆಗಳ ವಿರುದ್ಧ ದೆಹಲಿಯಲ್ಲಿ ನಡೆಯುತ್ತಿರುವ ಹೋರಾಟ ಬೆಂಬಲಿಸಿ ಬೆಂಗಳೂರಿನ ರಾಜ್ಯ ಮಟ್ಟದ ಧರಣಿ ಮೂರನೇ ದಿನ

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ದಲಿತ ಸಂಘರ್ಷ ಸಮನ್ವಯ ಸಮಿತಿ ಕಾರ್ಯಕರ್ತರು ಭಾಗವಹಿಸಿರುವ ಮೂರನೇ ದಿನದ ಅನಿರ್ದಿಷ್ಟಾವಧಿ ಧರಣಿಯನ್ನು ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್)ದ ರಾಜ್ಯ ಪ್ರಧಾನ ಕಾರ್ಯದರ್ಶಿ ಯು.ಬಸವರಾಜು ಉದ್ಘಾಟಿಸಿದರು.

ಇಡೀ ಕೃಷಿ ಉತ್ಪಾದನೆ ಹಾಗೂ ಆಹಾರ ಮಾರುಕಟ್ಟೆಯ ಮೇಲೆ ಕಾರ್ಪೊರೇಟ್ ಕಂಪನಿಗಳು ಹಿಡಿತ ಸಾಧಿಸಲು ಹುನ್ನಾರ ನಡೆಸಿ ಈ ಕಾಯ್ದೆಗಳನ್ನು ಜಾರಿ ಮಾಡಿಸಿಕೊಂಡಿವೆ. ಇದರಿಂದ ಇಡೀ ದೇಶದಲ್ಲಿ ಈಗಾಗಲೇ ಇರುವ ನಿರುದ್ಯೋಗ-ಬಡತನ-ಹಸಿವು ಮತ್ತಷ್ಟು ಹೆಚ್ಚಲಿದೆ. ದೇಶವನ್ನು ಅರಾಜಕ ಪರಿಸ್ಥಿತಿಗೆ ದೂಡುವ ಇಂತಹ ಕಾಯ್ದೆಗಳನ್ನು ರೈತರ ಬಲಿಷ್ಠ ವಿರೋಧದ ನಡುವೆಯೂ ಸಮರ್ಥಿಸಿಕೊಳ್ಳುತ್ತಿರುವುದು ದುರದೃಷ್ಟಕರ ಎಂದು ಯು.ಬಸವರಾಜು ಅಭಿಪ್ರಾಯಪಟ್ಟರು.

ಇಂದಿನ ಪ್ರತಿಭಟನೆ ನೇತೃತ್ವವನ್ನು ಕರ್ನಾಟಕ ಜನಶಕ್ತಿ ಸಂಘಟನೆಯ ಸಿರಿಮನೆ ನಾಗರಾಜ್, ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ರಾಮಸ್ವಾಮಿ, ರಾಜ್ಯ ಕಾರ್ಯದರ್ಶಿ ರವಿಕಿರಣ್ ಪೂಣಚ್ಚ, ಮುಖಂಡರಾದ ಕೆಂಪೂಗೌಡ, ಹೊಸಕೋಟೆ ಬಸವರಾಜು, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನಿತ್ಯಾನಂದಸ್ವಾಮಿ, ಕರ್ನಾಟಕ ಪ್ರಾಂತ ರೈತ ಸಂಘದ ಟಿ ಯಶವಂತ, ದಲಿತ ಸಂಘರ್ಷ ಸಮನ್ವಯ ಸಮಿತಿ ರಾಜ್ಯ ಸಂಚಾಲಕರಾದ ಗುರುಪ್ರಸಾದ್ ಕೆರಗೋಡು, ಮಾವಳ್ಳಿ ಶಂಕರ್, ವಿ ನಾಗರಾಜ್ ಸಮಾಜವಾದಿ ಸಭಾದ ಆಲಿಬಾಬಾ ಮುಂತಾದವರು ವಹಿಸಿದ್ದರು.

JANASHAKTHI KANNADA VARA PATRIKE December 21-27, 2020 Price: Rs. 10/- Date of Publication: 18 December 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ಕೃಷಿ ಮಸೂದೆ ವಿರೋಧಿಸಿ ಅನಿರ್ಧಿಷ್ಟ ಧರಣಿ ಸತ್ಯಾಗ್ರಹ





ರೈತ ವಿರೋಧಿ ಕೃಷಿ ಕಾಯ್ದೆಗಳ ರದ್ದತಿಗಾಗಿ ಆಗ್ರಹಿಸಿ ದೆಹಲಿಯಲ್ಲಿ ರೈತರು ನಡೆಸುತ್ತಿರುವ ಹೋರಾಟ 22 ನೇ ದಿನಕ್ಕೆ ಕಾಲಿಟ್ಟಿದೆ. ಕೇಂದ್ರ ಸರಕಾರದ ಜೊತೆ ನಡೆದ ಹಲವು ಸುತ್ತಿನ ಮಾತುಕತೆ ವಿಫಲಗೊಂಡ ಹಿನ್ನಲೆಯಲ್ಲಿ ರೈತರು ಹೋರಾಟವನ್ನು ತೀವ್ರಗೊಳಿಸಿದ್ದಾರೆ. ಇಂದು ದೇಶವ್ಯಾಪಿ ನಿರಂತರ ಪ್ರತಿಭನಟೆಗೆ ಕರೆ ನೀಡಿರುವ ಹಿನ್ನಲೆಯಲ್ಲಿ ಇಂದು ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿಯ (ಎಐಕೆಎಸ್ಸಿಸಿ) ನೇತೃತ್ವದಲ್ಲಿ ನಿರಂತರ



ಪ್ರತಿಭಟನೆಗೆ ಚಾಲನೆ ನೀಡಲಾಯಿತು.

ಬೆಂಗಳೂರಿನ ಮೌರ್ಯ ವೃತ್ತದ ಬಳಿ ನಡೆದ ಪ್ರತಿಭಟನೆಗೆ ನಗಾರಿ ಬಾರಿಸುವ ಮೂಲಕ ಚಾಲನೆಯನ್ನು ನೀಡಲಾಯಿತು. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಯು. ಬಸವರಾಜ ಮಾತನಾಡಿ, ಕೃಷಿ ಮಸೂದೆಗಳ ರದ್ದತಿಗಾಗಿ ನವೆಂಬರ್ 26 ರಿಂದ ದೆಹಲಿ ಗಡಿಗಳಲ್ಲಿ ಲಕ್ಷಾಂತರ ರೈತರು ಕೊರೆಯುವ ಚಳಿಯಲ್ಲೂ ಅನಿರ್ದಿಷ್ಟ ಧರಣಿ ನಡೆಸುತ್ತಿದ್ದಾರೆ. ಇದೊಂದು ಐತಿಹಾಸಿಕ ಹೋರಾಟವಾಗಿದೆ. ದೆಹಲಿ ರೈತರ ಮಹಾ ಹೋರಾಟವನ್ನು ಬೆಂಬಲಿಸಿ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲೂ ಅನಿರ್ದಿಷ್ಟ ರೈತ ಧರಣಿ ಯನ್ನು ಗಾಂಧಿ ಪ್ರತಿಮೆ ಬಳಿ ನಡೆಸಲಾಗುತ್ತಿದೆ.

ಮೊದಲ ದಿನದ ಪ್ರತಿಭಟನೆಯಲ್ಲಿ ಐಕ್ಯ ಹೋರಾಟ ಸಂಯೋಜಕ ಡಾ. ಪ್ರಕಾಶ್ ಕಮ್ಮರಡಿ, ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷರಾದ ಕುರುಬೂರು ಶಾಂತಕುಮಾರ್, ಕರ್ನಾಟಕ ಜನಶಕ್ತಿ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕುಮಾರ್ ಸಮತಳ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ, ಜೆಸಿಟಿಯು ನಾಯಕ ಎಲ್ ಕಾಳಪ್ಪ ಜನವಾದಿ ಮಹಿಳಾ ಸಂಘಟನೆ (ಜೆಎಂಎಸ್) ರಾಜ್ಯ ಕಾರ್ಯದರ್ಶಿ ಗೌರಮ್ಮ ಸೇರಿದಂತೆ ಅನೇಕರಿದ್ದರು.

ಕಾರ್ಪೋರೇಟ್ ಕೃಷಿ ಜಾರಿಗಾಗಿ ತಂದಿರುವ ಕೇಂದ್ರ ಸರಕಾರದ ಕೃಷಿ ಕಾಯ್ದೆಗಳು ವಾಪಾಸು ಪಡೆಯ ಬೇಕು. ದೇಶದ ಗ್ರಾಹಕರನ್ನು ಕಾರ್ಪೋರೇಟ್ ಲೂಟಿಗೊಳಪಡಿಸುವ ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆ– 2020 ವಾಪಾಸು ಪಡೆಯ ಬೇಕು. ವಿದ್ಯುತ್ ರಂಗದ ಖಾಸಗೀಕರಣವನ್ನು ಗುರಿಯಾಗಿಟ್ಟುಕೊಂಡು ವಿದ್ಯುಚ್ಛಕ್ತಿ ತಿದ್ದುಪಡಿ ಮಸೂದೆ – 2020 ವಾಪಾಸು ಪಡೆಯ ಬೇಕು. ಕಾರ್ಪೋರೇಟ್ ಕೃಷಿಗೆ ನೆರವು ನೀಡುವ ಕರ್ನಾಟಕ ಸರಕಾರದ ಭೂ ಸುದಾರಣಾ ತಿದ್ದುಪಡಿ ಮಸೂದೆ – 2020, ಏಪಿಎಂಸಿ ತಿದ್ದುಪಡಿ ಕಾಯ್ದೆ – 2020 ಹಾಗೂ ಜಾನುವಾರು ಹತ್ಯೆ ನಿಷೇದ ತಿದ್ದುಪಡಿ ಮಸೂದೆ– 2020 ವಾಪಾಸು ಪಡೆಯಬೇಕು. ಕೇಂದ್ರ ಹಾಗೂ ರಾಜ್ಯ ಸರಕಾರಗಳು ರೈತರನ್ನು ಸಂರಕ್ಷಿಸುವ ಕನಿಷ್ಟ ಬೆಂಬಲ ಖಾತರಿ ಕಾಯ್ದೆಯನ್ನು ರೂಪಿಸಿ ಜಾರಿಗೊಳಿಸಬೇಕು. ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಉಂಟಾಗುವ ನಷ್ಟದ ಹಿನ್ನೆಲೆಯಲ್ಲಿ ಎಲ್ಲ ಕೃಷಿಕರ ಸಾಲ ಮನ್ನಾ ಮಾಡುವ ಮತ್ತು ಬಡ್ಡಿ ರಹಿತ ಅಗತ್ಯ ಸಾಲ ಒದಗಿಸುವ ಸಾರ್ವಜನಿಕ ರಂಗದ ಮೂಲಕ ಒದಗಿಸುವ ಹಾಗೂ ಋಣ ಮುಕ್ತ ಕಾಯ್ದೆ ರೂಪಿಸಬೇಕು. ಎಂಬುದು ರೈತರ ಬೇಡಿಕೆಯಾಗಿದೆ.

ಚಾರಿತ್ರಿಕ ದೆಹಲಿ ರೈತ ಹೋರಾಟ ಬೆಂಬಲಿಸಿ ಬೆಂಗಳೂರಿನ ಎರಡನೇ ದಿನದ ಅನಿರ್ದಿಷ್ಟ ಧರಣಿ –ಹಿರಿಯ ರಂಗಕರ್ಮಿ ಪ್ರಸನ್ನ ಉದ್ಘಾಟನೆ

ದೆಹಲಿಯಲ್ಲಿ ನಡೆಯುತ್ತಿರುವ ರೈತರ ಮಹಾ ಹೋರಾಟ ದೇಶವನ್ನು ಮುನ್ನೆಡೆಸುವ ಮಹತ್ವದ ಹೋರಾಟ. ಇದು ಶ್ರಮ ಸಂಸ್ಕೃತಿಯ ಗ್ರಾಮೀಣ ಬದುಕಿನ ರಕ್ಷಣೆಗಾಗಿ ನಡೆಯುತ್ತಿರುವ ಹೋರಾಟ ಎಂದು ಹಿರಿಯ ರಂಗಕರ್ಮಿ ಸಿ. ಪ್ರಸನ್ನ ಬಣ್ಣಿಸಿದರು. ಬೆಂಗಳೂರಿನ ಮೌರ್ಯ ಸರ್ಕಲ್ ನಲ್ಲಿ ನಡೆಯುತ್ತಿರುವ ಅನಿರ್ದಿಷ್ಟ ವಾದಿ ಎರಡನೇ ದಿನದ ಧರಣಿ ಉದ್ಘಾಟಿಸಿ ಮಾತಾನಾಡಿದರು.

ಇವತ್ತು ಎಲ್ಲೆಡೆ ಕಾಣುತ್ತಿರುವ ಆನಾರೋಗ್ಯ, ಅಸಹನೆ ಗೆ ಮೂಲ ಕಾರಣ ನಮ್ಮನ್ನು ಆಳುತ್ತಿರುವವರ ಕಾರ್ಪೊರೇಟ್ ಸಂಸ್ಕೃತಿ ಪರ ಧೋರಣೆಯಾಗಿದೆ. ಈ ಕಾರಣಕ್ಕಾಗಿ ನಗರಗಳು–ಮಹಾನಗರಗಳು ಬೃಹತ್ ತಿಪ್ಪೆಗುಂಡಿಗಳಾಗಿವೆ. ಸರ್ಕಾರಗಳ ಹೊಸ ಕೃಷಿ ಕಾಯ್ದೆಗಳು ಈ ತಿಪ್ಪೆಗುಂಡಿಗಳನ್ನು ಮತ್ತಷ್ಟು ಬೆಳೆಸುವ ದುರುದ್ದೇಶದ್ದು. ಹಾಗಾಗಿ ವಿನಾಶಕಾರಿ ಕಾರ್ಪೊರೇಟ್ ಸಂಸ್ಕೃತಿ ವಿರುದ್ಧದ ಹೋರಾಟಕ್ಕೆ ಎಲ್ಲರೂ ಕೈ ಜೋಡಿಸಬೇಕು ಎಂದು ಕರೆ ನೀಡಿದರು.

ಕೃಷಿಕರು ಹಾಗೂ ಕೃಷಿ ಕಾರ್ಮಿಕರೇ ನಮ್ಮ ದೇಶದ ನಿಜವಾದ ಜ್ಞಾನಿಗಳು. ಈ ಶ್ರಮ ಸಂಸ್ಕೃತಿಯ ಜ್ಞಾನದ ಋಷಿಗಳಾಗಿರುವ ರೈತರು, ಕರಕುಶಲ ಕರ್ಮಿಗಳು, ಕೃಷಿ ಕೂಲಿಕಾರರು ಯಾವುದೇ ಅಂಜಿಕೆ, ಆತಂಕ, ಕೀಳಿರಮೆ ಇಟ್ಟುಕೊಳ್ಳದೇ ಹೋರಾಟ ಮುಂದುವರೆಸಬೇಕು. ಈ ಹೋರಾಟದಲ್ಲಿ ಪಾಲ್ಗೊಳ್ಳುವುದು ನನಗೂ ಕೂಡ ಹೆಮ್ಮೆ ಎಂದು ತಿಳಿಸಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ರವರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಂದಿರುವ ಕೃಷಿ ಕಾಯ್ದೆಗಳು ಕೂಲಿಕಾರರನ್ನು ನಿರುದ್ಯೋಗಿಯಾಗಿಸಿ ಹಸಿವಿಗೆ ತಳ್ಳುವ ಕಾನೂನುಗಳಾಗಿವೆ. ಈಗಾಗಲೇ 25 ರೈತ ಹೋರಾಟಗಾರರು ಚಳಿ ಮತ್ತಿತರೆ ಕಾರಣದಿಂದ ನಿಧನರಾಗಿದ್ದರು ಮೋದಿ ಸರ್ಕಾರ ರೈತರ ವಿರುದ್ಧ ಹಠ ಸಾಧಿಸುತ್ತಿದೆ. ಇದು ಅತ್ಯಂತ ಅಮಾನವೀಯ ಎಂದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ದ ಕಾರ್ಯಕರ್ತರು ಭಾಗವಹಿಸಿದ್ದ ಈ ಧರಣಿ ನೇತೃತ್ವವನ್ನು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ, ರಾಜ್ಯ ಉಪಾಧ್ಯಕ್ಷ ಎಂ ಪುಟ್ಟಮಾದು,

ಪುಟ 14 ಕ್ಕೆ





JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**